06 August 2026 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಯಶಸ್ಸು ಎಂದರೆ ದುಡ್ಡು ಗಳಿಸುವುದೊಂದೆ ಅಲ್ಲ, ಪ್ರತಿನಿತ್ಯವೂ ಸಂತಸದಿಂದ ಇರುವುದು ಕೂಡ ನಿಜವಾದ ಯಶಸ್ಸು!

-ಸ್ನೇಹಾ ಆನಂದ್

info.varthaman@gmail.com



ತನ್ವೀರ್ ಸೇಠ್ ಸಿಗದ ಸಚಿವ ಸ್ಥಾನ ಹಿನ್ನೆಲೆ ಪ್ರತಿಭಟನಾಕ್ರೋಶ ಪುಟ ಸಂ. 2


ಮುಂದುವರೆದ ನಗರ ಪಾಲಿಕೆಯ ಸ್ವಚ್ಛತಾ ಅಭಿಯಾನ ಪುಟ ಸಂ. 3


ಜಿಲ್ಲೆಯ ಅಭಿವೃದ್ಧಿಗೆ ಶಾಸಕರೊಂದಿಗೆ ಚರ್ಚೆ: ಸಿಎಂ ಪುಟ ಸಂ. 4


9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 244 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಜಲಾಶಯಗಳ ನೀರಿನ ಮಟ್ಟ

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 105.62 ಅಡಿ |
| ಒಳಹರಿವು | 13684 ಕ್ಯುಸೆಕ್ |
| ಹೊರ ಹರಿವು | 2017 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2281.82 ಅಡಿ |
| ಒಳಹರಿವು | 13969 ಕ್ಯುಸೆಕ್ |
| ಹೊರ ಹರಿವು | 4000 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2857.92 ಅಡಿ |
| ಒಳಹರಿವು | 6820 ಕ್ಯುಸೆಕ್ |
| ಹೊರ ಹರಿವು | 4000 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ | 2912.70 ಅಡಿ |
| ಒಳಹರಿವು | 4879 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

# ಈಗ ಖಾತೆಯತ್ತ ಸಚಿವರ ಚಿತ್ತ

## ಸಂಪನ್ಮೂಲ ಭರಿತ ಖಾತೆಗಿರಿಗಾಗಿ ಮತ್ತೊಮ್ಮೆ 'ಸರ್ಕಸ್'

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ವಿಸ್ತರಣೆಯಾದ ನಂತರ ಸಚಿವಗಿರಿ ದೊರೆತವರು ಸಮಾಧಾನ ನಿಟ್ಟುಸಿರು ಬಿಟ್ಟಿದ್ದಾರೆ. ಈಗ 19 ಕಾಂಗ್ರೆಸ್ ಶಾಸಕರು ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಆದರೆ ಈಗ ಎಲ್ಲವೂ ಇನ್ನೂ ಮುಗಿದಿಲ್ಲ. ಇದೀಗ ಎಲ್ಲರ ಗಮನ ಖಾತೆ ಹಂಚಿಕೆಯತ್ತ ನೆಟ್ಟಿದೆ. ಸಂಪನ್ಮೂಲ ಭರಿತ ಖಾತೆಗಿರಿಗಾಗಿ ಪ್ರಯತ್ನ ಆರಂಭವಾಗಿದೆ. ಇದಕ್ಕಾಗಿ ಸಚಿವರು ಎಐಸಿಸಿ ಅಧ್ಯಕ್ಷರು, ಮಾಜಿ ಸಿಎಂ ಸಿದ್ದರಾಮಯ್ಯ, ಸಿಎಂ ಡಿ.ಕೆ ಶಿವಕುಮಾರ್ ಅವರ ಬೆನ್ನು ಬಿದ್ದಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಬೆನ್ನಲ್ಲೇ ಖಾತೆ ಹಂಚಿಕೆ ಕಸರತ್ತು ಆರಂಭವಾಗಿದೆ. ಯಾವ ಸಚಿವರಿಗೆ ಯಾವ ಇಲಾಖೆಯ ಜವಾಬ್ದಾರಿ ನೀಡಲಾಗುತ್ತದೆ ಎಂಬ ಕುತೂಹಲ ರಾಜಕೀಯ ವಲಯದಲ್ಲಿ ಹೆಚ್ಚಾಗಿದೆ.

19 ಸಚಿವರ ಪ್ರಮಾಣವಚನದೊಂದಿಗೆ ಡಿಕೆ ಶಿವಕುಮಾರ್ ಸಂಪುಟದಲ್ಲಿ ಒಟ್ಟು 33 ಸಚಿವರಿದ್ದಾರೆ. ನೂತನ ಸಚಿವರಿಗೆ





ಖಾತೆ ಹಂಚಿಕೆ ಬಗ್ಗೆ ಕೂಡ ಚರ್ಚೆ ನಡೆದಿದೆ. ಯಾರಿಗೆ ಯಾವ ಖಾತೆ ನೀಡಲಾಗುತ್ತದೆ ಎಂ ಕುತೂಹಲ ಇದೆ.

ಅಲ್ಲದೆ, ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿದ್ದವರಿಗೆ ಅದೇ ಹಳೆಯ ಖಾತೆಗಳನ್ನು ನೀಡುವ ಮೂಲಕ ವಿವಾದದಿಂದ ದೂರ ಉಳಿಯಲು ಸಿಎಂ ಡಿಕೆಶಿ ಮುಂದಾಗಿದ್ದಾರೆ ಎನ್ನಲಾಗಿದೆ. ಆದರೆ ಕೆಲವರು ಅದಕ್ಕಿಂತಲೂ ಸಂಪನ್ಮೂಲ ಭರಿತ ಖಾತೆ ಪಡೆಯಲು ಮುಂದಾಗಿದ್ದಾರೆ. ಹೊಸದಾಗಿ ಸಚಿವರಾದವರೂ ಸಹ ಖಾತೆ ಪಡೆಯಲು ಸರ್ಕಸ್ ಆರಂಭಿಸಿದ್ದಾರೆ ಎನ್ನಲಾಗಿದೆ.

### ಮಹಿಳಾ ಕೋಟ ಯಾರಿಗೆ?



**ಬೆಂಗಳೂರು:** ಸಚಿವ ಸಂಪುಟದ 33 ಸ್ಥಾನ ಭರ್ತಿ ಆಗಿದೆ. ಆದರೆ ಮಹಿಳಾ ಕೋಟದಲ್ಲಿ ಒಂದು ಸ್ಥಾನ ಮಾತ್ರ ಬಾಕಿ ಉಳಿದಿದೆ. ಸಚಿವ ಸಂಪುಟದ ಈ 34ನೇ ಸಚಿವರ ಸ್ಥಾನ ಇನ್ನೂ ಖಾಲಿ ಉಳಿದಿದೆ.

ಈ ಒಂದು ಸ್ಥಾನ ಮಹಿಳೆಗೆ ಮೀಸಲು ಎನ್ನಲಾಗಿದ್ದರೂ ಅದರಲ್ಲೂ ಜಾತಿ ಸಮೀಕರಣ, ಬಣ ನಿಷ್ಠೆ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಕ್ಷದೊಳಗಿನ ಪ್ರಭಾವದ ಪರೀಕ್ಷೆಯಾಗಿ ಪರಿಣಮಿಸಿದೆ. ಆದರೆ, ಒಂದು ಸ್ಥಾನಕ್ಕೆ 7 ಮಂದಿ ಮಹಿಳಾ ಶಾಸಕಿಯರು ಪ್ರಯತ್ನಿಸುತ್ತಿದ್ದಾರೆ.

ಅಲ್ಲದೆ, ಖಾಲಿ ಇರುವ ಸಚಿವ ಸ್ಥಾನಕ್ಕೆ ಶಾಸಕ ಶಿವಣ್ಣನವರ್ ಅವರ ಹೆಸರನ್ನು ಸಿದ್ದರಾಮಯ್ಯ ಅವರೇ ಹೈಕಮಾಂಡ್‌ಗೆ ಶಿಫಾರಸು ಮಾಡಿದ್ದಾರೆ ಎನ್ನಲಾಗಿದೆ. ತಮ್ಮ ಹೆಸರು ಸಚಿವ ಸ್ಥಾನಕ್ಕೆ ಪರಿಗಣನೆಯಲ್ಲಿದೆಯೇ ಎಂಬುದನ್ನು ಶಿವಣ್ಣ ಅವರು ಇನ್ನೂ ದೃಢಪಡಿಸಿಲ್ಲ. ಪಟ್ಟಿಯಲ್ಲಿದ್ದರೂ ವಂಚಿತರಾದ ಗಾಯತ್ರಿ ಶಾಂತೇಗೌಡ ಅವರನ್ನು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿ ನೇಮಿಸುವ ಪ್ರಸ್ತಾಪವೂ ಚರ್ಚೆಯಲ್ಲಿದೆ ಎನ್ನಲಾಗಿದೆ.

ಖಾಲಿ ಇರುವ ಸ್ಥಾನ ಕುರುಬ ಸಮುದಾಯದ ಮೀಸಲಾಗಿದ್ದು, ಅದೇ ಸಮುದಾಯಕ್ಕೆ ಕೊಡಬೇಕು ಎಂಬ ಒತ್ತಾಯವಿದೆ. ಆದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಆಕಾಂಕ್ಷಿಗಳೂ ಖಾಲಿ ಇರುವ ಏಕೈಕ ಸಚಿವ ಸ್ಥಾನಕ್ಕಾಗಿ ತಮ್ಮ ಹಕ್ಕು ಮಂಡಿಸುತ್ತಿದ್ದಾರೆ.

ಪುಟ 2ಕ್ಕೆ

### ಇಂಡಿ ಶಾಸಕ ಯೂಟರ್ನ್: ರಾಜೀನಾಮೆ ಪತ್ರ ವಾಪಸ್!

**ವಿಜಯಪುರ:** ಸಚಿವ ಸ್ಥಾನ ಕೈತಪ್ಪಿದ್ದಕ್ಕೆ ಅಸಮಾಧಾನಗೊಂಡು ಶಾಸಕ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಹಿಂಪಡೆದಿದ್ದಾರೆ.

ಕಾಂಗ್ರೆಸ್ ಹಿರಿಯ ಸಚಿವರು, ಶಾಸಕರು ಒತ್ತಡ ಹಾಕಿದ ಹಿನ್ನೆಲೆ ರಾಜೀನಾಮೆ ಪತ್ರ ವಾಪಸ್ ಪಡೆಯುವ ಬಗ್ಗೆ ವಿಧಾನಸಭೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್‌ನಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಬೆಲೆಯಿಲ್ಲ. ಕಳೆದ ಬಾರಿಯೇ ನಿಗಮ ಮಂಡಳಿ ಕೊಡ್ತೀವಿ ಅಂದಿದ್ದರು. ಆದರೆ ನಾನು ಬೇಡ ಅಂದಿದ್ದೆ. ನಾನು ರಾಜೀನಾಮೆ ಕೊಟ್ಟಿದ್ದೀನಿ. ಯಾವುದೇ ಕಾರಣಕ್ಕೂ ನಾನು ವಾಪಸ್ ಪಡೆಯಲ್ಲ. ಯಾವುದೇ ಕಾರಣಕ್ಕೂ ನಾನು ಶಾಸಕನಾಗಿ ಮುಂದುವರೆಯಲ್ಲ ಎಂದು ಕಿಡಿಕಾರಿದ್ದರು.

### ವಾಲ್ಮೀಕಿ ನಿಗಮಕ್ಕೆ ದದ್ದಲ ರಾಜೀನಾಮೆ

**ಬೆಂಗಳೂರು:** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ಶಾಸಕ ಬಸನಗೌಡ ದದ್ದಲ ಬುಧವಾರ ರಾಜೀನಾಮೆ ನೀಡಿದ್ದಾರೆ.

ಮುಖ್ಯಮಂತ್ರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ಸ್ವಇಚ್ಛೆಯಿಂದ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಕೂಡಲೇ ಅಂಗೀಕರಿಸಬೇಕಾಗಿ ಕೋರುತ್ತೇನೆ ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದ ಸಚಿವ ಸಂಪುಟ ವಿಸ್ತರಣೆ ಬೆನ್ನಲ್ಲೇ ಸಚಿವ ಸ್ಥಾನ ಸಿಗಲಿಲ್ಲವೆಂದು ಹಲವು ಶಾಸಕರು ಅಸಮಾಧಾನ ಹೊರಹಾಕಿದ್ದಾರೆ. ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ದದ್ದಲ ಅವರು ಡಿಕೆಶಿ ಸಂಪುಟದಲ್ಲಿ ಅವಕಾಶ ಸಿಗುವ ವಿಶ್ವಾಸದಲ್ಲಿದ್ದರು.

ಪುಟ 2ಕ್ಕೆ

# ಎಚ್‌ಡಿಕೆ ಪರ 'ಗುಬ್ಬಿ ಬ್ಯಾಟಿಂಗ್'

## ಕೆಎಸ್‌ಆರ್‌ಟಿಸಿ ಅಧ್ಯಕ್ಷ ಸ್ಥಾನ ಬಿಡಲ್ಲ: ಶ್ರೀನಿವಾಸ್

**ತುಮಕೂರು:** ನನಗೆ ಸಚಿವ ಸ್ಥಾನ ಸಿಗುವುದೇ ಇಲ್ಲ ಎಂದು ಮನೆಯಲ್ಲೇ ಕುಳಿತಿದ್ದೆ. ಆಗ ಸ್ವತಃ ಎಚ್.ಡಿ.ಕುಮಾರಸ್ವಾಮಿ ಕರೆ ಮಾಡಿ ಸಚಿವ ಸ್ಥಾನ ಕೊಟ್ಟರು ಎಂದು ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಅವರು, ಎಚ್‌ಡಿಕೆ ಪರ ಬ್ಯಾಟ್ ಬೀಸಿದ್ದಾರೆ.



ಮಾಧ್ಯಮಗಳ ಜೊತೆ ಮಾತನಾಡಿದ ಅವರು, ದೇವೇಗೌಡರು ಕುಂಚಿಟಗರ ಕೋಟಾದಲ್ಲಿ ಮತ್ತೊಬ್ಬರಿಗೆ ಸಚಿವ ಸ್ಥಾನ ನೀಡಲು ಯೋಚಿಸಿದ್ದರು. ಆದರೆ, ಕುಮಾರಸ್ವಾಮಿ ತಮ್ಮನ್ನು ಕರೆದು ಸಚಿವರನ್ನಾಗಿ ಮಾಡಿದ್ದರು ಎಂದು ನೆನಪಿಸಿಕೊಂಡರು.

ಇನ್ನು ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ತೀರ್ಮಾನಿಸಿದ್ದೆ. ಆದರೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವತಃ ಕರೆ ಮಾಡಿ ರಾಜೀನಾಮೆ ಕೊಡಬೇಡಿ ಎಂದು ಹೇಳಿದ್ದಾರೆಂದು ಶ್ರೀನಿವಾಸ್ ತಿಳಿಸಿದರು.

ಸಿಎಂ ನಾಲ್ಕೈದು ಬಾರಿ ಕರೆ ಮಾಡಿದ್ದರು. ಸಾಮೂಹಿಕವಾಗಿ ಎಲ್ಲಾ ನಿಗಮ ಮಂಡಳಿಗಳ ಅಧ್ಯಕ್ಷರ ರಾಜೀನಾಮೆ ಪಡೆಯುತ್ತೇವೆ ಎಂದರು. ಆದ್ದರಿಂದ ನಾನು ರಾಜೀನಾಮೆ ನೀಡಿಲ್ಲ ಎಂದರು.

ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಅವರು, 33 ಶೇಕಡಾ ಮಹಿಳಾ ಮೀಸಲಾತಿ ಬಗ್ಗೆ ಮಾತನಾಡುವ ನಾವು, ಮಹಿಳೆಯರಿಗೆ ಸಚಿವ ಸ್ಥಾನ ಕೊಡದೇ ಇದ್ದರೆ ಹೇಗೆ? ಇನ್ನೂ ಕಾಲ ಮಿಂಚಿಲ್ಲ. ಮುಖ್ಯಮಂತ್ರಿ ಅವರ ಬಳಿ ಇರುವ ಒಂದು ಖಾತೆಯನ್ನು ಮಹಿಳೆಯರಿಗೆ ನೀಡಲಿ ಎಂದು ಆಗ್ರಹಿಸಿದರು.

ಕುಮಾರಸ್ವಾಮಿ ಜೊತೆ ಒಂದೇ ಒಂದು ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯ ಆಗಿತ್ತು. ಅದನ್ನು ಬಿಟ್ಟರೆ ಬೇರೆ ಯಾವುದೇ ವೈಮನಸ್ಸಿಲ್ಲ ಎಂದು ಹೇಳುವ ಮೂಲಕ ಮತ್ತೆ ಜೆಡಿಎಸ್ ಬಾಗಿಲು ತಟ್ಟುವ ಬಗ್ಗೆ ಮುನ್ಸೂಚನೆ ನೀಡಿದ್ದಾರೆ. ಎಸ್.ಆರ್. ಶ್ರೀನಿವಾಸ್ ಅವರ ಈ ಹೇಳಿಕೆ ಬಳಿಕ, ಮತ್ತೆ ಜೆಡಿಎಸ್ ಕಡೆ ಮುಖ ಮಾಡುತ್ತಾರಾ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಜೋರಾಗಿದೆ. ಆದರೆ ಇದಕ್ಕೆ ಅವರು ಯಾವುದೇ ಸ್ಪಷ್ಟ ಉತ್ತರ ನೀಡಲಿಲ್ಲ.

### ಡಿಕೆಶಿಗೆ 'ಹಳ್ಳಿಹಕ್ಕಿ' ಜೈ!

**ಮೈಸೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎರಡು ತಿಂಗಳಲ್ಲಿ ರಾಜ್ಯವನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವ ಭರವಸೆ ಹೆಜ್ಜೆಗಳನ್ನು ಇಡುತ್ತಿದ್ದಾರೆ. ಮಹತ್ವದ ನಿರ್ಧಾರಗಳು ಹಾಗೂ ನಡವಳಿಕೆಗಳ ಮೂಲಕ, ಹಲವು ಹಳೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಎಚ್.ವಿಶ್ವನಾಥ್ ಮೆಚ್ಚುಗೆ ವ್ಯಕ್ತಪಡಿಸಿದರು.



ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಧನಾತ್ಮಕವಾಗಿ ನಡೆದುಕೊಂಡಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರನ್ನು ಚರ್ಚೆಗೆ ಆಹ್ವಾನಿಸಿರುವುದು, ಅವರು ಬರಲು ಒಪ್ಪಿರುವುದು ಒಳ್ಳೆಯ ಬೆಳವಣಿಗೆ. ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು ಸ್ವಾಗತಾರ್ಹ. ಸರ್ವ ಪಕ್ಷ ಸಭೆ

# ಪುತ್ರನಿಗಾಗಿ ತನ್ವೀರ್‌ಗೆ ವಂಚನೆ

## ಸಿದ್ದರಾಮಯ್ಯ ವಿರುದ್ಧ ಎಚ್.ವಿಶ್ವನಾಥ್ ವಾಗ್ದಾಳಿ

**ಮೈಸೂರು:** ಹಿರಿಯ ಶಾಸಕ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ಕೈ ತಪ್ಪುವುದರಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಕೈವಾಡವಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ತನ್ವೀರ್ ಗೆ ಸಚಿವ ಸ್ಥಾನ ನೀಡಿದರೇ ತಮ್ಮ ಪುತ್ರ ಯತೀಂದ್ರ ಅವರ ಪ್ರಭಾವ ಕುಗ್ಗುತ್ತದೆಂದು ಸಚಿವ ಸ್ಥಾನ ತಪ್ಪಿಸಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಕರ್ನಾಟಕ ರಾಜ್ಯವನ್ನು ಹಾಳು ಮಾಡಿದ್ದಾರೆ ಎಂದು ಸಿದ್ದರಾಮಯ್ಯ ವಿರುದ್ಧ ವಿಶ್ವನಾಥ್ ಕಿಡಿಕಾರಿದರು.

ಸಚಿವರ ಪ್ರಮಾಣ ವಚನ ಸಮಾರಂಭಕ್ಕೆ ಸಿದ್ದರಾಮಯ್ಯ ಹೋಗಬೇಕಿತ್ತು. ಆದರೆ ದುರಂಹಕಾರದ ನಡೆಯಿಂದ ಸಿದ್ದರಾಮಯ್ಯ ಹೋಗಲಿಲ್ಲ ಎಂದು ವಿಶ್ವನಾಥ್ ಹರಿಹಾಯ್ದರು. ಕಾಂಗ್ರೆಸ್ ಪಕ್ಷದ ತತ್ವ ಸಿದ್ದಾಂತಕ್ಕೆ ಅನುಗುಣವಾಗಿ ಸಂಪುಟವಿದೆ. ಆದರೆ ಹಿರಿಯ ರಾಜಕಾರಣಿ ತನ್ವೀರ್ ಗೆ ಸಚಿವ ಸ್ಥಾನ ಕೊಡಬೇಕಿತ್ತು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ



ವ್ಯವಹರಿಸುವಾಗಲೂ ಡಿ.ಕೆ.ಶಿವಕುಮಾರ್ ಪ್ರಬುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ಕೇಂದ್ರದೊಂದಿಗೆ ಒಳ್ಳೆಯ ಬಾಂಧವ್ಯದಿಂದ ಇರಬೇಕು. ರಾಜ್ಯ ನಿಮ್ಮೊಂದಿಗಿದೆ, ನಮಗೆ ಸಹಕರಿಸಿ ಎಂದು ಪ್ರಧಾನಿ ಅವರನ್ನು ಕೇಳಿಕೊಂಡಿರುವುದೂ ಒಳ್ಳೆಯ ಬೆಳವಣಿಗೆ. ಇದು ಸೌಹಾರ್ದ ವೃದ್ಧಿಸುತ್ತದೆ ಎಂದು ಹೇಳಿದರು.

ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರವನ್ನು, ಪ್ರಧಾನಿಯನ್ನು ಬೈದುಕೊಂಡು ಓಡಾಡುತ್ತಿದ್ದರು. ಪ್ರಧಾನಿ ಕರೆಯುತ್ತಿದ್ದ ಸಭೆಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ, ಇದರಿಂದ ರಾಜ್ಯಕ್ಕೆ ಅನುದಾನ ಬರುತ್ತಿರಲಿಲ್ಲ ಎಂದು ವಿಶ್ವನಾಥ್ ಆರೋಪಿಸಿದರು.

### ರೆಪೊ ದರ ಯಥಾಸ್ಥಿತಿ

**ನವದೆಹಲಿ:** ಯುಎಸ್–ಇರಾನ್ ಯುದ್ಧದ ನಡುವೆಯೂ ಆರ್‌ಬಿಐ ರೆಪೊ ದರವನ್ನು ಶೇ.5.25ರಲ್ಲೇ ಯಥಾಸ್ಥಿತಿ ಕಾಯ್ದುಕೊಂಡಿದೆ.

ಮೂರು ದಿನಗಳ ಹಣಕಾಸು ನೀತಿ ಸಮಿತಿ ಸಭೆಯ ನಂತರ, ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಶೇಕಡಾ 5.25ರಷ್ಟು ಯಥಾಸ್ಥಿತಿಯಲ್ಲಿ ಇರಿಸಿದೆ. ತಟಸ್ಥ ನಿಲುವು ಕಾಯ್ದುಕೊಳ್ಳುವ ನಿರ್ಧಾರವನ್ನು ಸರ್ವಾನುಮತದಿಂದ ತೆಗೆದುಕೊಳ್ಳಲಾಯಿತು. ಆರ್‌ಬಿಐ ಸ್ಟ್ಯಾಂಡಿಂಗ್ ಡೆಪಾಸಿಟ್ ಫೆಸಿಲಿಟಿ (ಎಸ್‌ಡಿಎಫ್) ದರವನ್ನು ಶೇ.5ರಲ್ಲಿಯೇ ಉಳಿಸಿಕೊಂಡಿದೆ. ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ (ಎಂಎಸ್‌ಎಫ್) ದರ ಮತ್ತು ಬ್ಯಾಂಕ್ ದರವನ್ನು ಶೇ.5.5ರಲ್ಲಿಯೇ ಯಥಾಸ್ಥಿತಿಯಲ್ಲಿ ಇರಿಸಿದೆ.

### ಬಸ್‌ನಲ್ಲಿಯೇ ಹೃದಯಾಘಾತ: ಮಾನವೀಯತೆ ಮೆರೆದ ಸಿಬ್ಬಂದಿ

**ತುಮಕೂರು:** ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಗೆ ಹೃದಯಾಘಾತ ಸಂಭವಿಸಿದ ತಕ್ಷಣ ಸಮಯಪ್ರಜ್ಞೆ ಮೆರೆದ ಚಾಲಕ ಹಾಗೂ ಸಿಬ್ಬಂದಿ ಬಸ್ ಅನ್ನು ಸಮೀಪದ ಆಸ್ಪತ್ರೆಗೆ ಕೊಂಡೊಯ್ಯುವ ಮೂಲಕ ಪ್ರಯಾಣಿಕನ ಜೀವ ಉಳಿಸಲು ಪ್ರಯತ್ನಿಸಿದ್ದಾರೆ.

ತುಮಕೂರಿನಿಂದ ಮಧುಗಿರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಗೆ ಮಾರ್ಗ ಮಧ್ಯೆ ಹೃದಯಾಘಾತ ಸಂಭವಿಸಿದೆ. ಈ ಸಂದರ್ಭ ಬಸ್ ಚಾಲಕ ಸಮಯಪ್ರಜ್ಞೆ ಮೆರೆದಿದ್ದಾರೆ. ತಕ್ಷಣವೇ ತುಮಕೂರು–ಮಧುಗಿರಿ ರಸ್ತೆಯಲ್ಲಿರುವ ಆಸ್ಪತ್ರೆಗೆ ಬಸ್ ಅನ್ನು ತಿರುಗಿಸಿದ್ದಾರೆ.

ಸಮೀಪದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮುಖ್ಯ ದ್ವಾರದವರೆಗೂ ಬಸ್ ಅನ್ನು ಕೊಂಡೊಯ್ದ ಚಾಲಕ, ಯಾವುದೇ ವಿಳಂಬವಾಗದಂತೆ ಮಹಿಳೆಯನ್ನು ಇತರ ಪ್ರಯಾಣಿಕರ ಸಹಾಯದೊಂದಿಗೆ ಆಸ್ಪತ್ರೆಗೆ ದಾಖಲಿಸಿದರು.

# ಯುಪಿಐ ಪಾವತಿಗೂ ಶುಲ್ಕ

## ಜನರಿಗೆ ಶಾಕ್ ನೀಡಲು ಕೇಂದ್ರ ಸರ್ಕಾರದ ಸಿದ್ಧತೆ

**ನವದೆಹಲಿ:** 2,000 ರೂ.ಗಿಂತ ಹೆಚ್ಚಿನ ಮೊತ್ತದ ಯುಪಿಐ ಪಾವತಿಗೆ ಶುಲ್ಕ ವಿಧಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ಮಾಡಿದ ಪಾವತಿಗಳನ್ನು ವ್ಯಾಪ್ತಿಯಿಂದ ಹೊರಗಿಟ್ಟು, ವ್ಯಾಪಾರಿ ರಿಯಾಯಿತಿ ದರ ಅಥವಾ 2,000 ರೂ.ಗಿಂತ ಹೆಚ್ಚಿನ ವ್ಯವಹಾರ ಪಾವತಿಗಳ ಮೇಲೆ ಶೇ.0.25ರಿಂದ 0.4ರವರೆಗೆ ಶುಲ್ಕ ವಿಧಿಸಲು ಸರ್ಕಾರ ಅನುಮತಿಸುವ ಸಾಧ್ಯತೆಯಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ತೆರಿಗೆ ಮತ್ತು ಇತರ ಕಾನೂನುಗಳು (ತಿದ್ದುಪಡಿ) ಮಸೂದೆಯು,




ಬ್ಯಾಂಕುಗಳು ಮತ್ತು ಪಾವತಿ ಸೇವಾ ಪೂರೈಕೆದಾರರ ಅಧಿಸೂಚಿತ ಎಲೆಕ್ಟ್ರಾನಿಕ್ ಪಾವತಿ ವಿಧಾನಗಳ ಮೇಲೆ ಎಂಡಿಆರ್ ವಿಧಿಸುವ ನಿರ್ಬಂಧವನ್ನು ತೆಗೆದುಹಾಕಲು ಪ್ರಯತ್ನಿಸಿದೆ. ಈ ಪ್ರಸ್ತಾಪವನ್ನು ಯಾವಾಗ ಜಾರಿಗೆ

### ವಿಮೆ ಇಲ್ಲದ ವಾಹನಕ್ಕೆ ಇಂಧನ ಬೇಡ: ಸುಪ್ರೀಂ

**ನವದೆಹಲಿ:** ದೇಶದಲ್ಲಿ ವಿಮೆ ಇಲ್ಲದೆಯೇ ಹೆಚ್ಚಿನ ಸಂಖ್ಯೆಯ ವಾಹನಗಳು ಸಂಚರಿಸುತ್ತಿವೆ. ವಿಮೆ ಇಲ್ಲದ ವಾಹನಗಳಿಗೆ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ನಿರಾಕರಿಸುವ ಪ್ರಾಯೋಗಿಕ ಯೋಜನೆ ಸಿದ್ಧಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ವಿಮೆ ಇಲ್ಲದೆ ವಾಹನಗಳನ್ನು ಓಡಿಸುವುದರ ಮೇಲೆ ಪ್ರಮುಖ ಕ್ರಮ ಕೈಗೊಳ್ಳಲು ಸುಪ್ರೀಂ ಕೋರ್ಟ್ ಪ್ರಸ್ತಾಪಿಸಿದೆ. ಪೆಟ್ರೋಲ್ ಪಂಪ್‌ಗಳು ಇಂಧನವನ್ನು ಪೂರೈಸುವ ಮೊದಲು ವಾಹನದ ವಿಮೆಯನ್ನು ಪರಿಶೀಲಿಸುವಂತಹ ಪ್ರಾಯೋಗಿಕ ಯೋಜನೆ ಸಿದ್ಧಪಡಿಸುವಂತೆ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಸೂಚಿಸಿದೆ.

# ಖಾತೆ ಹಂಚಿಕೆಗೂ ಹೈಕಮಾಂಡ್ ಕೈ

## ನಾಗೇಂದ್ರ ಸೇರ್ಪಡೆ ನೈತಿಕತೆ ಉಲ್ಲಂಘನೆ: ವಿಜಯೇಂದ್ರ ವಾಗ್ದಾಳಿ

**ಬೆಂಗಳೂರು:** ಸಚಿವರ ಆಯ್ಕೆ ಮಾತ್ರವಲ್ಲ. ಯಾರಿಗೆ ಯಾವ ಖಾತೆ ನೀಡಬೇಕು ಎಂಬುದನ್ನೂ ದೆಹಲಿಯ ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳು ಮತ್ತೆ ಮತ್ತೆ ದೆಹಲಿಗೆ ತೆರಳಿ ಅನುಮೋದನೆ ಪಡೆಯಬೇಕಾದ ಪರಿಸ್ಥಿತಿ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತಾಡಿದ ಅವರು, ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದಲ್ಲಿ ಚಾರ್ಜ್‌ಶೀಟ್ ಸಲ್ಲಿಕೆಯಾಗಿರುವ ಹಾಗೂ ನ್ಯಾಯಾಂಗ ಪ್ರಕ್ರಿಯೆ ಎದುರಿಸುತ್ತಿರುವ ಬಿ.ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿರುವುದನ್ನು ವಿಜಯೇಂದ್ರ ಪ್ರಶ್ನಿಸಿದರು. ಭ್ರಷ್ಟಾಚಾರ ರಹಿತ ಆಡಳಿತದ ಬಗ್ಗೆ ಮಾತನಾಡುವ ಕಾಂಗ್ರೆಸ್ ತನ್ನದೇ ನೈತಿಕತೆಯನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದರು.

ನಾಗೇಂದ್ರ ಅವರ ಮರು ಸೇರ್ಪಡೆಗೆ ಹೈಕಮಾಂಡ್



ಭಯ ಕಾರಣವೇ?

ಸಚಿವ ಸ್ಥಾನ ನೀಡದಿದ್ದರೆ ಕಾಂಗ್ರೆಸ್ ಹೈಕಮಾಂಡ್‌ಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸುವುದಾಗಿ ನಾಗೇಂದ್ರ ಬೆದರಿಕೆ ಹಾಕಿದ ಬಳಿಕವೇ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಈ ಕುರಿತು ಕಾಂಗ್ರೆಸ್ ನಾಯಕರು ಸಾರ್ವಜನಿಕರಿಗೆ

ಪುಟ 2ಕ್ಕೆ

### 'ರೇಟ್ ಫಿಕ್ಸ್' ಆರೋಪಕ್ಕೆ ಪುಷ್ಟಿ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟ ವಿಸ್ತರಣೆ ರಾಜ್ಯದ ಅಭಿವೃದ್ಧಿ, ಜನಹಿತ ಅಥವಾ ಉತ್ತಮ ಆಡಳಿತದ ಉದ್ದೇಶದಿಂದ ನಡೆದಿಲ್ಲ. ಅಧಿಕಾರದ ಹಂಚಿಕೆ, ಹಣಬಲ, ಗುಂಪುಗಾರಿಕೆ ಫಲವಾಗಿ ಸಚಿವ ಸಂಪುಟ ವಿಸ್ತರಣೆ ನಡೆದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತಾಡಿದ ಅವರು, ಸಚಿವ ಸಂಪುಟ ವಿಸ್ತರಣೆ ಕುರಿತು ನಾನು ಆರಂಭದಿಂದಲೂ ರೇಟ್ ಫಿಕ್ಸ್ ಆಗದೆ ಡೇಟ್ ಫಿಕ್ಸ್ ಆಗಲಿಲ್ಲ ಎಂದು ಹೇಳಿದ್ದೆ. ಇಂದು ಕಾಂಗ್ರೆಸ್‌ನ ಹಿರಿಯ ನಾಯಕರು, ಮಾಜಿ ಸಚಿವರು ಮತ್ತು ಶಾಸಕರು ನೀಡಿರುವ ಬಹಿರಂಗ

ಪುಟ 2ಕ್ಕೆ

# ಕೆಎಎಸ್ ಹುದ್ದೆಗೆ 1.5 ಕೋಟಿ!

## ಕೆಪಿಎಸ್‌ಸಿ ಮತ್ತೊಂದು ಕರ್ಮಕಾಂಡ: ದೂರು ದಾಖಲು

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಕೆಎಎಸ್ ಪರೀಕ್ಷೆಯಲ್ಲೂ ಈಗ ಅಕ್ರಮದ ಆರೋಪ ಕೇಳಿಬಂದಿದೆ. 25 ಮಾರ್ಕ್ಸ್‌ಗೆ ಒಂದೂವರೆ ಕೋಟಿ ಹಣಕ್ಕೆ ಡಿಮ್ಯಾಂಡ್ ಮಾಡಿರುವುದು ಬಹಿರಂಗಗೊಂಡಿದೆ.



ವಿಧಾನಸೌಧ ಠಾಣೆಯಲ್ಲಿ ಕೆಎಎಸ್ ಅಕ್ರಮ ವಿಚಾರವಾಗಿ ದೂರು ನೀಡಲಾಗಿದೆ. ಕೆಎಎಸ್ 384 ಹುದ್ದೆಗೆ ಕಾಸು ಕೊಟ್ಟ ಅಭ್ಯರ್ಥಿ ಹೆಸರು ಸಮೇತ ದೂರು ಕೊಡಲಾಗಿದೆ. ಕಾಂತಕುಮಾರ್ ಎಂಬವರು ಒಬ್ಬ ಅಭ್ಯರ್ಥಿ ವಿರುದ್ಧ ದೂರು ದಾಖಲಿಸಿದ್ದಾರೆ. ಈ ಅಭ್ಯರ್ಥಿ ಕೆಪಿಎಸ್ಸಿ ಸದಸ್ಯರೊಬ್ಬರ ಜೊತೆ ಸಂಪರ್ಕದಲ್ಲಿದ್ದ ಎಂದು ಆರೋಪಿಸಿದ್ದಾರೆ. ಪ್ರಾಥಮಿಕ ವಿಚಾರಣೆಗಾಗಿ ಪೊಲೀಸರು ದೂರು ಸ್ವೀಕರಿಸಿದ್ದಾರೆ.

ಸಂದರ್ಶನದಲ್ಲಿ 25 ಮಾರ್ಕ್ಸ್

ಪುಟ 2ಕ್ಕೆ

### ಪಶುವೈದ್ಯಾಧಿಕಾರಿ ಹಗರಣ: ಎಫ್‌ಎಸ್‌ಎಲ್‌ಗೆ ದಾಖಲಾತಿ

**ಬೆಂಗಳೂರು:** ಪಶುವೈದ್ಯಾಧಿಕಾರಿ ನೇಮಕಾತಿ ಹಗರಣ ಪ್ರಕರಣದಲ್ಲಿ ಅಸಲಿ ಸತ್ಯ ತಿಳಿಯಲು ಸಿಐಡಿ ಮುಂದಾಗಿದೆ.

ಕೆಪಿಎಸ್‌ಸಿ ಕಚೇರಿಯ ಮೇಲೆ ಸಿಐಡಿ ದಾಳಿ ಮಾಡಿತ್ತು. ದಾಳಿಯ ಸಂದರ್ಭ ಪರೀಕ್ಷಾ ದಾಖಲಾತಿ, ಓಎಂಆರ್ ಶೀಟ್, ಸಿಸಿಟಿವಿ ವಶಕ್ಕೆ ಪಡೆಯಲಾಗಿತ್ತು. ಓಎಂಆರ್ ಶೀಟ್ ತಿದ್ದುಪಡಿ ಮಾಡಿದ್ದಾರೆಂಬ ಆರೋಪ ಹಿನ್ನೆಲೆಯಲ್ಲಿ ಓಎಂಆರ್ ಶೀಟ್‌ಗಳು ಮತ್ತು ಸಿಸಿಟಿವಿ ದೃಶ್ಯಾವಳಿ ಎಫ್‌ಎಸ್‌ಎಲ್‌ಗೆ ರವಾನೆ ಮಾಡಿದೆ.

ಎಫ್‌ಎಸ್‌ಎಲ್‌ನಲ್ಲಿ ಓಎಂಆರ್ ತಿದ್ದುಪಡಿ ಮತ್ತು ಸಿಸಿಟಿವಿ ಕ್ಯಾಮೆರಾ

ಪುಟ 2ಕ್ಕೆ

## ಮೊದಲ ಪುಟದಿಂದ

### ಖಾತೆ ಹಂಚಿಕೆಗೂ ಹೈಕಮಾಂಡ್ ಕೈ

ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು. ವಿಧಾನಸಭೆಯ ಸ್ಪೀಕರ್, ಉಪಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿ ಹಾಗೂ ಉಪಸಭಾಪತಿ ಹುದ್ದೆಗಳ ಕುರಿತು ಎಐಸಿಸಿ ಲೆಟರ್‌ಹೆಡ್‌ನಲ್ಲಿ ನಿರ್ದೇಶನ ನೀಡಿರುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಇಂತಹ ನಡೆ ವಿಧಾನಮಂಡಲ ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರುವಂತದ್ದು ಎಂದು ವಿಜಯೇಂದ್ರ ಆರೋಪಿಸಿದರು.

### ಯುಪಿಐ ಪಾವತಿಗೂ ಶುಲ್ಕ

ತರಲಾಗುತ್ತದೆ ಎಂಬುದರ ಕುರಿತು ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2,000 ರೂಪಾಯಿ ವರೆಗಿನ ಮೊತ್ತವು ಎಲ್ಲಾ ಯುಪಿಐ ವಹಿವಾಟುಗಳಲ್ಲಿ ಶೇ.5ರಷ್ಟನ್ನು ಒಳಗೊಂಡಿರುತ್ತದೆ. ಆದರೆ, ಆ ವಹಿವಾಟುಗಳು ಒಟ್ಟು ವಹಿವಾಟು ಮೌಲ್ಯದ 65ರಷ್ಟಿದೆ. ಶುಲ್ಕದ ಕ್ರಮ ಹಾಲು, ತರಕಾರಿಗಳು ಮತ್ತು ದಿನಸಿಗಳಂತಹ ದೈನಂದಿನ ಖರೀದಿಗಳು ಅಥವಾ ಆಟೋ ಅಥವಾ ಟ್ಯಾಕ್ಸಿ ಬಳಕೆಗಾಗಿ ಪಾವತಿಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿಲ್ಲ ಎನ್ನಲಾಗಿದೆ.

### ಎಫ್‌ಎಸ್‌ಎಲ್‌ಗೆ ದಾಖಲಾತಿ

ಮರುಬಳಕೆ ಬಗ್ಗೆ ಸ್ಪಷ್ಟನೆ ಪಡೆಯಲು ಈ ತೀರ್ಮಾನ ಮಾಡಿದೆ. ಪ್ರತಿಭಟನೆ ಸಂದರ್ಭದಲ್ಲಿ ಅಭ್ಯರ್ಥಿಗಳ ಆರೋಪದ ಬಗ್ಗೆ ಸ್ಪಷ್ಟನೆಗಾಗಿ ಎಫ್‌ಎಸ್‌ಎಲ್‌ಗೆ ರವಾನೆ ಮಾಡಿದೆ. ದೂರುದಾರ ಮಂಜುನಾಥ್ ಹೇಳಿಕೆ ದಾಖಲಿಸಿರುವ ಸಿಐಡಿ, ಮಂಜುನಾಥ್ ಆರೋಪದ ಮೇಲೆ ಎಲ್ಲಾ ದಾಖಲಾತಿ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ.

### ನಿಗಮಕ್ಕೆ ದದ್ದಲ ರಾಜೀನಾಮೆ

ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಅವರು, ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

### ಡಿಕೆಶಿಗೆ 'ಹಳ್ಳಿಹಕ್ಕಿ' ಜೈ!

ನಡೆಸಿದ್ದು ಮತ್ತು ಆರು ಮಂದಿ ಮಾಜಿ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದ್ದು ಕೂಡ ಸ್ವಾಗತಾರ್ಹ ಎಂದರು. ಕಾವೇರಿ ವಿಷಯದಲ್ಲಿ, ಕನ್ನಡ ಚಳವಳಿ ಹೋರಾಟಗಾರರು ಕರ್ನಾಟಕ ಬಂದ್ ಮಾಡಲು ಮುಂದಾಗಿರುವುದು ಅನವಶ್ಯಕ. ಬಂದ್‌ನಿಂದ ಪ್ರಯೋಜನವೇನೂ ಇಲ್ಲ. ಸೌಹಾರ್ದ ಮಾತುಕತೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಚಳವಳಿಗಾರರು ಸರ್ಕಾರಕ್ಕೆ ಬೆಂಬಲ ನೀಡಬೇಕು. ಯಾವ ಪುರುಷಾರ್ಥಕ್ಕೆ ಬಂದ್ ಮಾಡುತ್ತೀರಾ? ಅದರಿಂದ ಉಪಯೋಗ ಆಗುತ್ತದೆಯೇ? ಬಡ ವ್ಯಾಪಾರಿಗಳಿಗೆ ತೊಂದರೆ ಕೊಡಬೇಡಿ ಎಂದು ಹೇಳಿದರು.

### ಮಾನವೀಯತೆ ಮೆರೆದ ಸಿಬ್ಬಂದಿ

ತುರ್ತು ಚಿಕಿತ್ಸೆಗೆ ಒಳಪಡಿಸಿದ ಪರಿಣಾಮ ಮಹಿಳೆಗೆ ಸಮಯಕ್ಕೆ ಸರಿಯಾಗಿ ವೈದ್ಯಕೀಯ ನೆರವು ದೊರೆಯಿತು. ಚಾಲಕ ಮತ್ತು ನಿರ್ವಾಹಕರ ಸಮಯಪ್ರಜ್ಞೆ ಹಾಗೂ ಮಾನವೀಯ ನಡೆಗೆ ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಚಾಲಕ ಬಸ್‌ನ ಮಾರ್ಗ ಬದಲಿಸಿ ಆಸ್ಪತ್ರೆಗೆ ಕರೆದೊಯ್ದಿರುವುದು ಪ್ರಯಾಣಿಕರ ಸುರಕ್ಷತೆ ಆದ್ಯತೆಯನ್ನು ತೋರಿಸಿದೆ.

### ಮಹಿಳಾ ಕೋಟ ಯಾರಿಗೆ?

ಇದರಿಂದ ಒಬ್ಬರನ್ನು ಆಯ್ಕೆ ಮಾಡುವುದು ಕಾಂಗ್ರೆಸ್ ಹೈಕಮಾಂಡ್‌ಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಎಲ್ಲರಿಗೂ ಏನಾದರೂ ಸಿಗುವಂತೆ ಹಾಗೂ ಜಾತಿ ಸಮತೋಲನದ ಸಂದೇಶವೂ ಹೋಗುವಂತಹ ಕಾಂಗ್ರೆಸ್‌ನ ಸಾಂಪ್ರದಾಯಿಕ ರಾಜಕೀಯ ಪರಿಹಾರ ಎಂದು ವಿಶ್ಲೇಷಿಸಲಾಗುತ್ತಿದೆ.

### 'ರೇಟ್ ಫಿಕ್ಸ್' ಆರೋಪಕ್ಕೆ ಪುಷ್ಟಿ

ಹೇಳಿಕೆಗಳೇ ನನ್ನ ಆರೋಪಕ್ಕೆ ಪುಷ್ಟಿ ನೀಡಿವೆ. ಕಾಂಗ್ರೆಸ್ ಪಕ್ಷದೊಳಗಿನ ಅಸಮಾಧಾನವೇ ಸಚಿವ ಸಂಪುಟ ರಚನೆಯ ಹಿಂದಿನ ವಾಸ್ತವವನ್ನು ಬಯಲಿಗೆಳೆಯುತ್ತಿದೆ ಎಂದು ತಿರುಗೇಟು ನೀಡಿದರು.

ಹಿರಿಯ ಶಾಸಕ ತನ್ವೀರ್ ಸೇಠ್ ಅವರು ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರಿಗೂ ಸಚಿವ ಸ್ಥಾನ ನೀಡಲಾಗಿದೆ ಎಂದು ಆರೋಪಿಸಿದ್ದಾರೆ. ಶಾಸಕ ಎಸ್.ಆರ್.ಶ್ರೀನಿವಾಸ್, ಹಣ ನೀಡಲು ಸಾಧ್ಯವಾಗದ ಕಾರಣ ಸಚಿವ ಸ್ಥಾನ ಸಿಗಲಿಲ್ಲ ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ನಾಯಕರು ವ್ಯಕ್ತಪಡಿಸಿರುವ ಅಸಮಾಧಾನ ಕಾಂಗ್ರೆಸ್‌ನ ಆಂತರಿಕ ಸ್ಥಿತಿಯನ್ನು ಬಯಲಿಗೆ ತಂದಿದೆ ಎಂದು ಹೇಳಿದರು.

ಮಾಜಿ ಸಚಿವ ತಿಮ್ಮಾಪುರ ಅವರು ಕಾಂಗ್ರೆಸ್ ಹೈಕಮಾಂಡ್‌ಗೆ ಹಣ ನೀಡಿದವರಿಗೆ ಹಾಗೂ ಪ್ರಭಾವ ಹೊಂದಿದವರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದೆ ಎಂದು ಬಹಿರಂಗವಾಗಿ ಆರೋಪಿಸಿದ್ದಾರೆ. ಇಂತಹ ಗಂಭೀರ ಆರೋಪದ ಕುರಿತು ಕಾಂಗ್ರೆಸ್ ನಾಯಕರು ರಾಜ್ಯದ ಜನತೆಗೆ ಸ್ಪಷ್ಟನೆ ನೀಡಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುವ ಕಾಂಗ್ರೆಸ್ ಸರ್ಕಾರ, ಸಚಿವ ಸಂಪುಟದಲ್ಲಿ ಒಬ್ಬ ಮಹಿಳೆಗೂ ಅವಕಾಶ ನೀಡಿಲ್ಲ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರದ ಪೈಪೋಟಿ ಮತ್ತು ಹೈಕಮಾಂಡ್‌ನ ರಾಜಕೀಯ ಸಮೀಕರಣಗಳೇ ಸಚಿವ ಸಂಪುಟ ವಿಸ್ತರಣೆಯ ಹಿಂದಿನ ಪ್ರಮುಖ ಕಾರಣಗಳಾಗಿವೆ ಎಂದು ಆರೋಪಿಸಿದರು.

### ಕೆಎಎಸ್ ಹುದ್ದೆಗೆ 1.5 ಕೋಟಿ!

ಕೆಪಿಎಸ್ಸಿ ಸದಸ್ಯರೊಬ್ಬರಿಗೆ ಒಂದೂವರೆ ಕೋಟಿ ನೀಡಲಾಗಿದೆ ಎಂದು ಕಾಂತಕುಮಾರ್ ಆರೋಪಿಸಿದ್ದಾರೆ. ಇದಕ್ಕೆ ಪೂರಕ ಎಂಬಂತೆ ಸಿಡಿಆರ್ ಸಿಕ್ಕಿದೆ. ಎಷ್ಟು ಸಲ ಅಭ್ಯರ್ಥಿ ಹಾಗೂ ಕೆಪಿಎಸ್ಸಿ ಸದಸ್ಯರು ಮಾತನಾಡಿದ್ದಾರೆ ಅನ್ನುವುದು ಸಿಡಿಆರ್‌ನಲ್ಲಿ ದಾಖಲಾಗಿದೆ. ಸಂದರ್ಶನದ ಅಭ್ಯರ್ಥಿಗಳ ಜೊತೆಗೆ ಸದಸ್ಯರು ಹೇಗೆ ಮಾತುಕತೆ ಮಾಡ್ತಾರೆ ಎಂಬ ಪ್ರಶ್ನೆ ವ್ಯಕ್ತವಾಗಿದೆ. ಎರಡು ತಿಂಗಳ ಹಿಂದೆ ನಡೆದಿದ್ದ ಸಂದರ್ಶನದಲ್ಲಿ ನಾಲ್ಕು ಜನ ಪ್ಯಾನಲ್‌ನಲ್ಲಿ ಇದ್ದರು. ಅವರ ಪೈಕಿ ಓರ್ವ ಸದಸ್ಯೆಯಿಂದ ಕೋಟಿ ಕೋಟಿ ಹಣಕ್ಕೆ ಡಿಮ್ಯಾಂಡ್ ಮಾಡಲಾಗಿತ್ತು ಎಂದು ಆರೋಪಿಸಲಾಗಿದೆ.

## ಪ್ರಚಾರಕ್ಕಿಂತ ಅಭಿವೃದ್ಧಿಗೆ ಆದ್ಯತೆ ನೀಡಿ

ಗುಂಡ್ಲುಪೇಟೆ, :- ಪಿಎಲ್‌ಡಿ ಬ್ಯಾಂಕ್ ಚುನಾವಣೆಯ ಬಳಿಕ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿರುವ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿರುವ ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್,



"ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದಕ್ಕಿಂತ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು" ಎಂದು ಆಗ್ರಹಿಸಿದರು.

ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕುರಿತು ಜನರಿಗೆ ಸ್ಪಷ್ಟ ಮಾಹಿತಿ ನೀಡಬೇಕಿದ್ದು, ಪ್ರಸ್ತುತ ತಾಲ್ಲೂಕಿನ ಬಹುತೇಕ ಕೆರೆಗಳು ಖಾಲಿ ಇರುವುದೇ ವಾಸ್ತವ ಎಂದು ಅವರು ಆರೋಪಿಸಿದರು. ಸಾಮಾಜಿಕ ಜಾಲತಾಣದ ಪೋಸ್ಟ್‌ಗಳಿಂದ ನೆಲಮಟ್ಟದ ಪರಿಸ್ಥಿತಿ ಬದಲಾಗುವುದಿಲ್ಲ. ಜನರ ನಿರೀಕ್ಷೆ ಪ್ರಚಾರವಲ್ಲ, ಶಾಶ್ವತ ಅಭಿವೃದ್ಧಿ ಹಾಗೂ ಕೆರೆಗಳಿಗೆ ನೀರು ಹರಿಸುವಂತಹ ಪರಿಣಾಮಕಾರಿ ಕೆಲಸಗಳನ್ನು ನಿರೀಕ್ಷಿಸುತ್ತಿದ್ದಾರೆ ಎಂದು ಹೇಳಿದರು.

ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಮತದಾರರು ತಮ್ಮ ಪ್ರಜಾಪ್ರಭುತ್ವದ ಹಕ್ಕನ್ನು ಚಲಾಯಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಆ ಜನಾದೇಶವನ್ನು ಗೌರವಿಸಬೇಕು. ಆರೋಪ-ಪ್ರತ್ಯಾರೋಪಗಳಲ್ಲಿ ತೊಡಗುವುದಕ್ಕಿಂತ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಿದರೆ ತಾಲ್ಲೂಕಿನ ಜನರು ಸ್ವಾಗತಿಸುತ್ತಾರೆ ಎಂದು ನಿರಂಜನ್ ಕುಮಾರ್ ತಿಳಿಸಿದರು. ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕಿನ ಯಾವುದೇ ಕೆರೆಗಳಿಗೆ ನೀರು ತುಂಬಿಸಿಲ್ಲ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ಶೂನ್ಯ ಸಾಧನೆ ನಡೆದಿದೆ ಎಂದು ಅವರು ಆರೋಪಿಸಿದರು.

"ಪ್ರಚಾರಕ್ಕಿಂತ ಅಭಿವೃದ್ಧಿ ಮುಖ್ಯ, ಪೋಸ್ಟರ್‌ಗಳಿಗಿಂತ ಫಲಿತಾಂಶ ಮುಖ್ಯ" ಎಂದು ಸಿ.ಎಸ್. ನಿರಂಜನ್ ಕುಮಾರ್ ತಮ್ಮ ಹೇಳಿಕೆಯಲ್ಲಿ ಒತ್ತಾಯಿಸಿದರು.

## ಯೋಜನೆಯಲ್ಲೂ ಎಐ ಬಳಸಿ

ಮೈಸೂರು: ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯದ ವಿವಿಧ ಯೋಜನೆಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಅಳವಡಿಸುವ ಕುರಿತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರಶ್ನಿಸಿದರು.

ಎಐ ಬಳಕೆಯ ಉದ್ದೇಶಗಳು, ಜಾರಿಗೆ ತರಲಿರುವ ಯೋಜನೆಗಳು, ವೈಯಕ್ತಿಕ ಮಾಹಿತಿಯ ಸುರಕ್ಷತೆ, ತಾರತಮ್ಯ ತಡೆಗಟ್ಟುವ ಕ್ರಮಗಳು ಹಾಗೂ ಸ್ವತಂತ್ರ ಮೌಲ್ಯ ಮಾಪನ ಮತ್ತು ಪರಿಶೀಲನೆ ಕುರಿತ ಮಾಹಿತಿಯನ್ನು ಸರ್ಕಾರದಿಂದ ಕೋರಿದ್ದರು. ಇದಕ್ಕೆ ಉತ್ತರಿಸಿದ ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ದೇಶದ ಎಐ ಮಿಷನ್‌ನ ವ್ಯಾಪ್ತಿಯಲ್ಲಿ ದೇಶೀಯ ಕೃತಕ ಬುದ್ಧಿಮತ್ತೆ ಸಂಸ್ಥೆಗಳ ಸಹಯೋಗದೊಂದಿಗೆ ಡಿಜಿಟಲ್ ಆಡಳಿತವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಎಐ ಆಧಾರಿತ ತಂತ್ರಜ್ಞಾನಗಳ ಬಳಕೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದೆ. ಬಹುಭಾಷಾ ಎಐ ಚಾಟ್‌ಬಾಟ್‌ಗಳು, ವರ್ಚುವಲ್ ಸಹಾಯಕ ವ್ಯವಸ್ಥೆಗಳು ಹಾಗೂ ಹಜ್ ಸುವಿಧಾ ಆಪ್ ಸೇರಿದಂತೆ ನಾಗರಿಕ ಸೇವೆಗಳನ್ನು ಮತ್ತಷ್ಟು ಸುಲಭಗೊಳಿಸುವ ಡಿಜಿಟಲ್ ವೇದಿಕೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದೆ.



ಭಾರತ ಎಐ ಮಿಷನ್ ದೇಶದಲ್ಲಿ ಸುರಕ್ಷಿತ, ಸಮಗ್ರ ಹಾಗೂ ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆ ಪರಿಸರ ನಿರ್ಮಾಣದ ಉದ್ದೇಶ ಹೊಂದಿದ್ದು, ಕಂಪ್ಯೂಟ್ ಮೂಲಸೌಕರ್ಯ, ಫೌಂಡೇಶನ್ ಮಾದರಿಗಳು, ಅಪ್ಲಿಕೇಶನ್ ಅಭಿವೃದ್ಧಿ, ಎಐ ಡೇಟಾಸೆಟ್‌ಗಳು, ಕೌಶಲ್ಯಾಭಿವೃದ್ಧಿ, ಸ್ಟಾರ್ಟ್‌ಅಪ್ ಉತ್ತೇಜನ ಹಾಗೂ ಸೇಫ್ ಮತ್ತು ಟ್ರಸ್ಟ್ ಎಐ ಸೇರಿ ಏಳು ಪ್ರಮುಖ ಅಂಶಗಳನ್ನು ಒಳಗೊಂಡಿದೆ ಎಂದು ಸಚಿವಾಲಯ ತಿಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್, "ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆಯು ಸರ್ಕಾರದ ಸೇವೆಗಳನ್ನು ಇನ್ನಷ್ಟು ಪಾರದರ್ಶಕ, ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿಸಲು ಸಹಕಾರಿಯಾಗಲಿದೆ. ತಂತ್ರಜ್ಞಾನ ಅಭಿವೃದ್ಧಿಯೊಂದಿಗೆ ನಾಗರಿಕರ ಹಕ್ಕುಗಳು ಮತ್ತು ವೈಯಕ್ತಿಕ ಮಾಹಿತಿಯ ಸುರಕ್ಷತೆಯೂ ಸಮಾನವಾಗಿ ಕಾಪಾಡಲ್ಪಡುವುದು ಮುಖ್ಯವಾಗಿದೆ," ಎಂದು ಹೇಳಿದರು.

# ಮುಂದುವರಿದ ಪ್ರತಿಭಟನೆ

## ತನ್ವೀರ್ ಸೇಠ್ ಸಿಗದ ಸಚಿವ ಸ್ಥಾನ ಹಿನ್ನೆಲೆ ಪ್ರತಿಭಟನಾಕ್ರೋಶ

ಮೈಸೂರು: ಶಾಸಕ ತನ್ವಿರ್ ಸೇಠ್ ಗೆ ತಪ್ಪಿದ ಸಚಿವ ಸ್ಥಾನ ಹಿನ್ನೆಲೆ ಕಳೆದ ಎರಡು ದಿನಗಳಿಂದ ಬೆಂಬಲಿಗರಿಂದ ಸರಣಿ ಪ್ರತಿಭಟನಾಕ್ರೋಶ ಮುಂದುವರೆದಿದೆ.

ಕರ್ನಾಟಕ ಕ್ರಾಂತಿ ಸೇನೆ ವತಿಯಿಂದ ನಗರದ ಅಲ್ ಬದರ್ ಸರ್ಕಲ್ ಬಳಿ ಪ್ರತಿಭಟಿಸಿ ಶಾಸಕ ತನ್ವಿರ್ ಸೇಠ್ ಗೆ ಸಂಪುಟದಲ್ಲಿ ಸ್ಥಾನ ಕೊಡಲೇಬೇಕು ಎಂದು ಆಗ್ರಹಿಸಿದರು. ಕರ್ನಾಟಕ ಕ್ರಾಂತಿ ಸೇನೆ ಅಧ್ಯಕ್ಷ ಎಂ.ಸಿ.ಬಾಬು ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಕಳೆದ ಮೂರ್ನಾಲ್ಕು ದಶಕಗಳಿಂದ ನಿಷ್ಠಾವಂತರಾಗಿ ದುಡಿದ ತನ್ವಿರ್ ಸೇಠ್ ಅವರಿಗೆ ಸಚಿವ ಸ್ಥಾನ ನೀಡದೇ ಅನ್ಯಾಯ ಮಾಡಿದ್ದಾರೆ. ಮೈಸೂರು ಪ್ರಾಂತ್ಯಕ್ಕೆ ಮುಸ್ಲಿಂ ಸಮುದಾಯದ ಒಬ್ಬ ಪ್ರಶ್ನಾತೀತ ನಾಯಕರಾಗಿದ್ದ ತನ್ವೀರ್ ಅವರಿಗೆ ಸಚಿವ ಸ್ಥಾನ ಕೊಡದೆ ಕಡೆಗಣಿಸಿರುವುದು ಖಂಡನೀಯ.

ಮೊದಲ ಅವಧಿಯಲ್ಲೇ ಅವರಿಗೆ ಸಚಿವ ಸ್ಥಾನ ಕೈ ತಪ್ಪಿತ್ತು ಈಗಲಾದರೂ ಸಿಕ್ಕೇ ಸಿಗುವ ಅಛಲ ವಿಶ್ವಾಸ ಇಟ್ಟುಕೊಂಡಿದ್ದರು. ಅವರ ಆತ್ಮವಿಶ್ವಾಸಕ್ಕೆ ಕಾಂಗ್ರೆಸ್ ಹೈಕಮಾಂಡ್, ನಾಯಕರು ತಣ್ಣೀರೆರಚಿದ್ದಾರೆ. ಲಿಸ್ಟ್ ನಲ್ಲಿ ಅವರ ಹೆಸರಿತ್ತು. ಆದ್ರೆ, ಕೊನೆ ಘಳಿಗೆಯಲ್ಲಿ ಅವರ ಹೆಸರನ್ನು ತೆಗೆದು ಹಾಕಿರುವುದು ಅವರ ಬೆಂಬಲಿಗರಿಗೆ ಮತ್ತು ಎನ್ ಆರ್ ಕ್ಷೇತ್ರದ ಕಾರ್ಯಕರ್ತರ ಭಾವನೆಗಳಿಗೆ ಧಕ್ಕೆಯಾಗಿದೆ ಎಂದರು. ಸೇನೆ ಉಪಾಧ್ಯಕ್ಷ ಸಯ್ಯದ್ ಮಜೀದ್, ಪ್ರಧಾನ ಕಾರ್ಯದರ್ಶಿ ಅಕ್ಬರ್ ಖಾನ್, ಎನ್.ಆರ್. ಕ್ಷೇತ್ರದ ಆಕಾಂಕ್ಷಿ ಚಾಂದೆ ಷರೀಫ್ ಇನ್ನಿತರರು ಉಪಸ್ಥಿತರಿದ್ದರು.



### ಸಿಗದ ಸ್ಥಾನ: ಪರ್ಯಾಯ ರಾಜಕೀಯಕ್ಕೆ ಸಿದ್ಧತೆ

ಮೈಸೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆ ವೇಳೆ ಡಾ.ಎಚ್.ಸಿ. ಮಹದೇವಪ್ಪನವರಂತಹ ಹಿರಿಯ ರಾಜಕಾರಣಿಗಳನ್ನು ಕಡೆಗಣಿಸಲಾಗುತ್ತಿದೆ. ಕಾಂಗ್ರೆಸ್‌ನಲ್ಲಿ ದಲಿತರ ದಮನ ನಡೆದಿದೆ. ಹೀಗಾಗಿ ಪರ್ಯಾಯ ರಾಜಕಾರಣ ಆರಂಭಿಸುವ ಕುರಿತು ಶೀಘ್ರದಲ್ಲೇ ದಲಿತ, ಪ್ರಗತಿಪರ ಹಾಗೂ ಸಮಾನ ಮನಸ್ಕರ ಸಭೆ ಕರೆದು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಮಾಜಿ ಮೇಯರ್ ಪುರುಷೋತ್ತಮ್ ಸೇರಿ ದಲಿತ ಮುಖಂಡರು ಎಚ್ಚರಿಸಿದರು.

ನಗರದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಪುರುಷೋತ್ತಮ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಿದ್ದರೂ ಕಾಂಗ್ರೆಸ್ ಈಗಲೂ ಮುಖಂಡರಿಂದ ಜೀತ ಪದ್ಧತಿ ಬಯಸುತ್ತಿರುವುದು ಬೇಸರದ ಸಂಗತಿಯಾಗಿದೆ. ಸಚಿವ ಸಂಪುಟಕ್ಕೆ ಸೇರ್ಪಡೆ ಆಗಿರುವವರ ಬಗ್ಗೆ ತಮ್ಮ ಅಸಮಾಧಾನವಿಲ್ಲ. ಆದರೆ ಹಿರಿಯ ರಾಜಕಾರಣಿ ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಕಡೆಗಣಿಸಿರುವುದು ಬೇಸರದ ಸಂಗತಿಯಾಗಿದೆ. ದಲಿತ ಸಿಎಂ ವಿಷಯ ಬಂದಾಗಲೂ ಒಡೆದು ಆಳುವ ನೀತಿ ಅನುಸರಿಸಲಾಗುತ್ತಿದೆ. ಇದಲ್ಲದೆ ಸಚಿವ ಸ್ಥಾನ ನೀಡುವಾಗಲೂ ಇದೇ ಧೋರಣೆ ತಾಳುತ್ತಿರುವುದರಿಂದಾಗಿ ದಲಿತ ಹಾಗೂ ಪ್ರಗತಿಪರರು ಕಠಿಣ ನಿರ್ಧಾರ ತಾಳಬೇಕಾದ




ಅನಿವಾರ್ಯ ಪರಿಸ್ಥಿತಿ ಎದುರಾಗಿದೆ ಎಂದರು.

ಸಚಿವ ಸ್ಥಾನದ ವಿಷಯ ಬಂದಾಗ ಇತರೆ ಸಮುದಾಯದವರು, ಸ್ವಾಮೀಜಿಗಳು ಧ್ವನಿಯೆತ್ತುತ್ತಾರೆ. ಆದರೆ ದಲಿತ ಸಮುದಾಯದವರ ಕೂಗು ಕೇಳಿಬಂದಾಗ ಅವರನ್ನು ದಮನ ಮಾಡಲಾಗುತ್ತಿದೆ. ಇದನ್ನು ಇನ್ನಷ್ಟು ಕಾಲ ಸಹಿಸಿಕೊಂಡಿರಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷ ಜವಾಬ್ದಾರಿಯುತವಾಗಿ ಆಡಳಿತ ನಡೆಸುತ್ತಿದೆ ಎಂಬ ಕಾರಣದಿಂದಾಗಿ ದಲಿತರು ಆ ಪಕ್ಷವನ್ನು ಸದಾ ಬೆಂಬಲಿಸುತ್ತ ಬಂದಿದ್ದಾರೆ. ಆದರೆ ಪಕ್ಷವು ಕೇವಲ ಮತ ಬ್ಯಾಂಕ್‌ಗಾಗಿ ಮಾತ್ರ ಇವರನ್ನು ಬಳಸಿಕೊಳ್ಳುತ್ತಿದೆ ಎಂದು ಕಿಡಿಕಾರಿದರು. ಇದಲ್ಲದೆ, ಪಕ್ಷದ ದಲಿತ ಮುಖಂಡರು ಸಹಾ ಸ್ವಾಭಿಮಾನದ ರಾಜಕಾರಣ ಮಾಡಬೇಕು, ದೆಹಲಿಯಲ್ಲಿಯೂ ಧ್ವನಿಯೆತ್ತಬೇಕು ಎಂದು ಆಗ್ರಹಿಸಿದರು. ಪುಟ್ಟರಾಜು, ಸೋಮಯ್ಯ ಮಲೆಯೂರು, ಮಹೇಶ್, ರವಿ ಹಾಜರಿದ್ದರು.

### ಛಾಯಾಗ್ರಾಹಕ ಜಗದೀಶ್ ನಿಧನ

ಮೈಸೂರು: ನಗರದ ವಿವಿ ಮೊಹಲ್ಲಾ ನಿವಾಸಿ, ದಿ:ಮೀಸೆ ರಾಮಣ್ಣ ಅವರ ಪುತ್ರ, ಛಾಯಾಗ್ರಾಹಕ ಜಗದೀಶ್.ಆರ್.(51) ಅವರು ಅನಾರೋಗ್ಯದಿಂದ



ಮಂಗಳವಾರ ತಡರಾತ್ರಿ ನಿಧನರಾದರು. ಮೃತರಿಗೆ ಪತ್ನಿ ವೀಣಾ.ಎಸ್, ಪುತ್ರಿಯರಾದ ಲಿಪಿಕಾ ಮತ್ತು ಪೂರ್ವಿಕ ಇದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನಗರದ ಗೋಕುಲಂ ಸ್ಮಶಾನದಲ್ಲಿ ಬಂಧು -ಬಳಗ ಹಾಗೂ ಸ್ನೇಹಿತರ ಸಮ್ಮುಖದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಸಿದ್ದರಾಮಯ್ಯ ವಿರುದ್ಧ ಸತ್ಯಕ್ಕೆ ದೂರವಾದ ಆರೋಪ: ಭಾಸ್ಕರ್

ಮೈಸೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರದಲ್ಲಿ ಹಿರಿಯ ರಾಜಕಾರಣಿ ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ಸಿಗದಿರುವುದಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣರೆಂಬ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಭಿಪ್ರಾಯಪಟ್ಟರು.

ಮಹದೇವಪ್ಪರವರಿಗೆ ಸಚಿವ ಸ್ಥಾನ ಕೊಡಿಸಲು ಸಿದ್ದರಾಮಯ್ಯ ಶತಪ್ರಯತ್ನ ನಡೆಸಿದ್ದಾರೆ. ಹೈಕಮಾಂಡ್ ತೀರ್ಮಾನ, ನೂತನ ಸರ್ಕಾರದ ಲೆಕ್ಕಾಚಾರಗಳಿಂದ ಮಹದೇವಪ್ಪಗೆ ಸಚಿವ ಸ್ಥಾನ ತಪ್ಪಿದೆ. ಅದನ್ನು ಮಹದೇವಪ್ಪ ಸಕಾರಾತ್ಮಕವಾಗಿ ಸ್ವೀಕರಿಸಿ ಪಕ್ಷ ನಿಷ್ಠೆ ಪ್ರದರ್ಶಿಸಿದ್ದಾರೆ. ಈ ವಿಚಾರವಾಗಿ ಸಿದ್ದರಾಮಯ್ಯರನ್ನು ಗುರಿಯಾಗಿಸಿ ಮುಖಂಡರ ಒಡಕಿನ ಮಾತು ಸಂವಿಧಾನದ ಆಶಯಗಳಿಗೆ ಹಿನ್ನೆಡೆಯನ್ನುಂಟು ಮಾಡುತ್ತದೆ ಎಂದು ಹೇಳಿದರು. ಸುದೀರ್ಘ ಅವಧಿಗೆ ರಾಜಕಾರಣ ಮಾಡಿರುವ ಸಿದ್ದರಾಮಯ್ಯ ಮತ್ತು ಮಹದೇವಪ್ಪ ನಾಡಿಗೆ ಅಮೂಲ್ಯವಾದ ಕೊಡುಗೆ ಕೊಟ್ಟಿದ್ದಾರೆ. ಸಂವಿಧಾನ, ಸೈದ್ಧಾಂತಿಕವಾಗಿ ರಾಜೀ ಇಲ್ಲದೇ ಕೋಮುವಾದಿಗಳ ವಿರುದ್ಧ ರಾಜಕಾರಣ ಮಾಡಿದ್ದಾರೆ. ಇವರಿಬ್ಬರ ನಡುವೆ ಸಚಿವ ಸ್ಥಾನದ ಕಾರಣಕ್ಕೆ ಮನಸ್ತಾಪವನ್ನು ಹೆಚ್ಚಿಸುವ ಬೆಳವಣಿಗೆಗಳು ಅಪಾಯಕಾರಿ ಎಂದು ತಿಳಿಸಿದ್ದಾರೆ.

## ಅತಿಥಿ ಉಪನ್ಯಾಸಕರ ಸಮಸ್ಯೆ ಬಗೆಹರಿಸಲು ಸರ್ಕಾರ ಮುಂದಾಗಲಿ

ಗುಂಡ್ಲುಪೇಟೆ, : -ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಕಲ್ಪಿಸಿ, ಗೌರವಯುತ ವೇತನ ಹೆಚ್ಚಳ ಮಾಡಬೇಕು ಎಂದು ರಾಜ್ಯ ಅತಿಥಿ ಉಪನ್ಯಾಸಕರ ಸಂಘಟನೆಯ ಕೋರ್ ಕಮಿಟಿ ಸದಸ್ಯ ಹಾಗೂ ಚಾಮರಾಜನಗರ ಜಿಲ್ಲಾ ಅಧ್ಯಕ್ಷ ರಾಜೇಂದ್ರ ಪ್ರಸಾದ್



ಕಿಲಗೆರೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರು ಕಾಯಂ ಉಪನ್ಯಾಸಕರಷ್ಟೇ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಬೋಧನೆ, ಘಟಕ ಪರೀಕ್ಷೆಗಳ ನಿರ್ವಹಣೆ, ಮೌಲ್ಯಮಾಪನ ಸೇರಿದಂತೆ ಕಾಲೇಜಿನ ಎಲ್ಲಾ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರೂ, ಅವರಿಗೆ ಸೂಕ್ತ ಸೇವಾ ಭದ್ರತೆ ಹಾಗೂ ನ್ಯಾಯಸಮ್ಮತ ವೇತನ ದೊರೆಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸತತ ಹಲವು ವರ್ಷಗಳಿಂದ ವಿವಿಧ ಸರ್ಕಾರಗಳು ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಂಡರೂ ಅವರ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಂಡಿಲ್ಲ. ಇದರಿಂದ ಸಾವಿರಾರು ಅತಿಥಿ ಉಪನ್ಯಾಸಕರು ಅನಿಶ್ಚಿತ ಭವಿಷ್ಯದ ನಡುವೆ ಸೇವೆ ಸಲ್ಲಿಸುವಂತಾಗಿದೆ ಎಂದು ಹೇಳಿದರು.

## ಮಹದೇವಪ್ರಸಾದ್‌ರಿಂದ ಜಿಲ್ಲೆಯ ಅಭಿವೃದ್ಧಿಗೆ ಒತ್ತು

### ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬ: ಇಂಚರ್ ಗ್ರೂಪ್‌ನಿಂದ ಅನ್ನಸಂತರ್ಪಣೆ

**ಚಾಮರಾಜನಗರ,** ಮಾಜಿ ಸಚಿವ ಹೆಚ್.ಎನ್. ಮಹದೇವಪ್ರಸಾದ್ ಅವರು ಜಿಲ್ಲೆಯ ಅಭಿವೃದ್ಧಿಗೆ ದೂರದೃಷ್ಟಿ ಹೊಂದಿದ್ದರು ಎಂದು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಮುಂಭಾಗದಲ್ಲಿ ಇಂಚರ್ ಗ್ರೂಪ್ ವತಿಯಿಂದ ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಅವರ 68ನೇ ಜನ್ಮದಿನದ ಅಂಗವಾಗಿ ಅಯೋಜಿಸಿದ್ದ ಅನ್ನಸಂತರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸ್ಕಿ, ಹೆಚ್.ಎಸ್. ಮಹದೇವಪ್ರಸಾದ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅನ್ನಸಂತರ್ಪಣೆಗೆ ಚಾಲನೆ ನೀಡಿ ಮಾತನಾಡಿದರು.

ಮಹದೇವಪ್ರಸಾದ್ ಅವರು ಬದುಕಿದ್ದರೆ ಜಿಲ್ಲೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿ ಆಗುತ್ತಿತ್ತು. . ಅವರು ನಮ್ಮಿಂದ ದೂರವಾಗಿದ್ದರು ಅವರು ಜಿಲ್ಲೆಯಲ್ಲಿ ಮಾಡಿರುವ ಜನಪರ ಕಾರ್ಯಕ್ರಮಗಳು ನಮ್ಮ ಮುಂದೆ ಜೀವಂತವಾಗಿ ಉಳಿದಿವೆ. ನಮ್ಮ ತಂದೆ ಹುಟ್ಟುಹಬ್ಬವನ್ನು ಹಮ್ಮಿಕೊಂಡಿರುವುದು ತುಂಬಾ ಸಂತಸವಾಗಿದೆ. ಕಾರ್ಯಕ್ರಮ ಆಯೋಜಕ ಸ್ಟೈಲ್ ಮಂಜುನಾಥ್, ಎಲ್ಲರಿಗೂ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.



ಕಾರ್ಯಕ್ರಮದಲ್ಲಿ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಆಯೋಜಕ ಸ್ಟೈಲ್ ಮಂಜು ನಾಥ್ ಜಿ.ಪಂ.ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಎನ್ ರಿಚ್ ಮಹದೇವಸ್ವಾಮಿ, ಬಸಪ್ಪ, ಕೃಷ್ಣಪ್ಪ, ಮಂಜೇಶ್, ದೊಡ್ಡರಾಯಪೇಟೆ ಗಿರೀಶ್, ವೈ.ಪಿ. ರಾಜೇಂದ್ರ, ಬಿ.ಕೆ.ರವಿಕುಮಾರ್, ಫ್ರೂಟ್ಸ್ ರವಿಕುಮಾರ್, ಸೈಯದ್‌ರಫೀ, ಮಹೇಶ್‌ಕುದರ್, ಕಾವುದವಾಡಿ ಗುರು, ಮೂಗೂರು ಸುಂದ್ರಪ್ಪ, ರಾಜು, ಕಲ್ಪುರ ಮಂಜು, ಗುರುಸ್ವಾಮಿ ಇತರರು ಹಾಜರಿದ್ದರು.

## ಹಾರಂಗಿ ಜಲಾಶಯಕ್ಕೆ ಪಿ.ಎಂ.ನರೇಂದ್ರ ಸ್ವಾಮಿ ಭೇಟಿ



ಮಡಿಕೇರಿ:-ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ ಬರ ಮತ್ತು ಅತಿವೃಷ್ಟಿ ವೀಕ್ಷಣೆಗೆ ಬುಧವಾರ ಕೊಡಗು ಜಿಲ್ಲೆಗೆ ಆಗಮಿಸಿದ ಸಚಿವರಾದ ಪಿ. ಎಂ.ನರೇಂದ್ರಸ್ವಾಮಿ ಅವರು ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಮತ್ತು ಜಿಲ್ಲಾಧಿಕಾರಿ ಜೆ.ಸೋಮಶೇಖರ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಲಾಶಯದ ನೀರಿನ ಮಟ್ಟ, ಒಳಹರಿವು ಹಾಗೂ ಹೊರಹರಿವು, ಜಲಾನಯನ ಪ್ರದೇಶದಲ್ಲಿನ ಮಳೆಯ ಪ್ರಮಾಣ ಕುರಿತು ನೀರಾವರಿ ಇಲಾಖೆಯ ಎಂಜಿನಿಯರ್‌ಗಳಿಂದ ಮಾಹಿತಿ ಪಡೆದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಪಶ್ಚಿಮ ಘಟ್ಟ ಹಾಗೂ ಕೊಡಗು ಜಿಲ್ಲೆಯಲ್ಲಿ ತಡವಾಗಿ ಮುಂಗಾರು ಮಳೆ ಆರಂಭಗೊಂಡಿರುವ ಹಿನ್ನೆಲೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಹೇಳಿದರು.

ಶಾಸಕರಾದ ಡಾ.ಮಂತರ್ ಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಧರ್ಮಜ ಉತ್ತಪ್ಪ, ತಾಲ್ಲೂಕು ಅಧ್ಯಕ್ಷರಾದ ವಿ.ಪಿ.ಶಶಿಧರ, ಪ್ರಮುಖರಾದ ಕೆ.ಪಿ.ಚಂದ್ರಕಲಾ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಇತರರು ಇದ್ದರು.

### ಸಚಿವ ಸ್ಥಾನ ಸಿಗದಿರುವುದಕ್ಕೆ ಬೇಸರ

## ಅಳಲು ತೋಡಿಕೊಂಡ ಶಾಸಕ ಅನಿಲ್

ಎಚ್.ಡಿ.ಕೋಟೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವ ಸ್ಥಾನ ಸಿಗದಿರುವುದಕ್ಕೆ ಶಾಸಕ ಅನಿಲ್ ಚಿಕ್ಕಮಾದು ಸಾಮಾಜಿಕ ಜಾಲತಾಣ "ಎಕ್ಸ್"ನಲಿ ಅಳಲು ತೋಡಿಕೊಂಡಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಪ.ಪಂಗಡದಲ್ಲಿರುವ ಏಕೈಕ ಶಾಸಕ, ಯುವಕ ಎಂಬ ಕಾರ್ಡ್ ಪ್ರಯೋಗಿಸಿದ್ದರು. ಅನಿಲ್ ಚಿಕ್ಕಮಾದು ಪರ ಮಾಜಿ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಬ್ಯಾಟ್ ಬೀಸಿದ್ದರು ಎನ್ನಲಾಗಿತ್ತು. ಎಐಸಿಸಿಯಿಂದ ಸೋಮವಾರ ಪ್ರಕಟಗೊಂಡ ನೂತನ ಸಚಿವರ ಪಟ್ಟಿಯಲ್ಲಿ ಹೆಸರಿಲ್ಲದಿರುವುದು ಕಾರ್ಯಕರ್ತರು ಹಾಗೂ ಬೆಂಬಲಿಗರಿಗೂ ಬೇಸರ ಉಂಟುಮಾಡಿತ್ತು.

ನೂತನ ಸಚಿವರ ಪದಗ್ರಹಣ ನಂತರ ಟಿಕೆಟ್ ಕೈತಪ್ಪಿದ ಶಾಸಕರು ವಿವಿಧ ರೀತಿಯಲ್ಲಿ ತಮ್ಮ ಅಸಮಾಧಾನ ಹೊರಹಾಕಿದ್ದಾರೆ."ಘ"ಲಿ ಪೋಸ್ಟ್ ಮಾಡಿರುವ ಶಾಸಕ ಅನಿಲ್



ಚಿಕ್ಕಮಾದು, 20 ವರ್ಷಗಳ ಹಿಂದೆ ಮೈಸೂರು ಭಾಗದ ಸಮುದಾಯದವರಾದ ಡಿ.ಟಿ.ಜಯಕುಮಾರ್ ಹೊರತುಪಡಿಸಿ ಯಾರಿಗೂ ಸಚಿವಸ್ಥಾನ ಲಭಿಸಿಲ್ಲ. ಇದರ ಪರಿಣಾಮ ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಯ ನಾಯಕ ಸಮುದಾಯದಲ್ಲಿ ಉತ್ತಮ ಸಂಘಟನೆಯಿಲ್ಲದೆ, ಶೈಕ್ಷಣಿಕ ಮತ್ತು ಸಾಮಾಜಿಕ ಅವಕಾಶಗಳಿಂದ ವಂಚಿತವಾಗಿರುವುದು ವಿಪರ್ಯಾಸ ಎಂದಿದ್ದಾರೆ.

ಬಡವರ ಕಲ್ಯಾಣಕ್ಕಾಗಿ ಹೊಸ ಬದಲಾವಣೆ ತರುವ ಮೂಲಕ ಹೊಸ ಚಿಂತನೆ ಹೊಂದಿದ್ದೇನೆ.ಜನ ಬಯಸುವವರೆಗೂ ಜನಸೇವೆ ಮಾಡುತ್ತೇನೆ. ಪಕ್ಷವೇ ನನ್ನನ್ನು ಗುರುತಿಸಿ ಗೌರವಿಸುತ್ತದೆ ಎಂದು ನಂಬಿ, ತಾಲೂಕನ್ನು ಅಭಿವೃದ್ಧಿಪಡಿಸುವಲ್ಲಿ ಶಕ್ತಿಮೀರಿ ಶ್ರಮಿಸುತ್ತೇನೆ.

ನಾಯಕ ಸಮುದಾಯವು ರಾಜ್ಯದ ಅಭಿವೃದ್ಧಿ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ತನ್ನ ಕೊಡುಗೆ ನೀಡಿದೆ. ಆದರೂ ನಮ್ಮ ಸಮುದಾಯಕ್ಕೆ ವಿಶೇಷವಾಗಿ ಹಳೆ ಮೈಸೂರು ಭಾಗಕ್ಕೆ ಸಮರ್ಪಕ ಪ್ರಾತಿನಿಧ್ಯ ಸಿಗದಿರುವುದು ನೋವಿನ ಸಂಗತಿ ಎಂದು ತಮ್ಮೊಳಗಿನ ಅಸಮಾಧಾನ ತೋರಿದ್ದಾರೆ.

"ಸ್ವಾತಂತ್ರ್ಯೋತ್ಸವ ಸ್ವಚ್ಛತಾ ಅಭಿಯಾನ?2026: 80 ತ್ಯಾಜ್ಯಮುಕ್ತ ತಾಣಗಳು" ಅಭಿಯಾನ

# ಮುಂದುವರೆದ ನಗರ ಪಾಲಿಕೆಯ ಸ್ವಚ್ಛತಾ ಅಭಿಯಾನ





ಮೈಸೂರು: 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ಹಮ್ಮಿಕೊಂಡಿರುವ "ಸ್ವಾತಂತ್ರ್ಯೋತ್ಸವ ಸ್ವಚ್ಛತಾ ಅಭಿಯಾನ?2026: 80 ತ್ಯಾಜ್ಯಮುಕ್ತ ತಾಣಗಳು" ಅಭಿಯಾನದ ಭಾಗವಾಗಿ ಚಿಕ್ಕ ವೀರಣ್ಣ ರಸ್ತೆ (ಸಿ.ವಿ. ರಸ್ತೆ) ಪ್ರದೇಶದಲ್ಲಿ ಬೃಹತ್ ಸ್ವಚ್ಛತಾ ಕಾರ್ಯಾಚರಣೆ ನಡೆಸಲಾಯಿತು.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಮಹಾನಗರ ಪಾಲಿಕೆ ಆಯುಕ್ತೆ ಎಂ.ಕೆ.ಸವಿತಾ, ಹೆಚ್ಚುವರಿ ಆಯುಕ್ತೆ ವೀಣಾ, ಪಾಲಿಕೆ ಅಧೀಕ್ಷಕ ಅಭಿಯಂತರರಾದ ಸಿಂಧು, ಮುಖ್ಯ ಲೆಕ್ಕಾಧಿಕಾರಿ ಶ್ವೇತಾ, ಕಾರ್ಯಪಾಲಕ ಅಭಿಯಂತರ ಮೃತ್ಯುಂಜಯ (ಪರಿಸರ), ಶ್ರೀನಿವಾಸ್ (ಸಿವಿಲ್), ಮೋಹನ್ (ಯುಜಿಡಿ) ಹಾಗೂ ದೀಪಕ್ (ವಿದ್ಯುತ್), ವಲಯ ಸಹಾಯಕ ಆಯುಕ್ತೆ ರತ್ನಾಂಬಿಕಾ ಇತರರು ಭಾಗವಹಿಸಿದ್ದರು.

ಕಾರ್ಯಾಚರಣೆಯಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ದೀರ್ಘಕಾಲದಿಂದ ಅನಧಿಕೃತವಾಗಿ ಸಂಗ್ರಹಿಸಲಾಗಿದ್ದ ಮಿಶ್ರ ತ್ಯಾಜ್ಯ, ಹಳೆಯ ವಸ್ತುಗಳು, ಲೋಹದ ಅವಶೇಷಗಳು, ಪ್ಲಾಸ್ಟಿಕ್, ಕಟ್ಟಡ ಅವಶೇಷಗಳು ಹಾಗೂ ಇತರೆ ತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಈ ಬೃಹತ್ ಸ್ವಚ್ಛತಾ ಕಾರ್ಯಾಚರಣೆಯಲ್ಲಿ ಒಟ್ಟು ಸುಮಾರು 83 ಟನ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಸ್ವಚ್ಛತಾ ಕಾರ್ಯಕ್ಕಾಗಿ 5 ಬ್ಯಾಕ್‌ಹೋ ಲೋಡರ್‌ಗಳು, 10 ಟಿಪ್ಪರ್ ವಾಹನಗಳು ಹಾಗೂ 5 ಡೋಜರ್‌ಗಳನ್ನು ಬಳಸಿಕೊಳ್ಳಲಾಯಿತು. ಸಾರ್ವಜನಿಕ ಸ್ಥಳ ಮತ್ತು ರಸ್ತೆ ಪ್ರದೇಶದಲ್ಲಿದ್ದ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಿ, ಸುಗಮ ಸಂಚಾರ ಹಾಗೂ ಸ್ವಚ್ಛ ಪರಿಸರ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಯಿತು. ಪ್ರದೇಶದಲ್ಲಿರುವ ಅಂಗಡಿ ಮಾಲೀಕರು, ಗುಜರಿ ವ್ಯಾಪಾರಿಗಳು, ಲೋಹದ ಕೆಲಸದ ಮಳಿಗೆಗಳು ಹಾಗೂ ಇತರೆ ವಾಣಿಜ್ಯ ಸಂಸ್ಥೆಗಳಿಗೆ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ರಸ್ತೆ ಬದಿಯಲ್ಲಿ ಸುರಿಯದಂತೆ ಸೂಚಿಸಲಾಯಿತು. ತಮ್ಮ ವ್ಯಾಪಾರ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ರತ್ಯೇಕಿಸಿ, ಪಾಲಿಕೆ ಸೂಚಿಸಿರುವ ವೈಜ್ಞಾನಿಕ ವಿಧಾನದಲ್ಲಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲಾಯಿತು.

## ಕೃಷ್ಣ ವಂದನ





ಸ್ನೇಹಾ ಆನಂದ್

### ಹೇ ಕೃಷ್ಣಾ!

ಮರೆತು ಹೋಗುವುದೇನು ಹರಿ ನಿನ್ನ ಸ್ಮರಣೆಯನು,
ಬದುಕಲಾರೆ ದೊರೆಯೇ
ಕ್ಷಣ ನಿನ್ನ ಮರೆತು!

ತಂದೆ, ತಾಯಿಯಂತೆ, ಬಂಧು ಬಳಗದಂತೆ,
ಆತ್ಮೀಯ ಸಖನಂತೆ, ನನ್ನ ನೆರಳಿನಂತೆ,
ಗೋವಿನ ಹಾಲಂತೆ, ಭರಣಿಯ ಬೆಣ್ಣೆಯಂತೆ, ಘಮದ
ತುಪ್ಪದಂತೆ, ನನ್ನದೆಲ್ಲವೂ ನಿನ್ನದಂತೆ!

ಸರಸದಿ ಸುರಿಯುವ ಮಳೆಯಂತೆ ನೀನು,
ತಂಪಾದ ತಂಗಾಳಿ ತೀಡಿದಂತೆ,
ಗಂಧವು ಗಾಳೀಲಿ ಪಸರಿಸಿದಂತೇನು,
ನನ್ನದೆಲ್ಲಾ ಬದುಕು ನಿನ್ನದಲ್ಲವೇನು ||

ನೋಡುವ ದೃಷ್ಟಿಯು ನಿನ್ನದೇ ಆಗಿರಲು,
ನಾಲಿಗೆಯ ಮೇಲಿರುವ ಮಾತು ನಿನ್ನದೇ,
ಹೇಮಗಿರೀಶನೇ ನೀ ಎನ್ನ ಬಾಳಿಗೆ
ಎನ್ನ ಜೀವನವು ನಿನ್ನದೇ ಪಾಲಿಗೆ ||

# ಮಾದಕ ವಸ್ತುಗಳಿಂದ ಯುವಜನತೆ ದೂರವಿರಲಿ

▸▸ ನ್ಯಾಯಾಧೀಶ ದೀಪು ಎಂ.ಟಿ. ಕರೆ



ಗುಂಡ್ಲುಪೇಟೆ, :- ಮಾದಕ ವಸ್ತುಗಳ ಸೇವನೆಯಿಂದ ಯುವಜನರ ಭವಿಷ್ಯ ಹಾಳಾಗುವುದರಿಂದ ವಿದ್ಯಾರ್ಥಿಗಳು ಹಾಗೂ ಯುವಕರು ಯಾವುದೇ ಕಾರಣಕ್ಕೂ ಮಾದಕ ವ್ಯಸನಗಳತ್ತ ಆಕರ್ಷಿತರಾಗಬಾರದು ಎಂದು ಪ್ರಧಾನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶ ದೀಪು ಎಂ.ಟಿ. ಹೇಳಿದರು.

ಪಟ್ಟಣದ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ಶಿಕ್ಷಣ ಇಲಾಖೆ ಹಾಗೂ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮಾದಕ ವಸ್ತುಗಳ ನಿರ್ಮೂಲನೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಗಾಂಜಾ, ಅಫೀಮು, ಸಿಗರೇಟ್ ಸೇರಿದಂತೆ ವಿವಿಧ ಮಾದಕ ವಸ್ತುಗಳ ಸೇವನೆಯು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ. ಮಾದಕ ವ್ಯಸನಕ್ಕೆ ಬಲಿಯಾದರೆ ವ್ಯಕ್ತಿಯ ಆರೋಗ್ಯ, ಶಿಕ್ಷಣ, ಕುಟುಂಬ ಹಾಗೂ ಸಮಾಜದ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಇಂತಹ ದುಶ್ಚಟಗಳಿಂದ ದೂರವಿದ್ದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಉತ್ತಮ ಸ್ನೇಹ ಬಳಗವನ್ನು ಆಯ್ಕೆ ಮಾಡಿಕೊಂಡು ಶಿಸ್ತುಬದ್ಧ ಜೀವನ ನಡೆಸಬೇಕು. ಮಾದಕ ವಸ್ತುಗಳ ಮಾರಾಟ ಅಥವಾ ಬಳಕೆಯ ಬಗ್ಗೆ ಮಾಹಿತಿ ದೊರೆತಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ, ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ ಹಾಗೂ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯ ಗುರುಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಅಗತ್ಯವನ್ನು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಸಿಬ್ಬಂದಿ, ಶಾಲೆಯ ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೆರೆಗಳಿಗೆ 30 ದಿನ ನೀರು ಹರಿಸಲು ಜಿಲ್ಲಾಧಿಕಾರಿ ಸಭೆಯಲ್ಲಿ ತೀರ್ಮಾನ

▸▸ ಅಹೋರಾತ್ರಿ ಧರಣಿ ಅಂತ್ಯ

ಚಾಮರಾಜನಗರ, ಗುಂಡ್ಲುಪೇಟೆ ತಾಲೂಕಿನ ಹುತ್ತೂರು ಪಂಪ್‌ಹೌಸ್‌ನಿಂದ ಚಾಮರಾಜನಗರ ತಾಲೂಕಿನ ಮೂರನೆಯ ಹಂತದಲ್ಲಿ ನೀರು ನೀರು ತುಂಬಿಸುವ ಕೆರೆಗಳಿಗೆ 30 ದಿನಗಳವರೆಗೆ ನೀರು ಹರಿಸಲು ಜಿಲ್ಲಾಧಿಕಾರಿಗಳ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಅಧ್ಯಕ್ಷತೆಯಲ್ಲಿ ನಡೆದ ನೀರಾವರಿ ಇಲಾಖೆಯು ಅಧಿಕಾರಿಗಳು, ರೈತರೊಂದಿಗಿನ ಸಭೆಯಲ್ಲಿ ಸುದೀರ್ಘ ವಾಗಿ ಚರ್ಚಿಸಿ ಸಭೆಯಲ್ಲಿ ಚಾಮರಾಜನಗರ ತಾಲೂಕಿನ ಮೂರನೆಯ ಹಂತದ ಕೆರೆಗಳಿಗೆ ನೀರು ಹರಿಸಲು ತೀರ್ಮಾನ ತೆಗೆದುಕೊಳ್ಳಲಾಯಿತು.

ತಾಲೂಕಿನ ಅಮಚವಾಡಿ, ಲಕ್ಷ್ಮೀಪುರ, ಮಹದೇಶ್ವರ ಕಾಲೋನಿ, ಸಿದ್ಧಲಿಂಗಪುರ, ಬಡಗಲಪುರ, ಸಾನೇಗಾಲ, ಬೊಕ್ಕೇಪುರ, ಕಟ್ಟವಾಡಿ, ಕೊತ್ತಲವಾಡಿ, ನಿಜಲಿಂಗನಪುರ, ನರಸಮಂಗಲ, ಯಾನಗಳ್ಳಿ, ಕಿಲಗೆರೆ, ಮಾದಲವಾಡಿ ಗ್ರಾಮದ ರೈತರು ಮೂರನೆಯ ಹಂತದ ಕೆರಗಳಿಗೆ ಕಳೆದ ಮೂರು ವರ್ಷಗಳಿಂದಲ್ಲೂ ನೀರು ತುಂಬಿಸುತ್ತಿಲ್ಲ ಎಂದು ಆರೋಪಿಸಿ ತಾಲೂಕಿನ ಮೂರನೆಯ ಹಂತದ ಅಚ್ಚುಕಟ್ಟು ಗ್ರಾಮದ ರೈತರು ಗುಂಡ್ಲುಪೇಟೆ ತಾಲೂಕಿನ ಹುತ್ತೂರು ಪಂಪ್‌ಹೌಸ್ ಮುಂಭಾಗದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದರು.

ಅಹೋರಾತ್ರಿ ಧರಣಿ ಸ್ಥಳಕ್ಕೆ ಇತ್ತೀಚೆಗೆ ಜಿಲ್ಲಾಧಿಕಾರಿ ಶ್ರೀ ರೂಪ ಅಧಿಕಾರಿಗಳೊಂದಿಗೆ ಭೇಟಿ ನೀಡಿ ರೈತರ ಸಮಸ್ಯೆ ಆಲಿಸಿ ಮನವಿ ಸ್ವೀಕರಿಸಿ, ವಾರದೊಳಗೆ ನೀರಾವರಿ ನಿಗಮದ ಮುಖ್ಯ ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಭವನದಲ್ಲಿ ಸಭೆ ಕರೆದು ಮೂರನೇ ಹಂತದ ಕೆರೆಗಳಿಗೆ ನೀರು ಹರಿಸುವ ಭರವಸೆ ನೀಡಿದರು. ಅದರಂತೆ ಇಂದು ನೀರಾವರಿ ನಿಗಮದ ಅಧಿಕಾರಿಗಳು, ರೈತರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಮೂರನೇ ಹಂತದ ಕೆರೆಗಳಿಗೆ 30 ದಿನಗಳ ಕಾಲ ನೀರು ಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ನಮ್ಮ ಭಾಗದ ಕೆರೆಗಳು ತುಂಬುವ ತನಕ ಯಾರು ಗೇಟ್ ವಾಲ್ ತಿರುಗಿಸಬಾರದು. ಗೇಟ್ ವಾಲ್ ಬಳಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಗೇಟ್ ವಾಲ್ ತಿರುಗಿಸುವವರ ಮೇಲೆ ದೂರು ನೀಡಿ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದರು. ರೈತರು ಜಿಲ್ಲಾಧಿಕಾರಿಗಳಿಗೆ ಅಭಿನಂದನೆ ತಿಳಿಸಿದರು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ತಹಸೀಲ್ದಾರ್ ಗಿರಿಜಾ,ನೀರಾವರಿ ನಿಗಮದ ಸೂಪರ್ ಡೆಂಟ್ ಇಂಜಿನಿಯರ್ ರಘುಪತಿ,ಇಇ ಗುರು ಪ್ರಸಾದ್ , ಎಇಇ ಮಹೇಶ್, ಬಿಜೆಪಿ ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಜಿಲ್ಲಾ ಕಾರ್ಯದರ್ಶಿ ನಟರಾಜು, ರೈತರು ಭಾಗವಹಿಸಿದ್ದರು.



# ಶೃಂಗಾರವ್ವನ ಅರಮನೆ ದಾಖಲೆಗೆ ತಯಾರಿ



ಮೈಸೂರು: ಸನಾತನ ಫೌಂಡೇಷನ್ ಆಶ್ರಯದಲ್ಲಿ ಆ. 11 ರಂದು ಬೆಳಗ್ಗೆ ಬೆಂಗಳೂರಿನಿಂದ ಬೆಳಗ್ಗೆ 9.30ಕ್ಕೆ ಹೊರಡುವ ವಂದೇ ಭಾರತ್ ಟ್ರೈನ್‌ನ ಒಂದು ಭೋಗಿಗೆ ಶೃಂಗಾರವ್ವನ ಅರಮನೆ ಎಂಬ ಹೆಸರಿಟ್ಟು, ಅದರಲ್ಲಿ ಸುಮಾರು 20 ಮಂದಿ ಮಹಿಳೆಯರಿಗೆ ಕೇಶ ವಿನ್ಯಾಸ, ಮೇಕಪ್ ಹಾಗೂ ಸೀರೆ ಉಡಿಸುವಿಕೆ ಮೂಲಕ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಂತಹ ಇನ್ನಿತರ ಜಾಗತಿಕ ದಾಖಲೆ ಮಾಡಲಾಗುವುದು ಎಂದು ಒನ್ ಮಿನಿಟ್ ಉಮಾ ಎಂದೇ ಖ್ಯಾತರಾದ ಉಮಾ ಜಯಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಮಹಿಳೆಯರನ್ನು ತಮ್ಮದೇ ಖರ್ಚಿನಲ್ಲಿ ರೈಲಿಗೆ ಕರೆ ತಂದು ಅದು ಮಧ್ಯಾಹ್ನ 12ಕ್ಕೆ ಮೈಸೂರಿಗೆ ಆಗಮಿಸುವವರೆಗೂ ಶೀಘ್ರ ಗತಿಯಲ್ಲಿ ಮೇಕ್ ಓವರ್ ಮಾಡಿ, ಅವರನ್ನು ನಂತರ ಮೈಸೂರು ರೈಲ್ವೆ ನಿಲ್ದಾಣದಿಂದ ಚಾಮುಂಡಿಬೆಟ್ಟದ ಪಾದದಲ್ಲಿರವ ಸುತ್ತೂರು ಮಠಕ್ಕೆ ಕರೆದೊಯ್ದು ಮಧ್ಯಾಹ್ನ 1ಕ್ಕೆ ಕಾರ್ಯಕ್ರಮ ಆಯೋಜಿಸಲಾಗುವುದು. ಇದರಲ್ಲ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪಾಲ್ಗೊಂಡು ಆಶೀರ್ವಚನ ನೀಡಲಿದ್ದಾರೆ. ಈ ವಿಶಿಷ್ಟ ಪ್ರಯತ್ನದಲ್ಲಿ ಪೌರ ಕಾರ್ಮಿಕರು, ಸಾರಿಗೆ ಸಂಸ್ಥೆ ಕಂಡಕ್ಟರ್‌ಗಳು, ಪೊಲೀಸ್ ಇಲಾಖೆಯ ಪೇದೆಗಳು ಭಾಗಿಯಾಗಲಿದ್ದಾರೆ. ಈಗಾಗಲೇ ತಾವು ಬಸ್‌ಗಳಲ್ಲಿ ಈ ರೀತಿಯ ವಿಶಿಷ್ಟ ಪ್ರಯತ್ನ ಮಾಡಿ ದಾಖಲೆ ನಿರ್ಮಿಸಿದ್ದರೂ ರೈಲಿನಲ್ಲಿ ಈ ರೀತಿಯದೊಂದು ದಾಖಲೆ ಯತ್ನ ಇದೇ ಮೊದಲಿನದ್ದಾಗಿದೆ ಎಂದು ವಿವರಿಸಿದರು. ವೇಗವಾಗಿ ಚಲಿಸುವ ರೈಲಿನಲ್ಲಿ ಈ ರೀತಿಯ ಸಾಹಸ ಮಾಡುವ ಮೂಲಕ ಮಹಿಳೆಯರಲ್ಲಿ ಆತ್ಮ ವಿಶ್ವಾಸ ಮೂಡಿಸಿ, ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ, ವಿಶಿಷ್ಟ ಸಾಮಾಜಿಕ ಸಂದೇಶ ನೀಡುವ ಉದ್ದೇಶ ತಮ್ಮದಾಗಿದೆ ಎಂದು ಮಾಹಿತಿ ನೀಡಿದರು. ಉದ್ಯಮಿ ಗೋಲ್ಡನ್ ಸುರೇಶ್, ಲಯನ್ ಪ್ರಮೀಳಾ, ಅಭಿಷೇಕ್, ಗುರುದತ್ ಕುಲಕರ್ಣಿ, ಅಶ್ವಿನಿ ಇದ್ದರು.

# ಕೌಶಲ್ಯದಿಂದ ಸ್ತ್ರೀ ಸಬಲೀಕರಣ



ಮೈಸೂರು: ಮಹಿಳೆಯರು ತಮ್ಮ ಜೀವನದಲ್ಲಿ ಆರ್ಥಿಕ ಸಬಲೀಕರಣ ಹೊಂದಬೇಕಾದರೆ ದುಡಿಮೆ ಮುಖ್ಯವಾಗಿದ್ದು, ದುಡಿಮೆಗೆ ಕೌಶಲ್ಯ ಅತ್ಯವಶ್ಯಕ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜಂಟಿ ನಿರ್ದೇಶಕಿ ಡಾ.ಲಕ್ಷ್ಮಮ್ಮ ತಿಳಿಸಿದರು.

ನಗರದ ಆಲನಹಳ್ಳಿಯಲ್ಲಿ ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘದ ವತಿಯಿಂದ ನಿರುದ್ಯೋಗಿ ಮಹಿಳೆಯರಿಗಾಗಿ ಏರ್ಪಡಿಸಿದ್ದ ಹೊಲಿಗೆ ಯಂತ್ರ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ಅನಾದಿ ಕಾಲದಿಂದಲೂ ಶೋಷಣೆ ಒಳಗಾಗಿ ಕೇವಲ ಅಡುಗೆ ಮನೆಗೆ ಸೀಮಿತವಾಗಿರುತ್ತಿದ್ದರು. ಆದರೆ ಭಗವಾನ್ ಬುದ್ಧನ ಕಾಲದಲ್ಲಿ ಇವರ ಶೋಷಣೆಯನ್ನು ಗಮನಿಸಿ ಅವರ ಸಹಚರರ ಮಾತಿನಂತೆ ಬುದ್ಧನು 2500 ವರ್ಷಗಳ ಹಿಂದೆಯೇ ಮಹಿಳೆಯರು ಬೌದ್ಧ ಬಿಕ್ಕುಗಳಾಗಲು ಅವಕಾಶವನ್ನು ಮಾಡಿಕೊಟ್ಟಿದ್ದರು. ಹೀಗೆ ಮಹಿಳೆಯರಿಗೆ ಸಮಾನ ಸ್ವಾತಂತ್ರ್ಯವನ್ನು ಕೊಟ್ಟ ಮೊದಲ ವ್ಯಕ್ತಿಯೇ ಗೌತಮ ಬುದ್ಧ ಆಗಿದ್ದು, ಇವರು ಈ ಅವಕಾಶ ಕೊಟ್ಟಿದ್ದರಿಂದ ಇವರ ಸಂಘದ ಬೌದ್ಧ ಬಿಕ್ಕುಣಿ ಕವಯತ್ರಿ ಆಗಿದ್ದನ್ನು ನಾವು ಸ್ಮರಿಸಬಹುದು ಎಂದರು.

ಸಂಘದ ಅಧ್ಯಕ್ಷ ಗಿರೀಶ್‌ಚಂದ್ರ, ನಿವೃತ್ತ ಇಂಜಿನಿಯರ್ ಕಾಂತರಾಜು, ಹೊಲಿಗೆ ತರಬೇತಿ ಶಿಕ್ಷಕಿ ಮೋಹನಕುಮಾರಿ ಮಾತನಾಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಎಎಸ್‌ಐ ಸಿ.ಕುಮಾರಸ್ವಾಮಿ, ಬಸವರಾಜು, ಎಚ್.ಎಸ್.ಸಿದ್ದಲಿಂಗಯ್ಯ ರಾಮಾನುಜಂ, ಗುರುಲಿಂಗಯ್ಯ ನಿವೃತ್ತ ಬ್ಯಾಂಕ್ ಅಧಿಕಾರಿ ಸಿದ್ದರಾಜು ಸೇರಿ ಮತ್ತಿರರು ಹಾಜರಿದ್ದರು.

# ಮಹದೇವಪ್ರಸಾದ್ ಕೆಲಸಗಳು ಶಾಶ್ವತ

## ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಭಿಮತ | ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬ

ಚಾಮರಾಜನಗರ: ಮಾಜಿ ಸಚಿವ ದಿವಂಗತ ಹೆಚ್.ಎಸ್.ಮಹದೇವಪ್ರಸಾದ್ ಅವರು ಕ್ಷೇತ್ರದಲ್ಲಿ ಹಾಗೂ ಜಿಲ್ಲೆಯಾದ್ಯಂತ ಮಾಡಿರುವ ಜನಪರ ಕೆಲಸಗಳು ಎಂದೆಂದಿಗೂ ಶಾಶ್ವತವಾಗಿ ಉಳಿಯಲಿವೆ ಎಂದು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ಹರವೆ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಮಾಜಿ ಸಚಿವರ 68ನೇ ಜನ್ಮದಿನದ ಪ್ರಯುಕ್ತ ಅಭಿಮಾನಿ ಬಳಗ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಸರ್ಕಾರಿ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ ವರ್ಗ ಮತ್ತು ಅರವಿಂದ ಕಣ್ಣಿನ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಎರಡು ಬಾರಿ ಸಚಿವರಾಗಿ ಹಾಗೂ ಐದು ಬಾರಿ ಶಾಸಕರಾಗಿ ಮಹದೇವಪ್ರಸಾದ್ ಅವರು ಜಾರಿಗೆ ತಂದ ಯೋಜನೆಗಳು ಜಿಲ್ಲೆಯ ಅಭಿವೃದ್ಧಿಗೆ ದೊಡ್ಡ ಪೂರಕ ಶಕ್ತಿಯಾಗಿವೆ ಎಂದರು.

**ಧ್ರುವನಾರಾಯಣ್ ಸ್ಮರಣೆ, ಸಮಾಜಮುಖಿ ಸೇವೆ**

ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಹಾಗೂ ಮಹದೇವಪ್ರಸಾದ್ ಅವರು ಜೋಡಿಯಾಗಿ ಜಿಲ್ಲೆಯ ಅಭಿವೃದ್ಧಿಗೆ ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಹಾದಿಯಲ್ಲೇ ಸಾಗಿ ಜನರ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸ ನಿರಂತರವಾಗಿ ನಡೆಯಲಿದೆ ಎಂದು ಶಾಸಕರು ತಿಳಿಸಿದರು. ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಹಾಗೂ ಸಂಘಟಕ ಕೆರೆಹಳ್ಳಿ ನವೀನ್ ಮಾತನಾಡಿ, ಮಹದೇವಪ್ರಸಾದ್ ಅವರು ಚಾಮರಾಜ ನಗರ ಜಿಲ್ಲೆಯ ಅಭಿವೃದ್ಧಿಯ ಹರಿಕಾರರಾಗಿದ್ದರು. ಕಳೆದ 13 ವರ್ಷಗಳಿಂದ ನಿರಂತರವಾಗಿ ಅವರ ಹುಟ್ಟುಹಬ್ಬದ ಅಂಗವಾಗಿ ಕಣ್ಣಿನ ತಪಾಸಣೆ, ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಸೇರಿದಂತೆ ಮುಂದೆಯೂ ಇದನ್ನು ವಿಸ್ತರಿಸಲಾಗುವುದು ಎಂದರು. ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ ಕೆಂಗಾಕಿ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮುಕ್ಕಡಹಳ್ಳಿ ರವಿಕುಮಾರ್, ಉದಯ್ ಕುಮಾರ್, ಬಿ.ಕೆ.ರವಿಕುಮಾರ್, ಮಾಸ್ಟರ್ ಮಾದಪ್ಪ, ಸಿದ್ದರಾಮಯ್ಯ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಬೆಳ್ಳೇಗೌಡ, ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಮಧುಸೂದನ್, ನಾಗೇಶ್, ರಂಗಸ್ವಾಮಿ, ಬಸವರಾಜು, ಸಾರ್ವಜನಿಕ ಸಂಪರ್ಕಾಧಿಕಾರಿ ವಿಜಯಕಾಂತ್, ಬಸವಣ್ಣ, ರಾಜಕುಮಾರ ಉಪಸ್ಥಿತರಿದ್ದರು.




### 300 ಜನರಿಗೆ ಕಣ್ಣಿನ ತಪಾಸಣೆ, 130 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆ

ದಿವಂಗತ ಹೆಚ್.ಎಸ್.ಮಹದೇವಪ್ರಸಾದ್ ಅವರ ಜನ್ಮದಿನದ ಸವಿನೆನಪಿನಲ್ಲಿ ಆಯೋಜಿಸಲಾಗಿದ್ದ ಈ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಶಿಬಿರದಲ್ಲಿ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಒಟ್ಟು 300ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿ ಕಣ್ಣಿನ ತಪಾಸಣೆ ಮಾಡಿಸಿಕೊಂಡರು. ಈ ಪೈಕಿ ಕಣ್ಣಿನ ಪೊರೆ ಹಾಗೂ ಇತರೆ ಸಮಸ್ಯೆಗಳಿಂದ ಬಳಲುತ್ತಿದ್ದ 130 ಫಲಾನುಭವಿಗಳನ್ನು ಉಚಿತ ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

# ಮಹದೇವಪ್ರಸಾದ್‌ರಿಂದ ಜಿಲ್ಲೆಯ ಅಭಿವೃದ್ಧಿಗೆ ಒತ್ತು

## ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬ: ಇಂಚರ್ ಗ್ರೂಪ್‌ನಿಂದ ಅನ್ನಸಂತರ್ಪಣೆ



**ಚಾಮರಾಜನಗರ,** ಮಾಜಿ ಸಚಿವ ಹೆಚ್.ಎನ್. ಮಹದೇವಪ್ರಸಾದ್ ಅವರು ಜಿಲ್ಲೆಯ ಅಭಿವೃದ್ಧಿಗೆ ದೂರದೃಷ್ಟಿ ಹೊಂದಿದ್ದರು ಎಂದು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಮುಂಭಾಗದಲ್ಲಿ ಇಂಚರ್ ಗ್ರೂಪ್ ವತಿಯಿಂದ ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಅವರ 68ನೇ ಜನ್ಮದಿನದ ಅಂಗವಾಗಿ ಅಯೋಜಿಸಿದ್ದ ಅನ್ನಸಂತರ್ಪಣಾ ಕಾರ್ಯಕ್ರಮದಲ್ಲಿ ಭಾಗವಹಿಸ್ಕಿ, ಹೆಚ್.ಎಸ್. ಮಹದೇವಪ್ರಸಾದ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅನ್ನಸಂತರ್ಪಣೆಗೆ ಚಾಲನೆ ನೀಡಿ ಮಾತನಾಡಿದರು.

ಮಹದೇವಪ್ರಸಾದ್ ಅವರು ಬದುಕಿದ್ದರೆ ಜಿಲ್ಲೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿ ಆಗುತ್ತಿತ್ತು. . ಅವರು ನಮ್ಮಿಂದ ದೂರವಾಗಿದ್ದರು ಅವರು ಜಿಲ್ಲೆಯಲ್ಲಿ ಮಾಡಿರುವ ಜನಪರ ಕಾರ್ಯಕ್ರಮಗಳು ನಮ್ಮ ಮುಂದೆ ಜೀವಂತವಾಗಿ ಉಳಿದಿವೆ. ನಮ್ಮ ತಂದೆ ಹುಟ್ಟುಹಬ್ಬವನ್ನು ಹಮ್ಮಿಕೊಂಡಿರುವುದು ತುಂಬಾ ಸಂತಸವಾಗಿದೆ. ಕಾರ್ಯಕ್ರಮ ಆಯೋಜಕ ಸ್ಟೈಲ್ ಮಂಜುನಾಥ್, ಎಲ್ಲರಿಗೂ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಆಯೋಜಕ ಸ್ಟೈಲ್ ಮಂಜು ನಾಥ್ ಜಿ.ಪಂ.ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಎನ್ ರಿಚ್ ಮಹದೇವಸ್ವಾಮಿ, ಬಸಪ್ಪ, ಕೃಷ್ಣಪ್ಪ, ಮಂಜೇಶ್, ದೊಡ್ಡರಾಯಪೇಟೆ ಗಿರೀಶ್, ವೈ.ಪಿ. ರಾಜೇಂದ್ರ, ಬಿ.ಕೆ.ರವಿಕುಮಾರ್, ಫ್ರೂಟ್ಸ್ ರವಿಕುಮಾರ್, ಸೈಯದ್‌ರಫೀ, ಮಹೇಶ್‌ಕುದರ್, ಕಾವುದವಾಡಿ ಗುರು, ಮೂಗೂರು ಸುಂದ್ರಪ್ಪ, ರಾಜು, ಕಲ್ಪುರ ಮಂಜು, ಗುರುಸ್ವಾಮಿ ಇತರರು ಹಾಜರಿದ್ದರು.



# ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಣೆ

ಗುಂಡ್ಲುಪೇಟೆ: ಮಾಜಿ ಸಚಿವ ದಿವಂಗತ ಎಚ್.ಎಸ್. ಮಹದೇವಪ್ರಸಾದ್ ಅವರ 68ನೇ ಜನ್ಮದಿನದ ಅಂಗವಾಗಿ ತಾಲ್ಲೂಕಿನ ಕುರುಬರಹುಂಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕೋಟೆಕೆರೆ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎಂ. ಮಹದೇವಸ್ವಾಮಿ ಅವರು ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಿಸಿ ಮಾತನಾಡಿ, ದಿವಂಗತ ಮಹದೇವಪ್ರಸಾದ್ ಅವರು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿಗೆ ನೀಡಿದ ಕೊಡುಗೆ ಸದಾ ಸ್ಮರಣೀಯವಾಗಿದ್ದು, ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಕೆ.ಜಿ. ಮಹೇಶ್, ಕೆ.ಪಿ. ಕುಮಾರ್ (ಮಾಜಿ ಗೌಡ), ಗೌ. ಚನ್ನಬಸಪ್ಪ, ಪುಟ್ಟಸ್ವಾಮಿ, ನಿಂಗರಾಜು, ಎಸ್‌ಡಿಎಂಸಿ ಅಧ್ಯಕ್ಷ ಕೆ.ಎಸ್. ಮಹೇಶ್, ಕೆ.ಜಿ. ರಾಜಶೇಖರ್, ರಾಮಲಿಂಗಪ್ಪ, ಡಿ. ಮಹೇಶ್, ವೆಂಕಟೇಶ್, ಪ್ಯಾಕ್ಸ್ ನಿರ್ದೇಶಕ ಶೇಖರ್, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

# ಚಾ.ನಗರ: ಬೋನಿಗೆ ಬಿದ್ದ ಚಿರತೆ



ಚಾಮರಾಜನಗರ, ತಾಲೂಕಿನ ಶ್ರೀ ಕಾಳಿಕಾಂಬ ಕಾಲೋನಿಯಲ್ಲಿ ಅರಣ್ಯ ಇಲಾಖೆ ಅಳವಡಿಸಿದ್ದ ಬೋನಿಗೆ ಚಿರತೆ ಸೆರೆಯಾಗಿದೆ.

ಶ್ರೀ ಕಾಳಿಕಾಂಬ ಕಾಲೋನಿ ಹಾಗೂ ಕುಂಭೇಶ್ವರ ಕಾಲೋನಿಯ ವ್ಯಾಪ್ತಿಯ ಜಮೀನುಗಳಲ್ಲಿ ಹಲವಾರು ದಿನಗಳಿಂದ ಚಿರತೆಯೊಂದು ಓಡಾಡುತ್ತಾ, ಹಲವಾರು ಹಸು, ಮೇಕೆ ಮತ್ತು ಕೋಳಿಗಳನ್ನು ಬಲಿ ಪಡೆದಿತ್ತು. ಈ ಸಂಬಂಧ ಗ್ರಾಮಸ್ಥರು ಹಾಗೂ ರೈತರು ಚಿರತೆಯನ್ನು ಸೆರೆಹಿಡಿಯುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದರು.

ಅದರಂತೆ ಅರಣ್ಯ ಇಲಾಖೆ ಕಾಳಿಕಾಂಬ ಕಾಲೋನಿಯ ವ್ಯಾಪ್ತಿಯ ಜಮೀನೊಂದರಲ್ಲಿ ಬೋನ್ ಅಳವಡಿಸಿದ್ದರು. ಮಂಗಳವಾರ ರಾತ್ರಿ ಬೋನಿಗೆ ಚಿರತೆ ಸೆರೆಯಾಗಿದೆ. ಆದರೆ ಈ ಭಾಗದಲ್ಲಿ ಇನ್ನು ಎರಡು ಚಿರತೆಗಳು ಓಡಾಡುತ್ತಿದ್ದು, ಒಂದು ಚಿರತೆಯ ಸೆರೆಯಿಂದ ಗ್ರಾಮಸ್ಥರ ಆತಂಕ ದೂರವಾಗಿಲ್ಲ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಚಿರತೆ ಸೆರೆಗೆ ಕ್ರಮವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

# ಜಿಲ್ಲೆಯ ಅಭಿವೃದ್ಧಿಗೆ ಶಾಸಕರೊಂದಿಗೆ ಚರ್ಚೆ

## ಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆ । ರಾಮನಗರ ಕ್ಷೇತ್ರದಲ್ಲಿ 2000 ಕೋಟಿ ರೂ ವೆಚ್ಚದ ಅಭಿವೃದ್ಧಿ



ರಾಮನಗರ: ರಾಮನಗರ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೆ 2000 ಕೋಟಿ ರೂ ಅನುದಾನ ಸಿಕ್ಕಿದೆ. ಈ ಮೊತ್ತ ಕನಕಪುರ ವಿಧಾನಸಭಾ ಕ್ಷೇತ್ರಕ್ಕಿಂತ ಹೆಚ್ಚಾಗಿದೆ. ಭವಿಷ್ಯದಲ್ಲಿಯೂ ರಾಮನಗರ ಸೇರಿದಂತೆ ಜಿಲ್ಲೆಯ ಅಭಿವೃದ್ಧಿಗೆ ಜಿಲ್ಲೆಯ ಶಾಸಕರ ಜೊತೆ ಚರ್ಚಿಸುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದಲ್ಲಿರುವ ಜಿಲ್ಲಾ ಕ್ರೀಡಾಂಗಣದಲ್ಲಿ ಶ್ರೀ ಚಾಮುಂಡೇಶ್ವರಿ ಕರಗ ಮಹೋತ್ಸವ ಆಚರಣಾ ಸಮಿತಿ ಏರ್ಪಡಿಸಿದ್ದ ಮ್ಯುಸಿಕಲ್ ನೈಟ್ ಕಾರ್ಯಕ್ರಮವನ್ನ ಉದ್ಘಾಟಿಸಿ ಅವರು ಮಾತನಾಡಿದರು. ರಾಜೀವ್ ಗಾಂದಿ ಆರೋಗ್ಯ ವಿವಿ ಕಟ್ಟಡ ನಿರ್ಮಾಣ 600 ಕೋಟಿ ರೂ ವೆಚ್ಚದಲ್ಲಿ ನಡೆಯುತ್ತಿದೆ. 150 ಕೋಟಿ ರೂ ವೆಚ್ಚದ ಅರ್ಕಾವತಿ ರಿವರ್ ಫ್ರಂಟ್ ಯೋಜನೆ ಕಾಮಗಾರಿ ಆರಂಭವಾಗಿದೆ ಎಂದರು.

### ನಿವೇಶನ ವಿತರಿಸಲು ಭೂಮಿ ಗುರತು

ರಾಮನಗರ ಕ್ಷೇತ್ರ ವ್ಯಾಪ್ತಿಯಲ್ಲಿ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ವಿತರಿಸಲು ಅನುಕೂಲ ವಾಗುವಂತೆ ಈಗಾಗಲೆ ಡಿ.ಕೆ.ಸುರೇಶ್ ಮಾರ್ಗದರ್ಶನದಲ್ಲಿ ಶಾಸಕ ಇಕ್ಬಾಲ್ ಹುಸೇನ್ 3000 ಎಕರೆ ಭೂಮಿಯನ್ನು ಗುರುತಿಸಿದ್ದಾರೆ. ಆಶ್ರಯ ಸಮಿತಿ ರಚನೆ ಮಾಡಿ, ಅರ್ಹರಿಗೆ ನಿವೇಶನಗಳನ್ನು ಹಂಚುವುದಾಗಿ ತಿಳಿಸಿದರು.

### ಜಿಲ್ಲೆಯ ಕೀರ್ತಿ ಅಂತರರಾಷ್ಟ್ರೀಯ ಮಟ್ಟಕ್ಕೆ

ಬೆಂಗಳೂರು ದಕ್ಷಿಣ ಜಿಲ್ಲೆಯ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುತ್ತೇವೆ. ಇದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಜಿಲ್ಲೆಯ ಗೌರವ ಉಳಿಸುವ ಕೆಲಸ ಮಾಡುತ್ತಿದ್ದೇವೆ.

ಜಿಲ್ಲೆಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಶೀಘ್ರದಲ್ಲಿಯೇ ಘೋಷಣೆ ಮಾಡುತ್ತೇನೆ. ಎಲ್ಲರೂ ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ತಿರುಗಿ ನೋಡುವಂತೆ ಅಭಿವೃದ್ಧಿ ಪಡಿಸುತ್ತೇವೆ ಎಂದರು.

### ಅಭಿವೃದ್ಧಿಗಾಗಿ ಶಕ್ತಿ ತುಂಬಿ

ನಿಮ್ಮ ಮನೆ ಬಾಗಿಲಿಗೆ ಅಧಿಕಾರ ಬಂದಿದೆ. ಅದನ್ನು ನೀವು ಉಳಿಸಿಕೊಂಡು ನಮಗೆ ಹೆಚ್ಚಿನ ಶಕ್ತಿ ತುಂಬಬೇಕು. ನಾನು ಎಷ್ಟೇ ದೊಡ್ಡ ಅಧಿಕಾರದಲ್ಲಿದ್ದರೂ ಇಲ್ಲಿ ನಿಮ್ಮ ಮಗ, ನಿಮ್ಮ ಸೇವಕ. ಸಿಕ್ಕ ಅವಕಾಶದಲ್ಲಿ ನಿಮ್ಮ ಸೇವೆ ಮಾಡುತ್ತೇನೆ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರೇ ಇರಲಿ ಪಕ್ಷಭೇದ ಮರೆತು ಒಗ್ಗಟ್ಟಾಗಿ ಕೆಲಸ ಮಾಡೋಣ ಎಂದು ಹೇಳಿದರು.

### ಯುವಕ ಸಂಘಗಳಿಗೆ 4 ಕೋಟಿ

ಪ್ರತಿ ಪಂಚಾಯಿತಿಗಳಲ್ಲಿ ಭಾರತ್ ಜೋಡೋ ಯುವಕ ಸಂಘಗಳು ಆರಂಭಿಸುತ್ತೇವೆ. ಪ್ರತಿ ಸಂಘಕ್ಕೆ ವಾರ್ಷಿಕ 10 ಲಕ್ಷ ಅನುದಾನ ಸಿಗಲಿದೆ. ಬೆಂಗಳೂರು ದಕ್ಷಿಣ ಜಿಲ್ಲೆಗೆ 4 ಕೋಟಿ ರೂ ಅನುದಾನ ಲಭ್ಯವಾಗಲಿದೆ. ಸಂಘಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಿ ಯುವ ಪ್ರತಿಭೆಗಳನ್ನು ಗುರುತಿಸುವ ಕೆಲಸ ಮಾಡುತ್ತೇವೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

### ಸಿಎಂ ಹೌದು, ಆದರೆ ನಾನು ನಿಮ್ಮ ಸೇವಕ!

"ನಾನು ಮುಖ್ಯಮಂತ್ರಿ ಹೌದು, ಆದರೆ ನಾನು ನಿಮ್ಮ ಸೇವಕ, ನಿಮ್ಮ ಜಿಲ್ಲೆಯ ಮಗ, ನಿಮ್ಮ ಜಿಲ್ಲೆಯ ಮಗನನ್ನು ಕಾಪಾಡಿಕೊಳ್ಳಬೇಕು" ಎಂದರು. ತಮ್ಮ ಭಾಷಣದ ವೇಳೆ ಪಟಾಕಿ ಸಿಡಿಯುವ ಸದ್ದು ಕೇಳಿ ಅಸಮಧಾನಗೊಂಡ ಮುಖ್ಯಮಂತ್ರಿಗಳು ಪಟಾಕಿ ಸಿಡಿಸುವುದನ್ನು ನಿಲ್ಲಿಸುವಂತೆ ಸೂಚಿಸಿದರು. "ನನಗೆ ಪಟಾಕಿ ಬೇಕಾಗಿಲ್ಲ. ನಿಮ್ಮ ಬದುಕು ಮುಖ್ಯ. ನೀವು ಸಂತೋಷ, ನೆಮ್ಮದಿಯಿಂದ ಇರುವುದು ಮುಖ್ಯ" ಎಂದರು. ಜನ ಸೇವೆ ಮಾಡಲು ನನಗೆ ಅವಕಾಶ ಸಿಕ್ಕಿದೆ.

### ಕ್ಷೇತ್ರ, ಜಿಲ್ಲೆಯ ಅಭಿವೃದ್ಧಿಗೆ ಮುಖ್ಯಮಂತ್ರಿಗಳಿಗೆ ಕನಸಿದೆ – ಇಕ್ಬಾಲ್ ಹುಸೇನ್

ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿ, ನೀವು ಕೊಟ್ಟ ಶಕ್ತಿಯಿಂದ ಮೈಸೂರು ದಸರಾ ಮಾದರಿಯಲ್ಲಿಯೇ ಬಹಳ ಭಕ್ತಿ, ಸಂತೋಷದಿಂದ , ಪಕ್ಷಾತೀತ, ಜಾತ್ಯತೀತವಾಗಿ ಚಾಮುಂಡೇಶ್ವರಿ ದೇವಿ ಕರಗ ಮಹೋತ್ಸವ ಆಚರಿಸುತ್ತಿದ್ದೇವೆ. ಈ ಜಿಲ್ಲೆಯ ಮಣ್ಣಿನ ಮಗ ರಾಜ್ಯ ಚುಕ್ಕಾಣಿ ಹಿಡಿಯಬೇಕಂಬುದು ಜನರ ಆಸೆಯಾಗಿತ್ತು. ತಾಯಿಯ ಆಶೀರ್ವಾದದಿಂದಾಗಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಲಿದಿದೆ ಎಂದು ಹೇಳಿದರು.

ಈ ಹಿಂದೆ ರಾಮನಗರ ಕ್ಷೇತ್ರ ಹೇಗಿತ್ತು ಎಂಬುದು ನಿಮಗೆಲ್ಲ ಗೊತ್ತಿದೆ. ಹಿಂದೆ ಇದ್ದವರು ಕ್ಷೇತ್ರ ಮತ್ತು ಜನರ ಹಿತ ಬಯಲಿಲ್ಲ. ಆದರೆ, ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕಳೆದ ಮೂರು ವರ್ಷಗಳಲ್ಲಿ ಕ್ಷೇತ್ರದ ಚಿತ್ರಣವೇ ಬದಲಾಗಿದೆ. ಕೃಷಿ, ನೀರಾವರಿ, ಆರೋಗ್ಯ, ರಸ್ತೆ ಸೇರಿದಂತೆ ಎಲ್ಲಾ ವಿಭಾಗಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದೆ. ಕ್ಷೇತ್ರದ ಅಭಿವೃದ್ಧಿ ಬಗ್ಗೆ ಇನ್ನೂ ಸಾಕಷ್ಟು ಕನಸುಗಳಿದ್ದು, ಅದೆಲ್ಲವನ್ನು ಸಾಕಾರಗೊಳಿಸುತ್ತೇವೆ. ಇದಕ್ಕಾಗಿ ಭಗವಂತ ಡಿ.ಕೆ.ಶಿವಕುಮಾರ್ ರೂಪದಲ್ಲಿ ನಮಗೆ ದೊಡ್ಡ ಶಕ್ತಿಯಾಗಿ ನೀಡಿದ್ದಾನೆ ಎಂದು ಹೇಳಿದರು.

ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕರಾದ ಬೇಳೂರು ಗೋಪಾಲಕೃಷ್ಣ, ಉದಯ್ , ವಿಧಾನ ಪರಿಷತ್ ಸದಸ್ಯರಾದ ಎಸ್.ರವಿ, ರಾಮೋಜಿಗೌಡ, ಸುಧಾಮ್ ದಾಸ್ , ಮಾಜಿ ಶಾಸಕ ಎಂ.ಸಿ.ಅಶ್ವತ್ಥ್ , ಬಿಎಂಐಸಿಪಿ ಅಧ್ಯಕ್ಷ ರಘುನಂದನ್ ರಾಮಣ್ಣ, ಮುಖಂಡ ದುಂತೂರು ವಿಶ್ವನಾಥ್ ಮತ್ತಿತರರು ಉಪಸ್ಥಿತರಿದ್ದರು.

### ಡಿ ಬಾಸ್, ಡಿ ಬಾಸ್ ಎಂದ ಅಭಿಮಾನಿಗಳು: ಡಿಕೆಶಿ ಗರಂ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಷಣಕ್ಕೆ ನಿಂತಾಗ ಚಿತ್ರನಟ ದರ್ಶನ್ ಅಭಿಮಾನಿಗಳು ಡಿ ಬಾಸ್ , ಡಿ ಬಾಸ್ ಎಂದು ಘೋಷಣೆ ಕೂಗಿದರು. ಇದರಿಂದ ಕೋಪಗೊಂಡ ಡಿ.ಕೆ.ಶಿವಕುಮಾರ್ ರವರು ಈ ರೀತಿ ಮಾಡಿಯೇ ಹಾಳು ಮಾಡಿಕೊಳ್ಳುತ್ತಿದ್ದೀರಾ, ಸುಮ್ಮನಿರಿ, ಕೋರ್ಟು ವಿಚಾರಗಳನ್ನು ಹೀಗೆ ಬಹಿರಂಗವಾಗಿ ಮಾತನಾಡುವಂತಿಲ್ಲ ಎಂದು ಸಮಾಧಾನ ಮಾಡಿದರು, ಕೇಳಿಸಿಕೊಳ್ಳದ ಅಭಿಮಾನಿಗಳು ಡಿ ಬಾಸ್, ಡಿ ಬಾಸ್ ಎಂದು ಘೋಷಿಸುವುದನ್ನು ಬಿಡಲಿಲ್ಲ, ಬೇಸರಗೊಂಡ ಡಿಕೆಶಿ ಭಾಷಣ ಮೊಟಕುಗೊಳಿಸಿ ಕುರ್ಚಿಯಲ್ಲಿ ಕುಳಿತುಕೊಂಡರು. ಆಗ ಶಾಸಕ ಇಕ್ಬಾಲ್ ಹುಸೇನ್ ರವರು, ಇದು ಅಗೌರವ ದಯವಿಟ್ಟು ಮುಖ್ಯಮಂತ್ರಿಗಳು ಮಾತನಾಡುವಾಗ ಮೌನವಾಗಿರಬೇಕು. ಇದು ನಮ್ಮೂರಿನ ಕಾರ್ಯಕ್ರಮ. ಪ್ರತಿಯೊಬ್ಬರು ಭಕ್ತಿಯಿಂದ ಆಚರಿಸುವ ಕಾರ್ಯಕ್ರಮ. ನಿಶ್ಯಬ್ದವಾಗಿರಬೇಕು ಎಂದು ಮನವಿ ಮಾಡಿಕೊಂಡರು. ಆನಂತರ ಭಾಷಣಕ್ಕಿಳಿದ ಡಿ.ಕೆ.ಶಿವಕುಮಾರ್ ರವರು, ಇದೊಂದು ಪವಿತ್ರವಾದ ಕಾರ್ಯಕ್ರಮ. ನಿಮ್ಮ ಅಭಿಮಾನಕ್ಕೆ ಗೌರವ ಕೊಡುತ್ತೇನೆ. ಕೋರ್ಟಿನ ವಿಚಾರ ಇಲ್ಲಿ ಮಾತನಾಡಲು ಆಗಲ್ಲ. ನಾನು ಮುಖ್ಯಮಂತ್ರಿ ಆಗಿರಬಹುದು, ಜಿಲ್ಲೆಯ ಜನರ ಸೇವಕ. ನಿಮಗೆಲ್ಲ ಒಳ್ಳೆಯದಾಗ ಬೇಕಾದರೆ ಸುಮ್ಮನಿರಿ. ಕಾನೂನು ಚೌಕಟ್ಟಿನಲ್ಲಿಯೇ ಎಲ್ಲ ಕೆಲಸ ಮಾಡಬೇಕು ಎಂದರು. ನಾನು ದೇವರಲ್ಲಿ ಪ್ರಾರ್ಥನೆ ಮಾಡಿದಂತೆ ನೀವು ಪ್ರಾರ್ಥನೆ ಮಾಡಿ. ಪ್ರಯತ್ನ ವಿಫಲವಾದರು ಪ್ರಾರ್ಥನೆ ವಿಫಲವಾಗಲ್ಲ ಎಂದು ಭಾವಿಸಿ ತಾಯಿ ಚಾಮುಂಡಿ ದೇವಿಗೆ ಪೂಜೆ ಸಲ್ಲಿಸಿ, ಎಲ್ಲವೂ ಸರಿ ಹೋಗುತ್ತದೆ ಎಂದು ದರ್ಶನ್ ಅಭಿಮಾನಿಗಳಿಗೆ ಕಿವಿಮಾತು ಹೇಳಿದರು.

### ಮಂತ್ರಿ, ಶಾಸಕ ಎಂಬುದೇನಿಲ್ಲ, ಎಲ್ಲರೂ ಒಟ್ಟಾಗಿಯೇ ಅಭಿವೃದ್ಧಿ

▶▶ ಎಚ್.ಸಿ.ಬಾಲಕೃಷ್ಣ

ಮಾಗಡಿ ಕ್ಷೇತ್ರದ ಶಾಸಕ, ನೂತನ ಸಚಿವ ಎಚ್.ಸಿ. ಬಾಲಕೃಷ್ಣ ಮಾತನಾಡಿ, ಈ ಜಿಲ್ಲೆಯ ಮಣ್ಣಿನ ಮಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಚಾಮುಂಡಿ ತಾಯಿ ಹರಸಿ, ಆಶೀರ್ವಾದಿಸಿದ್ದಾಳೆ. ಜಿಲ್ಲೆಯ ಅಭಿವೃದ್ಧಿ ವಿಷಯದಲ್ಲಿ ಅವರು ಅಭಿಮಾನ ಮತ್ತು ಬದ್ಧತೆ ಇಟ್ಟುಕೊಂಡಿದ್ದಾರೆ. ಡಿಕೆ ಸಹೋದರರ ನೇತೃತ್ವದಲ್ಲಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ. ಇಲ್ಲಿ ನಾನಲ್ಲ, ಇಕ್ಬಾಲ್ ಹುಸೇನ್ ಅವರೇ ಮಂತ್ರಿ. ನಾನು ಮಂತ್ರಿ, ಶಾಸಕ ಎಂಬುದನ್ನು ಮರೆತು ಜಿಲ್ಲೆಯ ಮೂವರು ಶಾಸಕರು ಒಟ್ಟಾಗಿ ಪಣತೊಟ್ಟು ಡಿಕೆಶಿರವರ ಕೈ ಬಲಪಡಿಸಿ, ಅಭಿವೃದ್ಧಿ ಕೆಲಸ ಮಾಡುತ್ತೇವೆ. ನನ್ನನ್ನು ಮಂತ್ರಿಯನ್ನಾಗಿ ಮಾಡಿರುವ ಡಿಕೆಶಿರವರ ಋಣವನ್ನು ಸಾಯುವವರೆಗೂ ತೀರಿಸಲಾಗದು ಎಂದರು.

---

## ಜೀವವೈವಿಧ್ಯ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ



ಮೈಸೂರು: ಭೂಮಿಯ ಮೇಲಿರುವ ಸಸ್ಯ, ಪ್ರಾಣಿ ಹಾಗೂ ಸೂಕ್ಷ್ಮಾಣು ಜೀವಿಗಳ ವೈವಿಧ್ಯತೆಯನ್ನು ಮತ್ತು ಅವುಗಳ ಆವಾಸಸ್ಥಾನಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ ತಿಳಿಸಿದರು.

ಕರ್ನಾಟಕ ಜೀವವೈವಿಧ್ಯ ಮಂಡಳಿ ಹಾಗೂ ತಾಲ್ಲೂಕು ಪಂಚಾಯತ್ ಸಹಯೋಗದೊಂದಿಗೆ ತಾ.ಪಂ. ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ "ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆ ಮತ್ತು ಜೀವ ವೈವಿಧ್ಯತೆಯ ಸಂಘಟನೆ ಕುರಿತು ಜಾಗೃತಿ ಮೂಡಿಸುವ ಕಾರ್ಯಾಗಾರವನ್ನು" ಉದ್ಘಾಟಿಸಿ ಮಾತನಾಡಿದರು.

ನಮ್ಮ ಪರಿಸರದಲ್ಲಿ ಸಮತೋಲನತೆ ಕಾಪಾಡಲು ಮತ್ತು ಶುದ್ಧವಾದ ಗಾಳಿ, ನೀರು ಸೇರಿದಂತೆ ಭವಿಷ್ಯದ ಪೀಳಿಗೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸುವ ಸಲುವಾಗಿ ಜೀವವೈವಿಧ್ಯತೆಯ ಸಂರಕ್ಷಣೆ ಹಾಗೂ ಸುಸ್ಥಿರ ನಿರ್ವಹಣೆ ಅಗತ್ಯವಾಗಿದೆ ಎಂದರು.

ಗ್ರಾಮ ಪಂಚಾಯಿತಿಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಯು ತಮ್ಮ ವ್ಯಾಪ್ತಿಯಲ್ಲಿರುವ ಜೀವ ಸಂಕುಲಗಳನ್ನು ಒಳಗೊಂಡ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಸಂರಕ್ಷಿಸುವ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು. ಕರ್ನಾಟಕ ಜೀವವೈವಿಧ್ಯ ಮಂಡಳಿಯ ತಾಂತ್ರಿಕ ಕಾರ್ಯನಿರ್ವಾಹಕ ಪ್ರಸನ್ನ ಮಾತನಾಡಿ, ಜೀವವೈವಿಧ್ಯ ನಿರ್ವಹಣಾ ಸಮಿತಿಯು ಜೈವಿಕ ಸಂಪನ್ಮೂಲಗಳ ಸಂರಕ್ಷಣೆಗಾಗಿ ಸ್ಥಳೀಯ ಮಟ್ಟದ ಕಾನೂನುಬದ್ಧ ಸಂಸ್ಥೆಯಾಗಿದೆ. ಜೈವಿಕ ಸಂಪನ್ಮೂಲಗಳ ಅಕ್ರಮ ಬಳಕೆ ತಡೆಗಟ್ಟುವಲ್ಲಿ ಹೆಚ್ಚಿನ ಅಧಿಕಾರ ಹೊಂದಿರುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ್ ಯೋಜನಾಧಿಕಾರಿ ಸುರೇಶ್ ಸೇರಿ ಇತರರು ಹಾಜರಿದ್ದರು.

## ಮಹದೇವಪ್ರಸಾದ್ ದೂರದೃಷ್ಟಿಯ ನಾಯಕ

ಗುಂಡ್ಲುಪೇಟೆ: ದೂರದೃಷ್ಟಿಯ ಚಿಂತನೆ ಹಾಗೂ ಶಾಶ್ವತ ಅಭಿವೃದ್ಧಿ ಕಾರ್ಯಗಳ ಮೂಲಕ ಮಾಜಿ ಸಚಿವ ದಿವಂಗತ ಎಚ್.ಎಸ್. ಮಹದೇವ ಪ್ರಸಾದ್ ಅವರು ಜಿಲ್ಲೆಯಲ್ಲಷ್ಟೇ ಅಲ್ಲದೆ ರಾಜ್ಯದ ಜನರ ಮನಸ್ಸಿನಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದು, ಇಂದಿಗೂ ಜನರು ಅವರನ್ನು ಆತ್ಮೀಯವಾಗಿ ಸ್ಮರಿಸುತ್ತಿದ್ದಾರೆ ಎಂದು ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಹೇಳಿದರು.

ಪಟ್ಟಣದ ಎಂಸಿಡಿಸಿಸಿ ಬ್ಯಾಂಕ್ ಮುಂಭಾಗ ಎಚ್.ಎಸ್. ಮಹದೇವಪ್ರಸಾದ್ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಎಚ್.ಎಸ್. ಮಹದೇವಪ್ರಸಾದ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಅನ್ನಸಂತರ್ಪಣೆಗೆ ಚಾಲನೆ ನೀಡಿ ಮಾತನಾಡಿದ ಅವರು ಜಿಲ್ಲಾ ಕೇಂದ್ರ ಚಾಮರಾಜನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಅಭಿಮಾನಿಗಳು ಸ್ವಯಂಪ್ರೇರಿತವಾಗಿ ಮಹದೇವ ಪ್ರಸಾದ್ ಅವರ ಸ್ಮರಣಾರ್ಥ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಸಂತಸ ತಂದಿದೆ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಆದರೆ ಅಧಿಕಾರದಲ್ಲಿರುವ ಅವಧಿಯಲ್ಲಿ ಜನಪರ ಮತ್ತು ಶಾಶ್ವತ ಅಭಿವೃದ್ಧಿ ಕಾರ್ಯಗಳನ್ನು ಹೇಗೆ ಮಾಡಬೇಕು ಎಂಬುದನ್ನು ನನ್ನ ತಂದೆ ಎಚ್.ಎಸ್. ಮಹದೇವಪ್ರಸಾದ್ ತಮ್ಮ ಕಾರ್ಯಶೈಲಿಯ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು. ಜನರ ಪ್ರೀತಿ, ವಿಶ್ವಾಸ ಮತ್ತು ಅಭಿಮಾನವೇ ನಿಜವಾದ ಗೌರವವಾಗಿದೆ. ಅದಕ್ಕಾಗಿ ಅಭಿಮಾನಿಗಳು ಯಾವುದೇ ನಿರೀಕ್ಷೆಯಿಲ್ಲದೆ ಜನ್ಮದಿನ ಆಚರಿಸಿ, ಅವರ ಸೇವೆಯನ್ನು ಸ್ಮರಿಸುತ್ತಿರುವುದು ನಮ್ಮ ಕುಟುಂಬಕ್ಕೆ ಹೆಮ್ಮೆಯ ವಿಷಯವಾಗಿದೆ. ಅಭಿಮಾನಿಗಳ ಈ ಪ್ರೀತಿ ಮತ್ತು ಗೌರವಕ್ಕೆ ನಾನು ಹಾಗೂ ನನ್ನ ಕುಟುಂಬ ಸದಾ ಋಣಿಯಾಗಿದ್ದೇವೆ ಎಂದು ಗಣೇಶ್‌ಪ್ರಸಾದ್ ತಿಳಿಸಿದರು. ಈ ಸಂದರ್ಭದಲ್ಲಿ ಯುವ ಘಟಕದ ಪದಾಧಿಕಾರಿಗಳು, ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಮಹದೇವಪ್ರಸಾದ್ ಅಭಿಮಾನಿಗಳು ಉಪಸ್ಥಿತರಿದ್ದರು.



---

## ಕರಗ ಮಹೋತ್ಸವ, ಅಗ್ನಿಕೊಂಡೋತ್ಸವ ಯಶಸ್ವಿ



ರಾಮನಗರ: ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಸೇರಿದಂತೆ ದಶ ಮಾತೃಕೆಯರ ಕರಗ ಮಹೋತ್ಸವ ಅತ್ಯಂತ ವಿಜೃಂಬಣೆಯಿಂದ ನೆರೆವೇರಿತು. ಮಂಗಳವಾರ ರಾತ್ರಿ ತಮ್ಮ ಸ್ವಸ್ಥಾನದಿಂದ ಹೊರಟ ಕರಗಗಳು, ಇಡೀ ನಗರದಲ್ಲಿ ಸಂಚರಿಸಿ ಭಕ್ತರಿಂದ ಪೂಜೆ ಸ್ವೀಕರಿಸಿದವು.

ಬುಧವಾರ ಬೆಳಿಗ್ಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ, ಮಗ್ಗದ ಕೇರಿ ಮಾರಮ್ಮ ದೇವಿ, ಬಿಸಿಲುಮಾರಮ್ಮ ದೇವಿ ಕರಗ, ಹುಲಿಯೂರಮ್ಮ ದೇವಿ ಕರಗಗಳು ಅಗ್ನಿಕೊಂಡವನ್ನು ಹಾಯ್ದು ದೇವಾಲಯವನ್ನು ಪ್ರವೇಶಿಸಿದವು.

ಚಾಮುಂಡೇಶ್ವರಿ ದೇವಾಲಯಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ರಾತ್ರಿ ಭೇಟಿ ನೀಡಿದರು. ಜೊತೆಯಲ್ಲಿ ಸಚಿವ ಹೆಚ್.ಸಿ. ಬಾಲಕೃಷ್ಣ, ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್, ಮಾಜಿ ಶಾಸಕ ಕೆ. ರಾಜು, ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಪ್ರಾಧಿಕಾರ ಅಧ್ಯಕ್ಷ ಎ.ಬಿ. ಚೇತನ್‌ಕುಮಾರ್, ಮಾಜಿ ಅಧ್ಯಕ್ಷ ಸಿಎನ್‌ಆರ್ ವೆಂಕಟೇಶ್ ಅವರು ಸಹ ದೇವಿಯ ದರ್ಶನ ಪಡೆದುಕೊಂಡರು. ಶ್ರೀ ಚಾಮುಂಡೇಶ್ವರಿ ಕರಗವನ್ನು ದೇವಿಪ್ರಸಾದ್ ಸಿಂಗ್ ಬಾಬು 27ನೇ ಭಾರಿ ಧರಿಸಿದ್ದರು. ಬಿಸಿಲು ಮಾರಮ್ಮ ದೇವಿ ಕರಗವನ್ನು ಮಹೇಂದ್ರ ಧರಿಸಿದ್ದರು. ಐಜೂರು ಆದಿಶಕ್ತಿ ದೇವಿಯ ಕರಗವನ್ನು ವಿಜಯ್ ಧರಿಸಿದ್ದರು. ಮಂಜುನಾಥನಗದ ಹುಲಿಯೂರಮ್ಮ ಕರಗವನ್ನು ಉಮಾಶಂಕರ್ ಧರಿಸಿದ್ದರು.



### ಸುದೀಪ್, ರಚಿತಾರಾಂ ಭಾಗಿ

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಮ್ಯೂಸಿಕಲ್ ನೈಟ್ ಕಾರ್ಯಕ್ರಮದಲ್ಲಿ ಚಿತ್ರನಟರುಗಳಾದ ಸುದೀಪ್, ರಚಿತಾರಾಂ, ಗಿಲ್ಲಿನಟ ಮುಂತಾದವರು ಭಾಗವಹಿಸಿ ಪ್ರೇಕ್ಷಕರ ಮನರಂಜಿಸಿದರು. ಅನುಶ್ರಿ ನಿರೂಪಿಸಿದರು. ಚಂದನ್ ಶೆಟ್ಟಿ ತಂಡ ಸಂಗೀತ ಮತ್ತು ನೃತ್ಯ ಪ್ರದರ್ಶನ ನಡೆಸಿಕೊಟ್ಟರು. ಮಳೆಯ ನಡುವೆಯೇ ಜಮಾಯಿಸಿದ್ದ ಅಪಾರ ಸಂಖ್ಯೆಯ ಪ್ರೇಕ್ಷಕರಿಗೆ ತಂಡ ಸಂಗೀತ ರಸದೌತಣ ಅರ್ಪಿಸಿದರು.

---

## ಚಿರತೆ ದಾಳಿಗೆ ಹಸು ಬಲಿ

ಗುಂಡ್ಲುಪೇಟೆ, ಆ. 5:ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಹಸುವಿನ ಮೇಲೆ ಚಿರತೆ ದಾಳಿ ನಡೆಸಿ ಕೊಂದುಹಾಕಿರುವ ಘಟನೆ ತಾಲೂಕಿನ ಹೂರದಹಳ್ಳಿ ಗ್ರಾಮದಲ್ಲಿ ನಡೆದಿದೆ.



ಹೂರದಹಳ್ಳಿ ಗ್ರಾಮದ ನಿವಾಸಿ ಮಲ್ಲಪ್ಪ ಎಂಬ ರೈತರಿಗೆ ಸೇರಿದ ಹಸು ಇದಾಗಿದೆ. ಇವರು ಜಮೀನಿನಲ್ಲಿ ರಾತ್ರಿ ಹಸುವನ್ನು ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಸಂದರ್ಭದಲ್ಲಿ ಚಿರತೆ ಏಕಾಏಕಿ ಹಸುವಿನ ಮೇಲೆ ದಾಳಿ ನಡೆಸಿರುವುದಾಗಿ ತಿಳಿದುಬಂದಿದೆ. ಬೆಳಿಗ್ಗೆ ಸಾರ್ವಜನಿಕರು ಅರಣ್ಯ ಇಲಾಖೆಗೆ ಮಾಹಿತಿ ತಿಳಿಸಿದ್ದಾರೆ. ತಕ್ಷಣ ಗುಂಡ್ಲುಪೇಟೆ ಬಫರ್ ಜೋನ್ ವಲಯದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಘಟನೆ ಯಿಂದ ಗ್ರಾಮಸ್ಥರು ಹಾಗೂ ರೈತರಲ್ಲಿ ಆತಂಕ ಮನೆಮಾಡಿದ್ದು, ಅರಣ್ಯ ಇಲಾಖೆ ಸೂಕ್ತ ಪರಿಹಾರ ಕ್ರಮ ಕೈಗೊಳ್ಳುವಂತೆ ರೈತರು ಆಗ್ರಹಿಸಿದ್ದಾರೆ. ಅಲ್ಲದೆ, ಗ್ರಾಮ ಸುತ್ತಮುತ್ತ ಹುಲಿ ಸಂಚಾರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಬೋನ್ ಇಟ್ಟು ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಶಾಸನಗಳಿಂದ ಕನ್ನಡದ ಬೆಳವಣಿಗೆ ಅರಿಯೋಣ



ಮೈಸೂರು: ಕನ್ನಡ ಲಿಪಿಯ ಬೆಳವಣಿಗೆ, ಅದರ ಸ್ವರೂಪ ಹಾಗೂ ಬೇರೆ ಬೇರೆ ನಾಡಿನಲ್ಲಿ ಕನ್ನಡ ಲಿಪಿ ಹಾಗೂ ಭಾಷೆ ಹೇಗೆ ಬೆಳವಣಿಗೆ ಹೊಂದಿದೆ ಎಂಬುದು ಶಾಸನಗಳ ತೌಲನಿಕ ಅಧ್ಯಯದಿಂದ ನಮಗೆ ತಿಳಿಯುತ್ತದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಹೇಳಿದರು.

ನಗರದ ಭಾರತೀಯ ಭಾಷಾ ಸಂಸ್ಥಾನದ ಕಚೇರಿಯಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅದ್ಯಯನ ಕೇಂದ್ರ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಬುಧವಾರ ನಡೆದ ಕನ್ನಡನಾಡು ಮತ್ತು ಹೊರನಾಡಿನ ಕನ್ನಡ ಶಾಸನಗಳು ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಬೇರೆ ಬೇರೆ ಭಾಷೆಗಳ ಲಿಪಿಯ ಜತೆಗೆ ಕನ್ನಡ ಲಿಪಿಯು ಯಾವ ರೀತಿಯ ಬಾಂಧವ್ಯ ಸಾಧಿಸಿದೆ ಎಂಬುದು ಗೊತ್ತಾಗುತ್ತದೆ. ಭಾಷಾ ಬಾಂಧವ್ಯದ ಜತೆಗೆ ಲಿಪಿಯ ಬಾಂಧವ್ಯದ ಅನೇಕ ಮಜಲುಗಳನ್ನು ಇಂತಹ ಕಮ್ಮಟದ ಮೂಲಕ ಅಧ್ಯಯನ ಮಾಡಬಹುದಾಗಿದೆ ಎಂದರು.

ಕೆರೆ, ಕಾಲುವೆ, ಅಗ್ರಹಾರ ಹಾಗೂ ಪುರ ನಿರ್ಮಾಣದ ಸೇರಿದಂತೆ ಲೋಕೋಪಯೋಗಿ ಕಾರ್ಯಗಳ ಬಗ್ಗೆ ಶಾಸನಗಳು ಹೆಚ್ಚು ಮಾಹಿತಿ ನೀಡುತ್ತದೆ. ಇದರ ಬಗ್ಗೆ ಇನ್ನೂ ತೌಲನಿಕವಾಗಿ ಹೆಚ್ಚು ಹೆಚ್ಚು ಅಧ್ಯಯನ ಮಾಡಬೇಕಾಗಿದೆ. ವಿದ್ಯಾಭ್ಯಾಸದಲ್ಲಿ ಕರ್ನಾಟಕ ಉಚ್ಚ್ರಾಯ ಸ್ಥಿತಿಯಲ್ಲಿತ್ತು. ಈಗಿನ ವಿಶ್ವವಿದ್ಯಾನಿಲಯಗಳ ರೀತಿಯಲ್ಲೇ 9ನೇ ಶತಮಾನದಲ್ಲಿ ಘಟಿಕಾಸ್ಥಾನಗಳು ಬಳಕೆಯಲ್ಲಿತುಕೊಡಿ ಮಠದ ಶಾಸನದಲ್ಲಿ ಯಾವ ಯಾವ ಶಿಕ್ಷಕರಿದ್ದರು ಎಂಬುದರ ಬಗ್ಗೆ ಮಾಹಿತಿ ಸಿಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾರತೀಯ ಭಾಷಾ ಸಂಸ್ಥಾನ ನಿರ್ದೇಶಕ ಪ್ರೊ.ಬಸವರಾಜ ಕೋಡಗುಂಟಿ, ಶಾಸ್ತ್ರೀಯ ಭಾಷೆಗಳ ಸಂಯೋಜಕ ಡಾ.ಎಲ್.ಆರ್.ಪ್ರೇಮ್ ಕುಮಾರ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಶ್ರೀನಿವಾಸ ಪಾಡಿಗಾರ್ ಮತ್ತಿತರರು ಇದ್ದರು.

---

### ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

## ನಗರಸಭೆ ಮುಂಭಾಗ ಕಸ ಸುರಿದು ಪ್ರತಿಭಟನೆ



ಚಾಮರಾಜನಗರ, ನಗರಸಭೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿ ನಗರಸಭೆ ಮುಂಭಾಗವೇ ಕಸವನ್ನು ಸುರಿದು ಎಸ್.ಡಿ.ಪಿ.ಐ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹಳೆ ಸಾರಿಗೆ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು, ಗುಂಡ್ಲುಪೇಟೆ ವೃತ್ತ, ಸುಲ್ತಾನ್ ಷರೀಫ್ ವೃತ್ತ ಮತ್ತು ಶ್ರೀ ಭುವನೇಶ್ವರಿ ವೃತ್ತದ ಮೂಲಕ ನಗರಸಭೆ ಕಚೇರಿ ಮುಂಭಾಗ ತೆರಳಿ ಕಸವನ್ನು ಸುರಿದು ಕೆಲಕಾಲ ಪ್ರತಿಭಟನೆ ನಡೆಸಿದರು. ನಗರಸಭೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಗಾಳೀಪುರ ಬಡಾವಣೆ ಸೇರಿದಂತೆ ಕೆಲವು ಕಡೆ ಕುಡಿಯುವ ನೀರಿನ ಸಮಸ್ಯೆ ತಾಂಡವವಾಡುತ್ತಿದೆ. ಅಮೃತ್–2 ಯೋಜನೆಯಡಿಯಲ್ಲಿ ನಡೆಯುತ್ತಿರುವ ಕಾಮಗಾರಿಯಿಂದಾಗಿ ರಸ್ತೆಗಳು ಹದಗೆಟ್ಟಿದೆ. ಇ-ಸ್ವತ್ತು ಸೇರಿದಂತೆ ನಗರ ಸಭೆ ವತಿಯಿಂದ ನೀಡುವ ವಿವಿಧ ದಾಖಲೆಗಳು ನೀಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಬಳಿಕ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿದರು.

ಸಾರ್ವಜನಿಕರ ಕೆಲಸಗಳನ್ನು ಮಾಡಲು ವಿಳಂಬ ಧೋರಣೆ ಅನುಸರಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ವಾರ್ಡ್ ಗಳಲ್ಲಿ ನಿರ್ದಿಷ್ಟ ಸಮಯಕ್ಕೆ ಕಸ ತೆರವುಗೊಳಿಸಿ, ಚರಂಡಿ ಹೂಳು ತೆಗೆಸಬೇಕು. ಎಲ್ಲಾ ವಾರ್ಡ್ ಗಳಿಗೂ ಸಮರ್ಪಕ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಅಮೃತ್–2 ಕುಡಿಯುವ ನೀರು ಪೂರೈಕೆ ಯೋಜನೆಯಲ್ಲಿ ನಡೆಯುತ್ತಿರುವ ಕಾಮಗಾರಿ ಯಿಂದ ಹದಗೆಟ್ಟಿರುವ ರಸ್ತೆಗಳನ್ನು ಶೀಘ್ರ ದುರಸ್ತಿಗೊಳಿಸಬೇಕು. ನಗರಸಭೆ ವತಿಯಿಂದ ನೀಡುವ ದಾಖಲೆಗಳನ್ನು ನಿರ್ದಿಷ್ಟ ಸಮಯ ದೊಳಗೆ ನೀಡಬೇಕು. ಗಾಳೀಪುರ ಬಡಾವಣೆಯ ಸಮೀಪದಲ್ಲಿ ಹಾದು ಹೋಗಿರುವ ಬೈಪಾಸ್ ರಸ್ತೆಯಲ್ಲಿ ಹೈಮಾಸ್ಟ್ ದೀಪವನ್ನು ಅಳವಡಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ನಗರಸಭೆ ಮಾಜಿ ಸದಸ್ಯ ಅಬ್ರಾರ್ ಅಹಮ್ಮದ್, ಜಿಲ್ಲಾಧ್ಯಕ್ಷ ಕಲೀಲ್ ಉಲ್ಲಾ,ಉಪಾಧ್ಯಕ್ಷ .ಕೆ.ನಯಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ,ಕಾರ್ಯದರ್ಶಿಗಳಾದ ಜಬೀನೂರ್ ಹಾಗೂ ಸುಹೇಲ್ ಪಾಷ,ಟೌನ್ ಅಧ್ಯಕ್ಷರಾದ ಮಜರ್ ಖಾನ್, ಉಪಾಧ್ಯಕ್ಷರಾದ ಕಿಜರ್ ಅಹಮದ್ ಹಾಗೂ ವಿವಿಧ ವಾರ್ಡ್ ಗಳ ನಿವಾಸಿಗಳು ಹಾಜರಿದ್ದರು.

## ಹನೂರು: ವಯನಾಡು ಮಳೆಯಿಂದ ಕಾವೇರಿ ಉಕ್ಕಿ ಹರಿದಿದೆ

# ಭರಚುಕ್ಕಿ, ಹೊಗೆನಕಲ್‌ನಲ್ಲಿ ಜಲವೈಭವ

**ಹನೂರು:** ಕೇರಳದ ವಯನಾಡಿನಲ್ಲಿ ಸುರಿಯುತ್ತಿರುವ ಭಾರೀ ಮಳೆಗೆ ಕಬಿನಿ ಜಲಾಶಯ ಭರ್ತಿಯಾಗುತ್ತಿದ್ದು, ಹೊರಹರಿವು ಹೆಚ್ಚಳದಿಂದ ಕೊಳ್ಳೇಗಾಲದ ಭರಚುಕ್ಕಿ ಮತ್ತು ಹನೂರು ತಾಲೂಕಿನ ಹೊಗೆನಕಲ್ ಜಲಪಾತಗಳು ಮತ್ತೆ ಜೀವಕಳೆ ಪಡೆದುಕೊಂಡಿವೆ.

**25 ಸಾವಿರ ಕ್ಯೂಸೆಕ್ ಹೊರಹರಿವು – ಭರಚುಕ್ಕಿಯಲ್ಲಿ ಧುಮ್ಮಿಕ್ಕುವ ಜಲ:** ವಯನಾಡಿನಲ್ಲಿ ನಿರಂತರ ಮಳೆಯಾಗುತ್ತಿರುವ ಹಿನ್ನೆಲೆ ಕಬಿನಿ ಜಲಾಶಯದಿಂದ 25 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರನ್ನು ಹೊರಬಿಡಲಾಗುತ್ತಿದೆ. ಇದರಿಂದ ಕೊಳ್ಳೇಗಾಲ ತಾಲೂಕಿನ ಭರಚುಕ್ಕಿ ಜಲಪಾತದಲ್ಲಿ ಜಲವೈಭವ ಮರಳಿದೆ.

ಕಳೆದ ತಿಂಗಳುಗಳಿಂದ ಮಳೆ ಕೊರತೆಯಿಂದ ಕೊರಕಲು ಬಂಡೆಗಳನ್ನೇ ನೋಡಿ ನಿರಾಸೆಗೊಂಡಿದ್ದ ಪ್ರವಾಸಿಗರು, ಈಗ ಅಪಾಯದ ಮಟ್ಟದಲ್ಲಿ ಧುಮ್ಮಿಕ್ಕುತ್ತಿರುವ ಜಲಪಾತವನ್ನು ಕಂಡು ಸಂಭ್ರಮಿಸುತ್ತಿದ್ದಾರೆ. ವಾರಾಂತ್ಯದಲ್ಲಿ ಪ್ರವಾಸಿಗರ ಸಂಖ್ಯೆ ದುಪ್ಪಟ್ಟಾಗಿದೆ.

ಹೊಗೆನಕಲ್‌ನಲ್ಲಿ ರುದ್ರರಮಣೀಯ ದೃಶ್ಯ ಕಾವೇರಿ ನೀರಿನ ಪ್ರಮಾಣ ಹೆಚ್ಚಾದ ಪರಿಣಾಮ ಹನೂರು ತಾಲೂಕಿನ ಪ್ರಸಿದ್ಧ ಹೊಗೆನಕಲ್ ಜಲಪಾತದಲ್ಲೂ ನೀರಿನ ಹರಿವು ಗಣನೀಯವಾಗಿ ಏರಿಕೆಯಾಗಿದೆ. ವಿಶಾಲವಾಗಿ ಹರಿದು ಗುಡುಗುತ್ತಾ ಧುಮ್ಮಿಕ್ಕುವ ಕಾವೇರಿಯ ರುದ್ರರಮಣೀಯ ದೃಶ್ಯವನ್ನು ಕಣ್ತುಂಬಿಕೊಳ್ಳಲು ತಮಿಳುನಾಡು ಮತ್ತು ಕರ್ನಾಟಕದ ಎರಡೂ ಕಡೆಯಿಂದ ಪ್ರವಾಸಿಗರು ಆಗಮಿಸುತ್ತಿದ್ದಾರೆ.



**ಪ್ರವಾಸಿಗರಿಗೆ ಮುನ್ನೆಚ್ಚರಿಕೆ**

ಜಲಪಾತ ವೀಕ್ಷಣೆಗೆ ಬರುವ ಪ್ರವಾಸಿಗರು ನದಿ ತೀರ ಮತ್ತು ಜಾರುವ ಬಂಡೆಗಳ ಹತ್ತಿರ ಹೋಗಬಾರದು ಎಂದು ಸ್ಥಳೀಯ ಆಡಳಿತ ಮತ್ತು ಅರಣ್ಯ ಇಲಾಖೆ ಸೂಚಿಸಿದೆ. ಮಳೆ ಮುಂದುವರಿದರೆ ನೀರಿನ ಮಟ್ಟ ಮತ್ತಷ್ಟು ಏರುವ ಸಾಧ್ಯತೆ ಇದೆ.

ಮೆಟ್ಟೂರು ಜಲಾಶಯಕ್ಕೂ ತಲುಪಿದ ನೀರು ಎರಡು ದಿನಗಳ ಹಿಂದೆ ಕಬಿನಿಯಿಂದ ಬಿಡಲಾದ ನೀರು ಇದೀಗ ತಮಿಳುನಾಡಿನ ಮೆಟ್ಟೂರು ಜಲಾಶಯವನ್ನು ತಲುಪಿದೆ. ಮೆಟ್ಟೂರು ಜಲಾಶಯಕ್ಕೆ ಪ್ರಸ್ತುತ 12 ಸಾವಿರ ಕ್ಯೂಸೆಕ್ ಒಳಹರಿವಿದ್ದು, 1500 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ ಎಂದು ತಮಿಳುನಾಡು ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



# ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ಆಗ್ರಹಿಸಿ ಆ.13ರಂದು ಹೊರಗುತ್ತಿಗೆ ನೌಕರರ ಪ್ರತಿಭಟನೆ

**ಮಂಡ್ಯ:** ಪರಿಷ್ಕೃತ ಕನಿಷ್ಠ ವೇತನವನ್ನು ತಕ್ಷಣ ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರಕಾರಿ ಇಲಾಖೆಗಳ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಆ.13ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯಮಟ್ಟದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಮೈಸೂರು ವಿಭಾಗೀಯ ಅಧ್ಯಕ್ಷ ಎಸ್.ಕೆ. ರಾಜೂಗೌಡ ತಿಳಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಿಂದ ವಿವಿಧ ಉದ್ಯೋಗಗಳ ವೇತನ ಹೆಚ್ಚಳಕ್ಕೆ ಅನುಗುಣವಾಗಿ ಕನಿಷ್ಠ ವೇತನ ಪರಿಷ್ಕರಣೆ ಮಾಡದ ಹಿನ್ನೆಲೆಯಲ್ಲಿ ಹೋರಾಟ ನಡೆಸಲಾಗಿತ್ತು. ಇದರ ಫಲವಾಗಿ ನ್ಯಾಯಾಲಯವು ಮಧ್ಯಪ್ರವೇಶಿಸಿ 2026ರ ಮೇ 22ರಂದು ಶೇ.40ರಷ್ಟು ಕನಿಷ್ಠ ವೇತನ ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸಿದ್ದರೂ ಸರ್ಕಾರ ಇದುವರೆಗೆ ಜಾರಿಗೊಳಿಸಿಲ್ಲ ಎಂದು ಆರೋಪಿಸಿದರು. ಖಾಸಗಿ ಉದ್ಯಮಿಗಳು ನ್ಯಾಯಾಲಯದ ಆದೇಶಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದನ್ನು ನೆಪವಾಗಿಸಿಕೊಂಡ ಸರ್ಕಾರ ಜುಲೈ 29ರಂದು ಕನಿಷ್ಠ ವೇತನ ಹೆಚ್ಚಳಕ್ಕೆ ತಡೆಯೊಡ್ಡುವ ಮೌಖಿಕ ಆದೇಶ ನೀಡಿದೆ. ಈ ಆದೇಶವನ್ನು ಎಲ್ಲ ಇಲಾಖೆಗಳು ತಕ್ಷಣ ಪಾಲಿಸಿದರೂ, ನ್ಯಾಯಾಲಯದ ಅಧಿಸೂಚನೆಗೆ ಎರಡು ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಮಿಕ ಇಲಾಖೆಯ ಧೋರಣೆಯನ್ನು ಖಂಡಿಸಿ ವಿವಿಧ ಸರ್ಕಾರಿ ಇಲಾಖೆಗಳ ಹೊರಗುತ್ತಿಗೆ ನೌಕರರು ಆ.13ರಂದು ನಡೆಯುವ ಆಗ್ರಹ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸರ್ಕಾರದ ಮೇಲೆ ಒತ್ತಡ ಹೇರಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೆಂಕಟಲಕ್ಷ್ಮಿ, ಎಂ. ಚಿನ್ನರಾಜು, ರಾಜೇಶ್ ಹಾಗೂ ಸರೋಜ ಉಪಸ್ಥಿತರಿದ್ದರು.

# ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ

**ಮಂಡ್ಯ:** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ ಇಲ್ಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನದಡಿ ಆಯ್ಕೆಯಾಗಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ (ಕೃಷಿ ಸಖಿ, ಪಶು ಸಖಿ ಇತರೆ ಸಿ.ಆರ್.ಪಿ.) 5 ದಿನಗಳ ಸಾಂಸ್ಥಿಕ ತರಬೇತಿಯನ್ನು ಜಿ. ಪಂ. ಸಿ.ಇ.ಓ. ನಂದಿನಿ ಕೆ. ಆರ್. ಅವರು ಉದ್ಘಾಟಿಸಿದರು.

ಮಂಡ್ಯ ಜಿಲ್ಲೆಯಲ್ಲಿ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಯೋಜನೆಯಡಿ ಕಳೆದ ಸಾಲಿನಲ್ಲಿ ಆಯ್ಕೆ ಮಾಡಲಾಗಿದ್ದ 34 ಗುಚ್ಛಗಳನ್ನು ಈ ಸಾಲಿನಲ್ಲಿಯೂ ಮುಂದುವರೆಸಲಾಗಿದೆ ಹಾಗೂ 2026–27ನೇ ಸಾಲಿನಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿ ಹೆಚ್ಚುವರಿ 60 ಗುಚ್ಛಗಳು ಸೇರಿದಂತೆ ಜಿಲ್ಲೆಯಲ್ಲಿ 70 ಗುಚ್ಛಗಳನ್ನು ಹೆಚ್ಚುವರಿಯಾಗಿ ನಿಗಧಿಪಡಿಸಲಾಗಿದ್ದು, ಪ್ರತಿ ಗುಚ್ಛದಲ್ಲಿ 125 ಎಕರೆ ವಿಸ್ತೀರ್ಣದಂತೆ ಜಿಲ್ಲೆಯಲ್ಲಿ ಒಟ್ಟು 13000 ಎಕರೆ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯಡಿ ಪ್ರತೀ ಫಲಾನುಭವಿಗೆ ಗರಿಷ್ಠ ರೂ. 4000/– ಪ್ರೋತ್ಸಾಹಧನ ನೀಡಲಾಗುವುದು ಎಂದು ತಿಳಿಸಿದರು.

ಪ್ರಸಕ್ತ ಸಾಲಿನ ಹೆಚ್ಚುವರಿ 70 ಗುಚ್ಛಗಳಿಗೆ ಆಯ್ಕೆ ಮಾಡಿಕೊಳ್ಳಲಾಗಿರುವ 140 ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ವಿ.ಸಿ.ಫಾರಂ, ಮಂಡ್ಯ ಮೂಲಕ ಕಾರ್ಯಾಗಾರ ಆಯೋಜಿಸಲಾಗಿದೆ. ನೈಸರ್ಗಿಕ ಕೃಷಿ ಅಳವಡಿಕೆ ಕುರಿತು ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡು ಕ್ಷೇತ್ರಮಟ್ಟದಲ್ಲಿ ರೈತರಿಗೆ ಮಾಹಿತಿ ಒದಗಿಸುವಂತೆ ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಎಲ್ ನಿನೋ ಪರಿಣಾಮದಿಂದ ಮುಂಗಾರು ಕ್ಷೀಣಿಸಿದ್ದು, ಇಂತಹ ಸಂದರ್ಭದಲ್ಲಿ ಸ್ಥಳೀಯ ಸಂಪನ್ಮೂಲ ಬಳಸಿ ನೈಸರ್ಗಿಕ ಕೃಷಿ ಪದ್ಧತಿ ಅಳವಡಿಕೆಗೆ ಪ್ರೇರೇಪಣೆ ನೀಡುವಂತೆ ತಿಳಿಸಿದರು.



ಅತಿಯಾದ ರಾಸಾಯನಿಕ ಬಳಕೆಯಿಂದ ಮಣ್ಣಿನ ಫಲವತ್ತತೆ ಕ್ಷೀಣಿಸಿದ್ದು ಕೃಷಿ ತ್ಯಾಜ್ಯ ಹಾಗೂ ಸ್ಥಳೀಯ ಸಂಪನ್ಮೂಲ ಬಳಸಿ ಜೀವಾಮೃತ, ಬೀಜಾಮೃತ, ಸಾವಯವ ಗೊಬ್ಬರ, ಜೈವಿಕ ಮತ್ತು ಸಸ್ಯಜನ್ಯ ಪರಿಕರಗಳ ಬಳಕೆಗೆ ಹೆಚ್ಚು ಒತ್ತು ನೀಡುವುದು. ಈ ಸಂಬಂಧ ವಿವಿಧ ಸಾವಯವ ಪರಿಕರಗಳನ್ನು ಕಡಿಮೆ ದರದಲ್ಲಿ ರೈತರಿಗೆ ಒದಗಿಸಲು ಅನುವಾಗುವಂತೆ ಜಿಲ್ಲೆಯಲ್ಲಿ ಸ್ಥಾಪನೆಯಾಗುವ 47 ಜೈವಿಕ ಪರಿಕರ ಸಂಪನ್ಮೂಲ ಕೇಂದ್ರಗಳ ಕುರಿತು ರೈತರಿಗೆ ಹೆಚ್ಚಿನ ಪ್ರಚಾರ ಕೈಗೊಳ್ಳಲು ತಿಳಿಸಿದರು.

ಜಾನುವಾರು ಆಧಾರಿತ ಸಮಗ್ರ ಕೃಷಿ ಪದ್ಧತಿಗೆ ಹೆಚ್ಚಿನ ಆದ್ಯತೆ ನೀಡುವುದು. ದೇಶಿ ಹಾಗೂ ಸಾಂಪ್ರದಾಯಿಕ ತಳಿಗಳು ಹೆಚ್ಚಿನ ರೋಗ ಮತ್ತು ಕೀಟ ನಿರೋಧಕ ಶಕ್ತಿಯನ್ನು ಹೊಂದಿದ್ದು, ಉತ್ತಮ ಪೌಷ್ಟಿಕಾಂಶ, ವಿಶಿಷ್ಟ ಪರಿಮಳ ಹಾಗೂ ಔಷಧೀಯ ಗುಣಗಳನ್ನು ಒಳಗೊಂಡಿವೆ ಇವುಗಳ ಬಳಕೆ ಕುರಿತು ರೈತರಿಗೆ ಅರಿವು ಮೂಡಿಸುವಂತೆ ತಿಳಿಸಿದರು.

ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನದಡಿ ಪ್ರಮಾಣೀಕರಣ ಪ್ರಕ್ರಿಯೆಯು ಅತ್ಯಂತ ಪ್ರಮುಖವಾಗಿದ್ದು, ಈ ಬಗ್ಗೆ ಹೆಚ್ಚಿನ ಗಮನಹರಿಸುವಂತೆ ತಿಳಿಸಿದರು. ಸುಸ್ಥಿರ ಆದಾಯಕ್ಕಾಗಿ ಕೃಷಿ ನಂತರ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಒಳಗೊಂಡಂತೆ ವಿವಿಧ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಂಡು ಸ್ವಂತ ಬ್ರಾಂಡ್ ನಲ್ಲಿ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲು ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ ಹಲವಾರು ರೈತರು ನೈಸರ್ಗಿಕ ಕೃಷಿ ಮತ್ತು ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿದ್ದು, ಅಂತಹ ರೈತರ ಮಾರ್ಗದರ್ಶನ ಪಡೆಯಲು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಪಿ.ಎಸ್.ಫಾತಿಮಾ, ಕುಲಸಚಿವರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ರವರು ವಹಿಸಿದ್ದರು ಹಾಗೂ ಶ್ರೀ ಜಿ.ಎಸ್.ಜಯಸ್ವಾಮಿ, ಜಂಟಿ ಕೃಷಿ ನಿರ್ದೇಶಕರು, ಮಂಡ್ಯ ರವರು ಪ್ರಾಸ್ತಾವಿಕ ನುಡಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇತರೆ ಅಧಿಕಾರಿಗಳು: ಡಾ. ದೇವಗಿರಿ, ಸಂಶೋಧನಾ ನಿರ್ದೇಶಕರು, ಕೃಷಿ ವಿ.ವಿ ಡಾ.ಎನ್. ಶಿವಕುಮಾರ್, ಶಿಕ್ಷಣ ನಿರ್ದೇಶಕರು, ಕೃಷಿ ವಿ.ವಿ. ಡಾ.ಸಿ.ರಾಮಚಂದ್ರ, ವಿಸ್ತರಣಾ ನಿರ್ದೇಶಕರು, ಕೃಷಿ ವಿ.ವಿ. ಡಾ.ಯೋಗಾನಂದ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಬೇಸಾಯಶಾಸ್ತ್ರ ಶ್ರೀಮತಿ ಕೆ. ಮಾಲತಿ, ಉಪ ಕೃಷಿ ನಿರ್ದೇಶಕರು, ಮಂಡ್ಯ ಉಪ ವಿಭಾಗ ಶ್ರೀಮತಿ ಕೆ.ಸಿ.ಸುಷ್ಮ, ಉಪ ಕೃಷಿ ನಿರ್ದೇಶಕರು, ಪಾಂಡವಪುರ ಉಪ ವಿಭಾಗ ಜಿ.ಶ್ರೀಹರ್ಷ, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞ), ಜಂಟಿ ಕೃಷಿ ನಿರ್ದೇಶಕರ ಕಚೇರಿ, ಮಂಡ್ಯ ಹಾಗೂ ಇನ್ನಿತರರಿದ್ದರು.

# ಹನೂರು ತಾಲೂಕನ್ನು ಬರಪೀಡಿತ ಎಂದು ಘೋಷಿಸಿ, ತಕ್ಷಣ ಪರಿಹಾರ ನೀಡಿ: ವೆಂಕಟೇಶ್ ಒತ್ತಾಯ

**ಹನೂರು:** ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮುಂಗಾರು ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದು, ರೈತರು ಬೆಳೆದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ಹೀಗಾಗಿ ಹನೂರು ತಾಲೂಕನ್ನು ತಕ್ಷಣವೇ ಬರಪೀಡಿತ ತಾಲೂಕು ಎಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ಆಗ್ರಹಿಸಿದರು.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಿಂದ ಹನೂರು ತಾಲೂಕಿನಲ್ಲಿ ಸಮರ್ಪಕ ಮಳೆಯಾಗಿಲ್ಲ. ಇದರಿಂದ ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಿದೆ. ಕೆಲವು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಸಂಪೂರ್ಣವಾಗಿ ಕುಸಿದಿದ್ದು, ಬೋರ್‌ವೆಲ್‌ಗಳಲ್ಲಿ ನೀರೇ ಬರುತ್ತಿಲ್ಲ. ಇದರಿಂದ ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ" ಎಂದು ಹೇಳಿದರು.

ತಾಲೂಕಿನ 30ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಹನೂರು ವಿಧಾನಸಭಾ ಕ್ಷೇತ್ರಕ್ಕೆ ಕಾವೇರಿ ನದಿಯಿಂದ ಶಾಶ್ವತ ನೀರಾವರಿ ವ್ಯವಸ್ಥೆ ಕಲ್ಪಿಸಿದರೆ ಮಾತ್ರ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆ ಎಂದು ತಿಳಿಸಿದರು.

ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿರುವಂತೆ ಹನೂರು ನೀರಾವರಿ ಯೋಜನೆಗೆ 490 ಕೋಟಿ ರೂ. ಅನುದಾನವನ್ನು ತಕ್ಷಣ ಬಿಡುಗಡೆ ಮಾಡಬೇಕು. ಉಡುತೊರೆ ಹಳ್ಳ ಜಲಾಶಯ ಸೇರಿದಂತೆ ತಾಲೂಕಿನ ಎಲ್ಲಾ ಕೆರೆಕಟ್ಟೆಗಳನ್ನು ತುಂಬಿಸಿದರೆ ಅಂತರ್ಜಲ ಮಟ್ಟ ವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಕ್ಷಣ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.



**490 ಕೋಟಿ ನೀರಾವರಿ ಅನುದಾನ ಬಿಡುಗಡೆ, ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಆಗ್ರಹ**

ಬರಗಾಲದಿಂದ ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗಿದೆ. ತಾಲೂಕಿನಲ್ಲಿ ಗೋಶಾಲೆ ಅಥವಾ ಮೇವು ಬ್ಯಾಂಕ್‌ಗಳನ್ನು ತೆರೆದು ಬರಗೂರು ಮತ್ತು ನಾಟಿ ಹಸುಗಳಿಗೆ ಮೇವು ಪೂರೈಸಬೇಕು ಎಂದು ಮನವಿ ಮಾಡಿದರು.

ಮಲೆ ಮಹದೇಶ್ವರ ಬೆಟ್ಟ ತಪ್ಪಲಿನ ಹಲವು ಗ್ರಾಮಗಳಲ್ಲಿ ಇಂದಿಗೂ ವಿದ್ಯುತ್ ಸಂಪರ್ಕವಿಲ್ಲ. ಜನರು ಕತ್ತಲಲ್ಲಿಯೇ ಜೀವನ ನಡೆಸುತ್ತಿದ್ದಾರೆ. ಸರ್ಕಾರ ಈ ಹಿಂದೆ ವಿದ್ಯುತ್ ಸಂಪರ್ಕ ನೀಡುವುದಾಗಿ ಭರವಸೆ ನೀಡಿತ್ತು. ಆದರೆ ಗೋಪಿನಾಥಂ ಗ್ರಾಮದಲ್ಲಿ ಈಗಾಗಲೇ ಅಳವಡಿಸಿದ್ದ ಕೇಬಲ್ ವೈರ್‌ಗಳನ್ನು ವಾಪಸ್ ತೆಗೆದುಕೊಂಡು ಹೋಗಲಾಗಿದೆ. ಕೂಡಲೇ ಅಗತ್ಯ ಕ್ರಮವಹಿಸಿ ವಿದ್ಯುತ್ ಸಂಪರ್ಕ ನೀಡಬೇಕು. ಇಲ್ಲದಿದ್ದರೆ ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಮಲೆ ಮಹದೇಶ್ವರ ಮಂಡಲ ಅಧ್ಯಕ್ಷ ಮುರುಗೇಶ್, ಯುವ ಮೋರ್ಚಾ ಅಧ್ಯಕ್ಷ ಚಿರಂಜೀವಿ, ಮುಖಂಡರಾದ ಪುಟ್ಟಣ್ಣ ಶರವಣ ಆರ್ಮುಗ ಲೋಕೇಶ್ ಜತ್ತಿ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಕೆರೆ–ಕಟ್ಟೆಗಳನ್ನು ತುಂಬಿಸದಿದ್ದರೆ ಗೊರೂರು ಜಲಾಶಯಕ್ಕೆ ಮುತ್ತಿಗೆ

## ಮಾಜಿ ಸಚಿವ ಡಾ. ನಾರಾಯಣಗೌಡ ಎಚ್ಚರಿಕೆ

**ಕೆ ಆರ್ ಪೇಟೆ:** ಹೇಮಾವತಿಯ ಗೊರೂರು ಜಲಾಶಯದಲ್ಲಿ ಸಾಕಷ್ಟು ನೀರಿರುವುದರಿಂದ ಕೂಡಲೇ ಸಾಹುಕಾರ್ ಚನ್ನಯ್ಯ ನಾಲೆಗೆ ನೀರು ಹರಿಸಿ ಕೆ ಆರ್ ಪೇಟೆ ತಾಲೂಕಿನ ಕೆರೆ–ಕಟ್ಟೆಗಳನ್ನು ತುಂಬಿಸಿ ಜನ–ಜಾನುವಾರು ಗಳು ಕುಡಿಯಲು ನೀರು ಒದಗಿಸಬೇಕು. ಇಲ್ಲದಿದ್ದರೆ ತಾಲೂಕಿನ ರೈತರೊಂದಿಗೆ ಗೊರೂರು ಜಲಾಶಯಕ್ಕೆ ಮುತ್ತಿಗೆ ಹಾಕಿ ಉಗ್ರ ಹೋರಾಟ ನಡೆಸಲಾಗುವುದು ಎಂದು ರಾಜ್ಯ ಸರ್ಕಾರಕ್ಕೆ ಮಾಜಿ ಸಚಿವ ಡಾ. ನಾರಾಯಣಗೌಡ ಎಚ್ಚರಿಕೆ ನೀಡಿದರು

ಅವರು ಇಂದು ಕೆ ಆರ್ ಪೇಟೆ,ಪಟ್ಟಣದ ತಮ್ಮ ನಿವಾಸದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ ಹೇಮಾವತಿ ಜಲಾಶಯ ಯೋಜನೆಯ ವ್ಯಾಪ್ತಿಯಲ್ಲಿರುವ ಕೆರೆಕಟ್ಟೆಗಳು ನೀರಿಲ್ಲದೆ ಬರಿದಾಗಿದ್ದು ಜನಜಾನುವಾರುಗಳು ಕುಡಿಯುವ ನೀರಿಗಾಗಿ ಪರದಾಟ ನಡೆಸುತ್ತಿವೆ. ಆದ್ದರಿಂದ ಇನ್ನೊಂದು ವಾರದೊಳಗೆ ಗೊರೂರು ಜಲಾಶಯದಿಂದ ಸಾಹುಕಾರ್ ಚನ್ನಯ್ಯ ನಾಲೆಗೆ ನೀರು ಹರಿಸಿ ಕೆ ಆರ್ ಪೇಟೆ,ಪಾಂಡವಪುರ, ಚನ್ನರಾಯಪಟ್ಟಣ ಹಾಗೂ ನಾಗಮಂಗಲ ತಾಲೂಕು ವ್ಯಾಪ್ತಿಯ ಕೆರೆಕಟ್ಟೆಗಳನ್ನು ತುಂಬಿಸಲು ನೀರಾವರಿ ಇಲಾಖೆಯ ಅಧಿಕಾರಿಗಳು ಮುಂದಾಗದಿದ್ದರೆ ತಾಲೂಕಿನ ಸಾವಿರಾರು ರೈತರೊಂದಿಗೆ ಹೇಮಾವತಿ ಜಲಾಶಯಕ್ಕೆ ಮುತ್ತಿಗೆ ಹಾಕಿ ಉಗ್ರ ಹೋರಾಟ ನಡೆಸಲಾಗುವುದು ಎಂದು ನಾರಾಯಣಗೌಡ ಎಚ್ಚರಿಕೆ ನೀಡಿದರು. ರೈತರ ಜೀವನದೊಂದಿಗೆ ಚೆಲ್ಲಾಟವಾಡುತ್ತಿರುವ ರಾಜ್ಯ ಸರ್ಕಾರ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಹೇಮಾವತಿ ಜಲಾಶಯದಲ್ಲಿ ಸಾಕಷ್ಟು ನೀರಿದ್ದರೂ ಕೂಡ ಸಾಹುಕಾರ್ ಚನ್ನಯ್ಯ ನಾಲೆಗೆ ನೀರು ಬಿಡದೇ ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ರಾಜ್ಯದ ನೀರಾವರಿ ಸಚಿವರಾದ ರಾಮಲಿಂಗಾರೆಡ್ಡಿಯವರಿಗೆ ರೈತರ ಕಷ್ಟ ಸುಖಗಳು ಗೊತ್ತಿಲ್ಲ ಕೃಷ್ಣರಾಜ ಸಾಗರ ಜಲಾಶಯದಿಂದ ವಿಶ್ವೇಶ್ವರಯ್ಯ ನಾಲೆಗೆ ನೀರು ಬಿಡಿಸಿರುವ ರಾಜ್ಯ ಸರ್ಕಾರವು ಹೇಮಾವತಿ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸುವಂತೆ ಆದೇಶ ನೀಡದೇ ಯೋಜನೆ ವ್ಯಾಪ್ತಿಯ ರೈತರೊಂದಿಗೆ ಚೆಲ್ಲಾಟವಾಡುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ನಾರಾಯಣಗೌಡ ಹೇಮಾವತಿ ಜಲಾಶಯ ಯೋಜನಾ ವ್ಯಾಪ್ತಿಯ ನೀರಾವರಿ ಸಲಹಾ ಸಮಿತಿ ಸಭೆಯನ್ನು ನಡೆಸದೆ ಕಣ್ಮುಚ್ಚಿ ಕುಳಿತಿರುವ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಜನಜಾನುವಾರುಗಳು ಕುಡಿಯಲು ಅನುಕೂಲವಾಗುವಂತೆ ನಾಲೆಗಳಿಗೆ ನೀರು ಹರಿಸಲು ಇನ್ನೂ ನಿರ್ಧಾರವನ್ನೇ ಮಾಡಿಲ್ಲ, ನಮ್ಮ ತಾಲೂಕಿನಲ್ಲಿಯೇ ಹೇಮಾವತಿ ನದಿಯು ಹರಿದು ಹೋಗಿ ಕೃಷ್ಣರಾಜಸಾಗರದ ಒಡಲನ್ನು ಸೇರುತ್ತಿದೆ. ಕೃಷ್ಣರಾಜಸಾಗರ ಜಲಾಶಯದ ಹಿನ್ನೀರು ನಮ್ಮ ತಾಲೂಕಿನ ಸಾವಿರಾರು ಎಕರೆ ಭೂ ಪ್ರದೇಶದಲ್ಲಿ ವ್ಯಾಪಿಸಿದೆ. ಸಾವಿರಾರು ರೈತರು ತಮ್ಮ ಜಮೀನು ಕಳೆದುಕೊಂಡು ಕೆಆರ್ ಎಸ್ ಜಲಾಶಯ ನಿರ್ಮಾಣ ಮಾಡಲು ಭೂಮಿಯನ್ನು ನೀಡಿ ತ್ಯಾಗಿಗಳಾಗಿದ್ದಾರೆ. ದೀಪದ ಕೆಳಗೆ ಕತ್ತಲು ಎನ್ನುವಂತೆ ಹೇಮಾವತಿ ಜಲಾಶಯ ಯೋಜನಾ ವ್ಯಾಪ್ತಿಯ ರೈತರನ್ನು ರಾಜ್ಯ ಸರ್ಕಾರವು ಮಲತಾಯಿ ಮಕ್ಕಳಂತೆ ಕಾಣುತ್ತಿದ್ದು ಹೇಮಾವತಿ ನದಿಗೆ ನಿರ್ಮಿಸಿರುವ ಗೊರೂರು ಜಲಾಶಯವನ್ನು ಆರ್‌ಎಸ್ ಅಣೆಕಟ್ಟೆಗೆ ತುರ್ತು ಸಮಯದಲ್ಲಿ ನೀರು ಹರಿಸಲು ನಿರ್ಮಿಸಿರುವ ಅಣೆಕಟ್ಟೆಯೆಂದು ಭಾವಿಸಿದೆ. ಇಂತಹ ರೈತ ವಿರೋಧಿ ಧೋರಣೆ ಹೊಂದಿರುವ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಂದ ನಾವು ರೈತರಿಗೆ ಸಹಾಯವಾಗುತ್ತದೆ ಎಂದು ಹೇಗೆ ನಿರೀಕ್ಷಿಸಲು ಸಾಧ್ಯ, ಇದಕ್ಕೆಲ್ಲಾ ಉಗ್ರವಾದ ಪ್ರತಿಭಟನೆಯೊಂದೇ ಮದ್ದಾಗಿದೆ. ಒಂದು ವಾರ ಕಾಲಾವಕಾಶ ನೀಡುತ್ತೇನೆ ಅಷ್ಟರೊಳಗೆ ರಾಜ್ಯ ಸರ್ಕಾರ ಹೇಮಾವತಿ ಜಲಾಶಯ ಯೋಜನಾ ವ್ಯಾಪ್ತಿಯ ನಾಲೆಗಳಿಗೆ ನೀರು ಹರಿಸಿ ಕೆರೆ ಕಟ್ಟೆಗಳನ್ನು ತುಂಬಿಸಲು ಮುಂದಾಗದಿದ್ದರೆ ಮುಂದಾಗಲಿರುವ ಅನಾಹುತಕ್ಕೆ ರಾಜ್ಯ ಸರ್ಕಾರವನ್ನೇ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ ಎಂದು ನಾರಾಯಣಗೌಡ ಆಕ್ರೋಶ ವ್ಯಕ್ತಪಡಿಸಿದರು. ಗೊರೂರು ಜಲಾಶಯದ ಮುಖ್ಯ ಇಂಜಿನಿಯರ್ ಭೀಮಾನಾಯಕ್ ಮತ್ತು ಮಂಡ್ಯ ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ನಾರಾಯಣಗೌಡ ತಾಲೂಕಿನ ಕೆರೆ ಕಟ್ಟೆಗಳು ನೀರಿಲ್ಲದೇ ಬರಿದಾಗಿದ್ದು ರೈತರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿಗೆ ಅನುಕೂಲವಾಗುವಂತೆ ಗೊರೂರು ಜಲಾಶಯದಿಂದ ಸಾಹುಕಾರ್ ಚೆನ್ನಯ್ಯ ನಾಲೆಗೆ ನೀರು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸಲು ಮುಂದಾಗದಿದ್ದರೆ ನಮ್ಮ ತಾಲೂಕಿನ ರೈತರು ಬಾರಿ ಸಂಕಷ್ಟಕ್ಕೆ ಸಿಕ್ಕಿ ಬೀಳಬೇಕಾಗುತ್ತದೆ ಎಂದು ಮನವರಿಕೆ ಮಾಡಿ ಕೂಡಲೇ ಹಾಸನ ಜಿಲ್ಲಾಧಿಕಾರಿ ಗಳೊಂದಿಗೆ ಮಾತನಾಡಿ ನಾಳೆಯಿಂದಲೇ ಸಾಹುಕಾರ್ ಚನ್ನಯ್ಯ ನಾಲೆಗೆ ನೀರು ಹರಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಂತೆ ನಾರಾಯಣಗೌಡ ಮನವಿ ಮಾಡಿದರು. ಪ್ರತಿದಿನವೂ 800 ಕ್ಯೂಸೆಕ್ಸ್ ನಂತೆ 15 ದಿನಗಳ ಕಾಲ ನೀರು ಹರಿಸಿದರೆ ಸಾಕು4 ಪಾಂಡವಪುರ ತಾಲೂಕಿನ ಕೆರೆ ತೊಣ್ಣೂರು ದೊಡ್ಡಕೆರೆ, ನಾಗಮಂಗಲದ ಸೂಳೆಕೆರೆ ಸೇರಿದಂತೆ ತಾಲೂಕಿನ 50 ಕ್ಕೂ ಹೆಚ್ಚಿನ ಕೆರೆ ಕಟ್ಟೆಗಳು ತುಂಬಲಿದ್ದು ರೈತರು ನೆಮ್ಮದಿಯಾಗಿ ಜೀವನ ನಡೆಸಲು ಸಹಾಯವಾಗಥಲಿದೆ. ಆದ್ದರಿಂದ ಈ ಕೂಡಲೇ ರಾಜ್ಯ ಸರ್ಕಾರಕ್ಕೆ ನೀರಾವರಿ ಇಲಾಖೆಯ ಅಧಿಕಾರಿಗಳು ವಾಸ್ತವ ಚಿತ್ರಣ ನೀಡಿ ಬಡ ರೈತರಿಗೆ ಅನುಕೂಲ ಮಾಡಿಕೊಡುವಂತೆ ಮಾಜಿ ಸಚಿವ ನಾರಾಯಣಗೌಡ ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಎಸ್.ಟಿ.ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಅಗ್ರಹಾರಬಾಚಹಳ್ಳಿ ಜಗಧೀಶ್, ಪುರಸಭೆ ಮಾಜಿ ಸದಸ್ಯರಾದ ಹೆಚ್.ಆರ್. ಲೋಕೇಶ್, ಕೆ.ವಿನೋದ್ ಕುಮಾರ್, ಕೆ.ಆರ್. ನೀಲಕಂಠ, ಕೆ.ಬಿ.ನಂಧೀಶ್ ರೈತ ಮುಖಂಡರಾದ ರಾಮಕೃಷ್ಣೆ ಗೌಡ, ದಯಾನಂದ ಗೌಡ, ಕರೋಟಿ ಅನಿಲ್, ಅರೆ ಬೊಪ್ಪನಹಳ್ಳಿ ಸುನಿಲ್, ಸಾರಂಗಿ ನಾಗಣ್ಣ, ನಾಯಕನಹಳ್ಳಿ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.



### ಆನಂದ ಶಿಕ್ಷಣ ಸಂಸ್ಥೆಗೆ "ನಿತ್ಯ ಸಚಿವ ಕೆ.ವಿ.ಶಂಕರಗೌಡ ಶಿಕ್ಷಣ ಪ್ರಶಸ್ತಿ ಪ್ರದಾನ

# ಕೆ.ವಿ ಶಂಕರಗೌಡರ ನಿಸ್ವಾರ್ಥ ಸೇವೆ ಸದಾ ಸ್ಮರಣೀಯ: ನಾಗರಾಜ ವಿ ಬೈರಿ

**ಮಂಡ್ಯ:** ನಂಜಮ್ಮ ಮೋಟೆಗೌಡ ಚಾರಿಟಬಲ್ ಹಾಗೂ ಎಜುಕೇಶನ್ ಟ್ರಸ್ಟ್(ರಿ), ಕೊಪ್ಪ, ಮದ್ದೂರು ತಾಲೂಕು ಇವರ ವತಿಯಿಂದ ಮಂಡ್ಯ ನಗರದ ಕರ್ನಾಟಕ ಸಂಘದ ಕೆ.ವಿ ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಿತ್ಯ ಸಚಿವ ಕೆ.ವಿ.ಶಂಕರಗೌಡ ಶಿಕ್ಷಣ ಪ್ರಶಸ್ತಿ ಪ್ರದಾನ ಪ್ರಧಾನ ಸಮಾರಂಭ" ಅದ್ದೂರಿಯಾಗಿ ಜರುಗಿತು.



ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ.ಡಾ.ಬಿ. ಜಯಪ್ರಕಾಶ್ ಗೌಡ ರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹದೇವಪುರ ಗ್ರಾಮದ ಆನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಗಿಣಿಸ್ವಾಮಿ ಅವರಿಗೆ ಈ ವರ್ಷದ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿಯನ್ನು ಮಾಜಿ ಶಾಸಕರಾದ ಎಂ.ಶ್ರೀನಿವಾಸ್ ರವರು ಪ್ರದಾನ ಮಾಡಿದರು.

**ಗ್ರಾಮೀಣ ಶಿಕ್ಷಣದ ಬೆಳವಣಿಗೆ:** ಅಂತರರಾಷ್ಟ್ರೀಯ ಅಲಯನ್ಸ್ ಸಂಸ್ಥೆಯ ಕಾರ್ಯದರ್ಶಿ ಡಾ.ನಾಗರಾಜು ವಿ.ಬೈರಿ ಅವರು ಮಾತನಾಡಿ, "ಒಂದು ಕಾಲದಲ್ಲಿ ಈ ಭಾಗದಲ್ಲಿ ಶಿಕ್ಷಣದ ಮಟ್ಟ ಕೇವಲ 18% ಇತ್ತು. ಈಗ ಅದು 81% ಕ್ಕೆ ಏರಿದೆ. ಇದಕ್ಕೆ ಕಾರಣರಾದ ನಿತ್ಯ ಸಚಿವ ಕೆವಿ ಶಂಕರಗೌಡರ ಸೇವೆ ಸದಾ ಸ್ಮರಣೀಯ. ಗ್ರಾಮೀಣ ಭಾಗದಲ್ಲಿ ಆನಂದ ಸಂಸ್ಥೆಯಂತಹ ಶಾಲೆಗಳು ಬೆಳೆದಿರುವುದು. ಈಗ 650 ಮಕ್ಕಳು ಇಲ್ಲಿ ಓದುತ್ತಿದ್ದಾರೆ. ಮಕ್ಕಳ ಭವಿಷ್ಯಕ್ಕೆ ಇಂಗ್ಲೀಷ್ ಶಿಕ್ಷಣವೂ ಅಗತ್ಯ. ಆದರೆ ಕನ್ನಡ ನಮ್ಮ ನುಡಿ ಅದನ್ನು ಮರೆಯಬಾರದು. ಆನಂದ ಸಂಸ್ಥೆಯಲ್ಲಿ ಮುಂದೆ ಪಿಯುಸಿ ಶಾಖೆ ತೆರೆದರೆ ಮಹದೇವಪುರದ ಹುಡುಗರಿಗೆ ಫಾರಿನ್ ವರೆಗೂ ಹೋಗುವ ಅವಕಾಶ ಸಿಗುತ್ತದೆ" ಎಂದು ಸಲಹೆ ನೀಡಿದರು.

52 ವರ್ಷದ ಶೈಕ್ಷಣಿಕ ಪಯಣದ ಹಾದಿಯಲ್ಲಿ ಮಹದೇವಪುರದ ಆನಂದ ಶಿಕ್ಷಣ ಸಂಸ್ಥೆಯ ಇತಿಹಾಸವನ್ನು ಮಾಜಿ ಶಾಸಕ ಕೆ.ಟಿ ಶ್ರೀಕಂಠೇಗೌಡ ಮೆಲುಕು ಹಾಕಿದರು. "1974ರಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅನುಮತಿಯೊಂದಿಗೆ ಆನಂದ ಹೆಸರಿನಲ್ಲಿ ಪ್ರೌಢಶಾಲೆ ಪ್ರಾರಂಭವಾಯಿತು. ಮೈಸೂರಿನ ತಿರುನಾರಾಯಣ ಮತ್ತು ಅವರ ಕುಟುಂಬದವರು ಸೇರಿ ಸಂಸ್ಥೆಯನ್ನು ನೋಂದಣಿ ಮಾಡಿಸಿದರು. 1998ರಲ್ಲಿ ಪ್ರಾಥಮಿಕ ಶಾಲೆ ಶುರುವಾಗಿ ಈಗ ಎಲ್ ಕೆಜಿ ಯಿಂದ ಎಸ್ಸೆಸ್ಸೆಲ್ಸಿ ವರೆಗೆ ಬೆಳೆದಿದೆ. ಈ ಸಂಸ್ಥೆಯಲ್ಲಿ ಕಲಿತು ಬದುಕು ರೂಪಿಸಿಕೊಂಡವರು ಸಾವಿರಾರು ಜನ ಇದ್ದಾರೆ" ಎಂದು ಹೇಳಿದರು.

**ರಿಮೋಟ್ ಪ್ರದೇಶದಲ್ಲಿ ಶಿಕ್ಷಣ ಕ್ರಾಂತಿ:** ಕೆ.ಟಿ ಹನುಮಂತು ಅವರು ಮಾತನಾಡಿ, "ಇದು ನಾವು ನೀಡುತ್ತಿರುವ 3ನೇ ವರ್ಷದ ಪ್ರಶಸ್ತಿ. ಮೊದಲು ಕನಕಪುರ ರೂರಲ್ ಕಾಲೇಜ್, ನಂತರ ಕೆಆರ್‌ಪೇಟೆ ಲಿಂಗಪ್ಪನವರ ಸಂಸ್ಥೆಗೆ ಕೊಟ್ಟಿದ್ದೇವೆ. ಈ ವರ್ಷ ಮಹದೇವಪುರ ಆನಂದ ಸಂಸ್ಥೆಗೆ ಕೊಡುತ್ತಿದ್ದೇವೆ. 50 ವರ್ಷದ ಹಿಂದೆ ಕಾವೇರಿ ದಾಟಲು ತೆಪ್ಪವೇ ಆಧಾರವಾಗಿದ್ದ ಕಾಲದಲ್ಲಿ ಸಂಸ್ಥೆ ಸ್ಥಾಪಿಸಿದ್ದು ನಿಜಕ್ಕೂ ಸಾಹಸದ ಕೆಲಸ. ಕೆ.ವಿ ಶಂಕರಗೌಡರು ಪ್ರೌಢಶಾಲೆ ಓದಲು ಚನ್ನಪಟ್ಟಣಕ್ಕೆ ಹೋಗಿ ಬರುತ್ತಿದ್ದರು. ಅಂತಹ ಕಷ್ಟದ ನಡುವೆಯೂ ಅವರು ಶಿಕ್ಷಣಕ್ಕೆ ಕೊಟ್ಟ ಕೊಡುಗೆ ಅಪಾರ. ಅವರ ಹೆಸರಿನಲ್ಲಿ ಪ್ರತಿ ವರ್ಷ 12 ಪ್ರಶಸ್ತಿಗಳನ್ನು ನೀಡುತ್ತಿದ್ದೇವೆ" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆನಂದ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಜೆ.ಪಾಪೇಗೌಡ, ಖಜಾಂಚಿ ಎಂ.ಪಿ ಸ್ವಾಮಿಗೌಡ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸ್ಥಳೀಯ ಗಣ್ಯರು ಭಾಗವಹಿಸಿದ್ದರು.

# ಮಂಡಲ ಕಲೆ....ಎಂಬ ಅದ್ವಿತೀಯ ಕಲಾ ರಚನೆ



| ವೀಣಾ ಹೇಮಂತ್‌ಗೌಡ ಪಾಟೀಲ್

ಒಂದೇ ರೀತಿಯ ಸಮ್ಮಿತಿಯ ರಚನೆಯನ್ನು ಹೊಂದಿರುವ ಮಂಡಲ ಕಲೆಗೆ ತನ್ನದೇ ಆದ ಶ್ರೀಮಂತ ಇತಿಹಾಸವಿದೆ ಆಧ್ಯಾತ್ಮಿಕ ಅಭಿವ್ಯಕ್ತಿಯ ಈ ಕಲೆಗೆ ಶತಶತಮಾನಗಳ ಹಲವಾರು ಸಾಂಸ್ಕೃತಿಕ ಅಭಿವ್ಯಕ್ತಿಯ ಮಹತ್ವವಿದೆ.

ಮಂಡಲ ಕಲೆಗೆ ಅತ್ಯಂತ ದುಬಾರಿ ಸಾಮಾನುಗಳ ಅವಶ್ಯಕತೆ ಇದೆ ಎಂದು ಸಾಕಷ್ಟು ಜನ ಭಾವಿಸುತ್ತಾರೆ.

ಬಗೆ ಬಗೆಯ ಪೆನ್ಸಿಲ್ ಗಳು ವಿವಿಧ ವಿನ್ಯಾಸಗಳನ್ನು ಚಿತ್ರಿಸುವ ಸಲಕರಣೆಗಳು ಬೇಕೇ ಬೇಕು ಎಂದೇನಿಲ್ಲ. ಕೇವಲ ಒಂದು ಪೆನ್ನು ಮತ್ತು ಪೆನ್ಸಿಲ್ ನ್ನು ಬಿಳಿಹಾಳೆಯ ಮೇಲೆ ಮೂಡಿಸುವ ಮೂಲಕ ನಾವು ಮಂಡಲಕಲೆಯನ್ನು ರಚಿಸಬಹುದು.

ಸಮತೋಲನ, ವಿವಿಧ ಬಗೆಯ ವಿನ್ಯಾಸ ಹಾಗೂ ಭಾವನೆಗಳ ಮಿಶ್ರಣ ಮಂಡಲಕಲೆ ಇದರಲ್ಲಿ ಬರುವ ವೃತ್ತಗಳು ಮಂಡಲಕಲೆಯ ಭಾಗವೇ ಹೊರತು ನಿಯಮಗಳಲ್ಲ.... ಬಹಳಷ್ಟು ಜನ ಮಂಡಲ ಕಲೆಯನ್ನು ವೃತ್ತಗಳನ್ನು ಹಾಕುವ ವಿಧಾನ ಎಂದು ಭಾವಿಸುತ್ತಾರೆ ಆದರೆ ಅದು ಸಂಪೂರ್ಣ ನಿಜವಲ್ಲ.

ಆಸಕ್ತಿ ಇರುವ ಯಾರು ಬೇಕಾದರೂ ಮಂಡಲ ಕಲೆಯನ್ನು ಕಲಿಯಬಹುದು ಇದರಲ್ಲಿ ಕಲಾತ್ಮಕ ಅಭಿವ್ಯಕ್ತಿಯ ಅವಶ್ಯಕತೆ ಇಲ್ಲ ಇಲ್ಲಿ ಮುಖ್ಯವಾಗಿ ಬೇಕಾಗಿರುವುದು ತಾಳ್ಮೆ, ನಿರಂತರ ಪ್ರಯತ್ನ ಹಾಗೂ ತರಬೇತಿ. ಮಂಡಲ ಕಲೆಯನ್ನು ಕಲಿಯುವವರು ಕಲಾವಿದರೇ ಆಗಬೇಕೆಂದಿಲ್ಲ ಕಲಾವಂತಿಕೆಯನ್ನು ಮೆಚ್ಚುವ ಆಸ್ವಾದಿಸುವ ಹಾಗೂ ರಚಿಸುವ ಆಶಯ ಹೊಂದಿದ್ದರೆ ಸಾಕು.

ಮೊದಲ ಬಾರಿಗೆ ಮಂಡಲ ಕಲೆ ಪರಿಪೂರ್ಣತೆ ಹಾಗೂ ಸಾಮ್ಯತೆಯನ್ನು ಹೊಂದಿರಲೇಬೇಕಿಲ್ಲ. ಇಲ್ಲಿ ನಮ್ಮ ಗುರಿ ಕೇವಲ ಪರಿಪೂರ್ಣತೆಯಲ್ಲ , ಧ್ಯಾನಪೂರ್ವಕವಾದ ಅಭ್ಯಾಸವಾಗಿರಬೇಕು.

ಬಹುತೇಕ ಜನರು ಮಂಡಲ ಕಲೆಯನ್ನು ಮಾನಸಿಕ ನೆಮ್ಮದಿ ಹಾಗೂ ವಿಶ್ರಾಂತಿಗಾಗಿ ರಚಿಸುತ್ತಾರೆ ಎಂಬ ಭಾವ ಜನರಲ್ಲಿದೆ. ಮಂಡಲ ಕಲೆಯು ಮೆದುಳಿನ ನರಗಳನ್ನು ಶಾಂತವಾಗಿಸುತ್ತದೆ ಎಂಬುದು ನಿಜ, ಆದರೆ ಅದೇ ಸಮಯದಲ್ಲಿ ಮಂಡಲಕಲೆಯ ನಿರಂತರ ಅಭ್ಯಾಸವು ನಿಖರವಾದ ಗುರಿ, ಕ್ರಿಯಾಶೀಲತೆ ಹಾಗೂ ಸ್ವಯಂ ಅಭಿವ್ಯಕ್ತಿಯನ್ನು ತೋರ್ಪಡಿಸುತ್ತದೆ.

ಮಂಡಲ ಕಲೆಯ ನಿಜ ಪಯಣ ಆರಂಭವಾಗುವುದು ಒಂದು ಪುಟ್ಟ ಗುರಿಯ ಮೂಲಕ. ವಿವಿಧ ವಿನ್ಯಾಸಗಳನ್ನು ರಚಿಸುವ ನಿಟ್ಟಿನಲ್ಲಿ ನಮ್ಮ ಸಂಪೂರ್ಣ ಲಕ್ಷವನ್ನು ಕೊಡುವ ಮೂಲಕ. ವಿನ್ಯಾಸಗಳ ರಚನೆಯ ಸಮಯದಲ್ಲಿ ಮಾನಸಿಕವಾಗಿ ಅತ್ಯಂತ ಪ್ರಶಾಂತ ಭಾವ ಉದ್ಭವವಾಗುತ್ತದೆ, ಜೊತೆಗೆ ಸೃಜನಶೀಲತೆಗೂ ಕೂಡ ಅವಕಾಶ ದೊರೆಯುತ್ತದೆ. ಮಂಡಲ ಕಲೆಯು ಸ್ವಯಂ ಪ್ರೀತಿಯನ್ನು ಅಭಿವ್ಯಕ್ತಿಸುವ ಅತ್ಯುತ್ತಮ ರೇಖಾಚಿತ್ರವಾಗಿರುತ್ತದೆ.

ಮಂಡಲಕಲೆಯನ್ನು ಕಲಿಯಬೇಕು ಎಂದು ಇಚ್ಛಿಸುವವರು ಮೊದಲು ತಮ್ಮೊಳಗಿನ ಸೃಜನಶೀಲತೆಯು ಹೊಮ್ಮುವ ನಿಟ್ಟಿನಲ್ಲಿ ಕ್ರಿಯಾಶೀಲರಾಗಬೇಕು. ಪ್ರತಿದಿನವೂ ಹಂತ ಹಂತವಾಗಿ ರಚನೆಯನ್ನು ಆರಂಭಿಸಿ ಹೆಚ್ಚಿಸುತ್ತಾ ಹೋಗಬೇಕು, ಜಾಣ್ಮೆಯನ್ನು






ಹೆಚ್ಚಿಸಿಕೊಳ್ಳಬೇಕು, ಜೊತೆಗೆ ರಚನೆಯ ಸಮಯವನ್ನು ಆನಂದಿಸಬೇಕು ಹಾಗೂ ಅದರಲ್ಲಿಯೇ ವಿಶ್ರಾಂತಿಯ ಅನುಭವವನ್ನು ಪಡೆಯಬೇಕು.

ಮಂಡಲ ಕಲೆಯು ನಮ್ಮ ನಿಖರತೆಯನ್ನು ಹಾಗೂ ವಿವಿಧ ವಿನ್ಯಾಸಗಳನ್ನು ಹೆಚ್ಚಿಸಿಕೊಳ್ಳುವ ಕಲೆಯಾಗಿದೆ. ಪ್ರತಿ ಬಾರಿಯೂ ನೀವು ರಚಿಸುವ ಮಂಡಲ ಕಲೆ ಚಿತ್ರವು ಪರಿಪೂರ್ಣವಾಗಿರಬೇಕಾಗಿಲ್ಲ ಅದು ನಿಮ್ಮ ಅಭಿವ್ಯಕ್ತಿಯಾಗಿದ್ದರೆ ಸಾಕು. ನೀವು ಎಳೆಯುವ ಪ್ರತಿ ರೇಖೆಯು ಉನ್ನತಿಕೆಯ ಸಂಕೇತ.

ನಿಮ್ಮ ಅಭಿವ್ಯಕ್ತಿಯ ಈ ಕಲೆಯನ್ನು ಇತರರ ಕಲೆಯೊಂದಿಗೆ ಹೋಲಿಸಬೇಡಿ ನಿಮ್ಮ ಮಂಡಲ ಕಲೆಯ ಪಯಣ ವಿಶಿಷ್ಟ ಹಾಗೂ ಕೇವಲ ನಿಮ್ಮದಾಗಿದ್ದರೆ ಸಾಕು.

ಮಂಡಲ ಕಲೆಗೆ ಸಾಕಷ್ಟು ಸಮಯದ ಅವಶ್ಯಕತೆ ಇದೆ, ನಿಜ ಹಾಗೆಂದು ಒಂದೇ ಸಮನೆ ದಣಿದು ಮಾಡುವುದು ಬೇಡ. ಮಧ್ಯದಲ್ಲಿ ಒಂದಷ್ಟು ಬ್ರೇಕ್ ತೆಗೆದುಕೊಳ್ಳುವುದು ಒಳ್ಳೆಯದು ವಿಶ್ರಾಂತಿ ತೆಗೆದುಕೊಳ್ಳುವುದು ಎಂದರೆ ಒಂದು ಹೆಜ್ಜೆ ಹಿಂದೆ ಸರಿದಂತಲ್ಲ ಅದು ಈ ಕಲಿಯುವಿಕೆಯ ರಚನೆಯ ಒಂದು ಭಾಗ.

ಮಂಡಲ ಕಲೆಯು ನಿಮ್ಮ ಅಭಿವ್ಯಕ್ತಿಯ ಭಾಗ ಎಂದು ಹೇಳುತ್ತಾರಲ್ಲವೇ... ಇದಕ್ಕೆ ಕಾರಣವೂ ಇದೆ

* ನೀವು ರಚಿಸುವ ವೃತ್ತಗಳು ಹಾಗೂ ಚುಕ್ಕಿಗಳು ನೀವು ಸಮಗ್ರತೆಯನ್ನು, ಸಾಮರಸ್ಯವನ್ನು ಹಾಗೂ ಇತರರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಲು ಇಚ್ಛಿಸುತ್ತೀರಿ ಎಂಬುದನ್ನು ತೋರುತ್ತದೆ.
* ಮುಕ್ತ ಹಾಗೂ ಭೂಮಿ ತೂಕದ ಮನಸ್ಥಿತಿ ನಿಮ್ಮದಾಗಿದ್ದು ನೀವು ಮಾಡುವ ಎಲ್ಲಾ ಕೆಲಸದಲ್ಲೂ ಒಂದು ಸಮತೋಲನವನ್ನು ನೀವು ಹೊಂದಿರುತ್ತೀರಿ.
* ಹೂವಿನ ದಳಗಳು... ನೀವು ಹೂವಿನ ದಳಗಳನ್ನು ರಚಿಸುತ್ತಿದ್ದರೆ ನೀವು ಸಹಾನುಭೂತಿಯನ್ನು ಹೊಂದಿರುವ ಪೋಷಕ ಗುಣವನ್ನು ಹೊಂದಿರುವ ಹಾಗೂ ಸೌಂದರ್ಯ ಪ್ರಜ್ಞೆಯನ್ನು ಹೊಂದಿರುವ ವ್ಯಕ್ತಿಯಾಗಿದ್ದೀರಿ ಎಂದರ್ಥ.
* ವ್ಯಕ್ತಿಯ ಸಮಗ್ರ ಬೆಳವಣಿಗೆ, ಪ್ರಕೃತಿ ಹಾಗೂ ಅರ್ಥಪೂರ್ಣ ಬಾಂಧವ್ಯಗಳಲ್ಲಿ ನಿಮಗೆ ಆಸಕ್ತಿ ಇದೆ ಎಂಬುದನ್ನು ಇದು ತೋರುತ್ತದೆ.
ಸುರುಳಿ ರಚನೆಗಳು... ಸುರುಳಿ ಆಕಾರದ ರಚನೆಗಳನ್ನು ನೀವು ಇಷ್ಟಪಟ್ಟು ರಚಿಸುತ್ತೀರಿ ಎಂದಾದರೆ ನೀವು ಬೆಳವಣಿಗೆ ಮತ್ತು ಆತ್ಮ ಸಾಕ್ಷಾತ್ಕಾರದ ಭಾವವನ್ನು ಹೊಂದಿದ್ದೀರಿ ಎಂದರ್ಥ.
* ನೀವು ಅತ್ಯಂತ ಸುಲಭವಾಗಿ ಬದಲಾವಣೆಯನ್ನು ಒಪ್ಪಿಕೊಳ್ಳುತ್ತೀರಿ. ಬದುಕಿನ ಪ್ರಕ್ರಿಯೆಗಳನ್ನು ನೀವು ನಂಬುತ್ತೀರಿ ಹಾಗೂ ನಿಮ್ಮನ್ನು ನೀವು ಹೆಚ್ಚು ಪ್ರೀತಿಸುತ್ತೀರಿ ಎಂದರ್ಥ.
* ಜಾಮಿತಿಯ ಆಕಾರಗಳು.. ನೀವು ತಾರ್ಕಿಕವಾಗಿ ನಿಖರ ಗುರಿಯ ಕುರಿತು ಹಾಗೂ ಉತ್ತಮ ರಚನಕಾರರಾಗಿ ಇರುವಿರಿ. ನಿಮ್ಮಲ್ಲಿ ಸ್ಪಷ್ಟತೆ ಇದ್ದು ನಿಖರವಾದ ಗುರಿಯನ್ನು ಹೊಂದಿರುತ್ತೀರಿ. ಅನವಶ್ಯಕ ಗೊಂದಲಗಳನ್ನು ಸರಿ ಮಾಡಿ ಸಮತ್ವವನ್ನು ತರುತ್ತೀರಿ.
* ಹೃದಯದಾಕಾರದ ಚಿಹ್ನೆಗಳನ್ನು ನೀವು ಬಳಸುತ್ತೀರಿ ಎಂದಾದರೆ ನೀವು ಪ್ರೀತಿ, ಕರುಣೆ ಮತ್ತು ಅತ್ಯಂತ ಆಳವಾದ ಭಾವನಾತ್ಮಕ ಭಾವಗಳನ್ನು ಹೊಂದಿದ್ದೀರಿ. ನೀವು ಉಧಾರಿಗಳಾಗಿದ್ದು ಸಹಾನುಭೂತಿಯನ್ನು ಹೊಂದಿರುತ್ತೀರಿ. ಜೊತೆಗೆ ನೀವು ಅತ್ಯಂತ ಆಳವಾದ ಹಾಗೂ ಅಧಿಕೃತ ಸಂಬಂಧಗಳನ್ನು ಗೌರವಿಸುತ್ತೀರಿ ಎಂದರ್ಥ.
* ಪ್ರಾಕೃತಿಕ ವಸ್ತುಗಳ ರಚನೆ.... ನಿಮ್ಮ ರಚನೆಗಳಲ್ಲಿ ಪ್ರಾಕೃತಿಕ ವಸ್ತುಗಳನ್ನು ನೀವು ಅಳವಡಿಸಿದ್ದರೆ ನೀವು ಅತ್ಯಂತ ಮುಕ್ತ ಹಾಗೂ ಸ್ವತಂತ್ರ ಮನಸ್ಥಿತಿಯ ವ್ಯಕ್ತಿಯಾಗಿದ್ದು ಪ್ರಕೃತಿಯೊಂದಿಗೆ ಉತ್ತಮ ಸಮತೋಲನವನ್ನು ಹೊಂದಿರುತ್ತೀರಿ. ಪ್ರಕೃತಿಯಲ್ಲಿ ನೀವು ಅತ್ಯಂತ ನೆಮ್ಮದಿ ಹಾಗೂ ಭರವಸೆಯನ್ನು ಹೊಂದಿರುತ್ತೀರಿ. ಬದುಕಿನ ನೈಸರ್ಗಿಕ ಹರಿವನ್ನು ಬಯಸುವ ನೀವು ನಿಮಗೆ ಪ್ರಾಕೃತಿಕವಾಗಿ ದೊರೆಯುವ ಸಂಜ್ಞೆಗಳನ್ನು ಬಲವಾಗಿ ನಂಬುತ್ತೀರಿ.

ಮಂಡಲಕಲೆಯಲ್ಲಿ ಯಾವುದೇ ಸರಿ ಅಥವಾ ತಪ್ಪು ರಚನೆಗಳು ಇಲ್ಲ . ನೀವು ರಚಿಸುವ ಮಂಡಲದ ಕಲೆಯು ನಿಮ್ಮ ಭಾವಾಭಿವ್ಯಕ್ತಿಯ ಪ್ರತಿಫಲನ. ಅತ್ಯಂತ ಸುಂದರ, ಅನನ್ಯ ಹಾಗೂ ವಿಕಸಿತ ಸೌಂದರ್ಯ ಮಂಡಲ ಕಲೆಯದ್ದು.

ಮಂಡಲಕಲೆಯನ್ನು ಒಂದೇ ಬಾರಿಗೆ ಅವಸರದಿಂದ ಕಲಿಯುವ ಅವಶ್ಯಕತೆ ಇಲ್ಲ ಇದೊಂದು ನಿಧಾನ ಪ್ರಕ್ರಿಯೆ... ನಿಜವಾದ ಮಂಡಲ ಕಲೆಯ ಸೌಂದರ್ಯ ಅಡಗಿರುವುದು ಅದರ ವಿಶಿಷ್ಟವಾದ ಪ್ರಕ್ರಿಯೆಯಲ್ಲಿ.

ವಿವಿಧ ವಿನ್ಯಾಸಗಳನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ನಿಮ್ಮ ಕ್ರಿಯಾಶೀಲತೆಯನ್ನು ಬಳಸಿ, ರಚನೆಗಳನ್ನು ಸಹಜವಾಗಿ ಪೂರ್ಣಗೊಳಿಸುವ ಪ್ರಕ್ರಿಯೆಯಲ್ಲಿ.

ಮಂಡಲ ಕಲೆ ರಚನೆಯಲ್ಲಿ ವಿಶ್ರಾಂತಿ, ಉಸಿರಾಟ ಕ್ರಿಯೆ ಹಾಗೂ ರಚನೆಯ ಪ್ರಕ್ರಿಯೆಗಳು ಹೆಚ್ಚು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಮಂಡಲ ಕಲೆಯಲ್ಲಿ ನೀವು ಒಮ್ಮಿಂದೊಮ್ಮೆಲೆ ಕಲಾವಿದರಾಗಲು ಸಾಧ್ಯವಿಲ್ಲ ನಿಧಾನವಾಗಿ ನಿಮ್ಮ ಕಲೆ ವಿಕಸಿತವಾಗುತ್ತಾ ಹೋಗುತ್ತದೆ. ನಿಧಾನವಾಗಿ ನೀವು ನಿಮ್ಮ ಕೈಯಾರೆ ತಯಾರಿಸಿದ ರಚನೆಯನ್ನು ಇತರರಿಗೆ ಉಡುಗೊರೆಯಾಗಿ ನೀಡಬಹುದು ಆ ರೀತಿ ನಿಮ್ಮ ಉಡುಗೊರೆಯನ್ನು ಸ್ವೀಕರಿಸಿದವರ ಕಣ್ಣಲ್ಲಿನ ಹೊಂಬೆಳಕನ್ನು ಸಂಭ್ರಮಿಸಿ.

ಮಂಡಲ ಕಲೆ ಬ್ರಹ್ಮ ವಿದ್ಯೆಯೇನಲ್ಲ...ಕಲಿಯುವ ಆಸಕ್ತಿ ಮತ್ತು ಶ್ರದ್ಧೆ ಇದ್ದರೆ ಖಂಡಿತವಾಗಿಯೂ ನಿಮಗೆ ಆ ಕಲೆ ಹಸ್ತಗತವಾಗುತ್ತದೆ ಅಷ್ಟೇ?

ಏನಂತೀರಾ ಸ್ನೇಹಿತರೆ?

# ಎಂಆರ್‌ಐಟಿಯಲ್ಲಿ ಎಐ ಮೌಲ್ಯವರ್ಧಿತ ಕಲಿಕಾ ಮಾರ್ಗ ಯೋಜನೆ ಪರಿಚಯ




**ಮಂಡ್ಯ:** ಮೈಸೂರು ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಆರ್‌ಐಟಿ) ಕಾಲೇಜಿನಲ್ಲಿ ಕೋರ್ಸ್‌ವಾರು ಎಐ (ಕೃತಕ ಬುದ್ಧಿಮತ್ತೆ) ಮೌಲ್ಯವರ್ಧಿತ ಕಲಿಕಾ ಮಾರ್ಗ ಯೋಜನೆಯನ್ನು ತಾಂತ್ರಿಕ ಶಿಕ್ಷಣದಲ್ಲಿ ಪರಿಚಯಿಸಲಾಗುತ್ತಿದೆ ಎಂದು ಮೈಸೂರು ರಾಯಲ್ ಎಜುಕೇಷನ್ ಟ್ರಸ್ಟ್‌ನ ಖಜಾಂಚಿ ಡಾ. ರಾಮಲಿಂಗಯ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಈ ರೀತಿಯ ಯೋಜನೆಯನ್ನು ಎಂಆರ್‌ಐಟಿ ಕಾಲೇಜಿನಲ್ಲಿ ಮಾತ್ರವೇ ಆರಂಭಿಸಲಾಗುತ್ತಿದ್ದು, ಎಲ್ಲ ಕೋರ್ಸ್‌ಗಳ ಏಳನೇ ಸೆಮಿಸ್ಟರ್‌ನಲ್ಲಿ ವಾರಕ್ಕೆ ಮೂರು ಮೀಸಲು ಗಂಟೆಗಳ ತರಬೇತಿ ನೀಡಲಾಗುವುದು ಎಂದು ಹೇಳಿದರು. ವಾರಕ್ಕೆ ಮೂರು ಗಂಟೆಗಳಂತೆ ಪ್ರತಿ ಸೆಮಿಸ್ಟರ್‌ಗೆ 42 ಗಂಟೆ ಹಾಗೂ ಒಟ್ಟು ಏಳು ಸೆಮಿಸ್ಟರ್‌ಗಳಲ್ಲಿ 294 ಗಂಟೆಗಳ ಎಐ ತರಬೇತಿ ನೀಡಲಾಗುತ್ತದೆ. ಪ್ರತಿ ವಿಭಾಗದ ಅಗತ್ಯಕ್ಕೆ ಅನುಗುಣವಾಗಿ ಪ್ರತ್ಯೇಕ ಎಐ ಕಲಿಕಾ ಟ್ರ್ಯಾಕ್‌ಗಳನ್ನು ರೂಪಿಸಲಾಗಿದೆ ಎಂದು ವಿವರಿಸಿದರು.

ಅದರಂತೆ, ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಜೆನ್ ಎಐ ಪ್ರಾಡಕ್ಟ್ ಎಂಜಿನಿಯರಿಂಗ್, ಎಐ ಮತ್ತು ಮೆಷಿನ್ ಲರ್ನಿಂಗ್ ವಿಭಾಗಕ್ಕೆ ಎಂಎಲ್‌ಆಪ್ಸ್ ಮತ್ತು ಏಜೆಂಟಿಕ್ ಸಿಸ್ಟಮ್ಸ್, ಮೆಕಾನಿಕಲ್ ವಿಭಾಗಕ್ಕೆ ಎಐ ಚಾಲಿತ ಉತ್ಪಾದನಾ ತಂತ್ರಜ್ಞಾನ, ಐಎಸ್‌ಇ ವಿಭಾಗಕ್ಕೆ ಫುಲ್-ಸ್ಟಾಕ್ + ಎಐ ಇಂಟಿಗ್ರೇಷನ್, ಇಸಿಇ ವಿಭಾಗಕ್ಕೆ ಎಡ್ಜ್ ಎಐ ಮತ್ತು ವಿಎಲ್‌ಎಸ್‌ಐ, ಸಿವಿಲ್ ವಿಭಾಗಕ್ಕೆ ಎಐ ಇನ್ ಕನ್‌ಸ್ಟ್ರಕ್ಷನ್ ಮತ್ತು ಜಿಯೋಎಐ ಎಂಬ ವಿಶೇಷ ತರಬೇತಿ ಮಾರ್ಗಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಟ್ರಸ್ಟ್‌ನ ಕಾರ್ಯದರ್ಶಿ ನಂದಿನಿ ನರಸಿಂಹಮೂರ್ತಿ ಮಾತನಾಡಿ, ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ಎಐ ಸಾಧನವನ್ನು ಕಲಿಸುವುದು ನಮ್ಮ ಉದ್ದೇಶವಲ್ಲ. ಎಂಜಿನಿಯರಿಂಗ್ ಮೂಲತತ್ವಗಳು, ವಿಷಯಾಧಾರಿತ ಜ್ಞಾನ, ಜವಾಬ್ದಾರಿಯುತ ಎಐ ಬಳಕೆ ಹಾಗೂ ವಿದ್ಯಾರ್ಥಿಗಳ ಪ್ರಾಯೋಗಿಕ ಸಾಮರ್ಥ್ಯವನ್ನು ವೃದ್ಧಿಸುವ ಗುರಿಯೊಂದಿಗೆ ಈ ಬೋಧನಾ ಕ್ರಮವನ್ನು ರೂಪಿಸಲಾಗಿದೆ ಎಂದರು.

# ನಾಯಕರ ನಾಲಿಗೆಗೆ ಹಿಡಿತವಿದ್ದರೆ ಪ್ರಜಾಪ್ರಭುತ್ವಕ್ಕೆ ಗೌರವ ಹೆಚ್ಚುತ್ತದೆ



| ಶಿವಬಸಪ್ಪ ಗು ಜಂಗಾಲಿ



ಪ್ರಜಾಪ್ರಭುತ್ವ ಎನ್ನುವುದು ಕೇವಲ ಚುನಾವಣೆಗಳ ಹಬ್ಬವಲ್ಲ; ಅದು ಸಂವಿಧಾನದ ಮೌಲ್ಯಗಳ ಮೇಲೆ ನಿಂತಿರುವ ಜನವಿಶ್ವಾಸದ ಮಹಾಗೋಪುರ. ಆ ಗೋಪುರವನ್ನು ಭದ್ರವಾಗಿ ನಿಲ್ಲಿಸುವ ಶಕ್ತಿ ಜನರ ಮತದಲ್ಲಿದ್ದರೆ, ಅದಕ್ಕೆ ಘನತೆಯನ್ನು ತಂದುಕೊಡುವ ಜವಾಬ್ದಾರಿ ನಾಯಕರ ಮಾತುಗಳಲ್ಲಿ ಅಡಗಿದೆ. ನಾಯಕನ ಪ್ರತಿಯೊಂದು ಮಾತು ಲಕ್ಷಾಂತರ ಜನರ ಮನಸ್ಸಿನಲ್ಲಿ ಪ್ರತಿಧ್ವನಿಸುತ್ತದೆ. ಆದ್ದರಿಂದ ನಾಯಕನ ನಾಲಿಗೆಗೆ ಹಿಡಿತವಿದ್ದರೆ ಪ್ರಜಾಪ್ರಭುತ್ವಕ್ಕೆ ಗೌರವ ಹೆಚ್ಚುತ್ತದೆ; ಇಲ್ಲದಿದ್ದರೆ ಅದೇ ನಾಲಿಗೆ ಸಮಾಜದಲ್ಲಿ ಭಿನ್ನಾಭಿಪ್ರಾಯ, ದ್ವೇಷ ಮತ್ತು ಅವಿಶ್ವಾಸದ ಬೀಜ ಬಿತ್ತುವ ಅಪಾಯವೂ ಇದೆ.

ನಾಯಕ ಎಂದರೆ ಕೇವಲ ಅಧಿಕಾರದ ಕುರ್ಚಿಯಲ್ಲಿ ಕುಳಿತ ವ್ಯಕ್ತಿಯಲ್ಲ. ಜನರಿಗೆ ದಾರಿ ತೋರಿಸುವ ವ್ಯಕ್ತಿತ್ವ, ಸಂಕಷ್ಟದಲ್ಲಿ ಧೈರ್ಯ ತುಂಬುವ ಧ್ವನಿ, ಸಮಾಜಕ್ಕೆ ಆದರ್ಶವಾಗುವ ನಡೆ-ನುಡಿ ಇವೆಲ್ಲವೂ ನಾಯಕತ್ವದ ನಿಜವಾದ ಅರ್ಥಗಳು. ನಾಯಕನ ಮಾತುಗಳಲ್ಲಿ ಸಂಯಮ, ಸೌಜನ್ಯ ಮತ್ತು ಹೊಣೆಗಾರಿಕೆ ಇದ್ದಾಗ ಜನರು ಅವರ ಮೇಲೆ ವಿಶ್ವಾಸ ಬೆಳೆಸುತ್ತಾರೆ. ಆದರೆ ಅವಹೇಳನಕಾರಿ, ಪ್ರಚೋದನಕಾರಿ ಅಥವಾ ಅಸಂಯಮಿತ ಮಾತುಗಳು ಆ ವಿಶ್ವಾಸವನ್ನೇ ನಿಧಾನವಾಗಿ ಕುಗ್ಗಿಸುತ್ತವೆ.

ನಾಲಿಗೆಗೆ ಗಾಯವಾದರೆ ಕೆಲವು ದಿನಗಳಲ್ಲಿ ಗುಣವಾಗಬಹುದು. ಆದರೆ ನಾಲಿಗೆಯಿಂದ ಹೊರಬಂದ ಕಟುವಾದ ಪದಗಳು ಮನಸ್ಸಿಗೆ ಮಾಡಿದ ಗಾಯ ವರ್ಷಗಳಾದರೂ ಮಾಯವಾಗುವುದಿಲ್ಲ. ನಾಯಕರು ಉಚ್ಚರಿಸುವ ಪ್ರತಿಯೊಂದು ಪದವೂ ಸಾವಿರಾರು ಯುವಕರಿಗೆ ಮಾದರಿಯಾಗುತ್ತದೆ. ಆದ್ದರಿಂದ ಮಾತುಗಳ ಆಯ್ಕೆ ಕೇವಲ ರಾಜಕೀಯ ಕೌಶಲ್ಯವಲ್ಲ; ಅದು ಸಾಮಾಜಿಕ ಹೊಣೆಗಾರಿಕೆಯೂ ಹೌದು.

ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳು ಸಹಜ. ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ತೀವ್ರವಾದ ಚರ್ಚೆಗಳು ನಡೆಯಬಹುದು. ನೀತಿಗಳ ಬಗ್ಗೆ ಟೀಕೆಗಳೂ ಇರಬಹುದು. ಆದರೆ ಟೀಕೆ ವ್ಯಕ್ತಿಯ ಘನತೆಯನ್ನು ಹಾಳು ಮಾಡುವಂತಿರಬಾರದು. ವಾದಗಳು ವಿಚಾರಗಳ ಸುತ್ತ ನಡೆಯಬೇಕು; ವ್ಯಕ್ತಿಗಳ ವಿರುದ್ಧದ ಅವಹೇಳನವಾಗಿ ಮಾರ್ಪಡಬಾರದು. ವಿಚಾರಗಳಿಗೆ ಉತ್ತರ ನೀಡುವ ಸಂಸ್ಕೃತಿ ಬೆಳೆದರೆ ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ; ವೈಯಕ್ತಿಕ ನಿಂದನೆಗಳ ಸಂಸ್ಕೃತಿ ಬೆಳೆದರೆ ಅದು ದುರ್ಬಲವಾಗುತ್ತದೆ.




ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಒಂದು ಮಾತು ಕ್ಷಣಾರ್ಧದಲ್ಲಿ ಕೋಟ್ಯಂತರ ಜನರಿಗೆ ತಲುಪುತ್ತದೆ. ಹಿಂದೆ ಒಂದು ಸಭೆಯಲ್ಲಿ ಹೇಳಿದ ಮಾತು ಅಲ್ಲಿಯೇ ಉಳಿಯುತ್ತಿತ್ತು. ಈಗ ಒಂದು ವಾಕ್ಯ ದೇಶದ ಮೂಲೆಮೂಲೆಗೂ ಹರಡುತ್ತದೆ. ಆದ್ದರಿಂದ ನಾಯಕರು ಮಾತನಾಡುವಾಗ ಪ್ರತಿಯೊಂದು ಪದದ ಪರಿಣಾಮವನ್ನು ಯೋಚಿಸಲೇಬೇಕು. ಒಂದು ಅಜಾಗರೂಕ ಹೇಳಿಕೆ ಸಮಾಜದಲ್ಲಿ ಉದ್ವಿಗ್ನತೆಯನ್ನು ಉಂಟುಮಾಡಬಹುದು; ಒಂದು ಸಮತೋಲನದ ಮಾತು ಶಾಂತಿಯನ್ನು ಕಾಪಾಡಬಹುದು.

ನಾಯಕತ್ವದ ನಿಜವಾದ ಶಕ್ತಿ ಜೋರಾಗಿ ಮಾತನಾಡುವುದರಲ್ಲಿ ಇಲ್ಲ; ಸರಿಯಾದ ಸಮಯದಲ್ಲಿ ಸರಿಯಾದ ಮಾತು ಹೇಳುವುದರಲ್ಲಿ ಇದೆ. ಕೋಪವನ್ನು ಪ್ರಚೋದಿಸುವುದು ಸುಲಭ, ಆದರೆ ಸಹನೆಗೆ ಪ್ರೇರೇಪಿಸುವುದು ದೊಡ್ಡ ನಾಯಕತ್ವ. ಜನರನ್ನು ವಿಭಜಿಸುವುದು ಕ್ಷಣಗಳ ಕೆಲಸ; ಆದರೆ ಅವರನ್ನು ಒಂದೇ ಗುರಿಯಡಿ ಒಗ್ಗೂಡಿಸುವುದು ನಿಜವಾದ ಸಾಧನೆ.

ನಮ್ಮ ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದೆ. ಆದರೆ ಸ್ವಾತಂತ್ರ್ಯದ ಜೊತೆಗೆ ಜವಾಬ್ದಾರಿಯೂ ಬರುತ್ತದೆ. ವಿಶೇಷವಾಗಿ ಸಾರ್ವಜನಿಕ ಜೀವನದಲ್ಲಿರುವ ನಾಯಕರಿಗೆ ಈ ಜವಾಬ್ದಾರಿ ಇನ್ನಷ್ಟು ದೊಡ್ಡದು. ಅವರ ಮಾತುಗಳು ಸಮಾಜದ ವಿವಿಧ ವರ್ಗಗಳ ನಡುವೆ ಗೌರವ, ಸಹಬಾಳ್ವೆ ಮತ್ತು ಪರಸ್ಪರ ನಂಬಿಕೆಯನ್ನು ಬೆಳೆಸುವಂತಿರಬೇಕು.

ಇತಿಹಾಸವನ್ನು ಗಮನಿಸಿದರೆ, ಅನೇಕ ಮಹಾನ್ ನಾಯಕರು ತಮ್ಮ ಸಂಯಮಿತ ಮಾತುಗಳಿಂದಲೇ ಜನಮನ ಗೆದ್ದಿದ್ದಾರೆ. ಸಂಕಷ್ಟದ ಸಂದರ್ಭದಲ್ಲೂ ಅವರು ಕೋಪದ ಭಾಷೆಯನ್ನು ಬಳಸಲಿಲ್ಲ; ಆಶಾಭಾವನೆಯ ಭಾಷೆಯನ್ನು ಬಳಸಿದರು. ಅದಕ್ಕಾಗಿಯೇ ಅವರ ಮಾತುಗಳು ಇಂದಿಗೂ ಸ್ಫೂರ್ತಿಯ ಮೂಲವಾಗಿವೆ. ನಾಯಕನ ಶ್ರೇಷ್ಠತೆ ಅವನು ಎಷ್ಟು ಜೋರಾಗಿ ಮಾತನಾಡುತ್ತಾನೆ ಎಂಬುದರಲ್ಲಿ ಅಲ್ಲ; ಅವನು ಎಷ್ಟು ವಿವೇಕದಿಂದ ಮಾತನಾಡುತ್ತಾನೆ ಎಂಬುದರಲ್ಲಿ ಇದೆ.

ಯುವಜನತೆ ಇಂದು ನಾಯಕರನ್ನು ಗಮನಿಸುತ್ತಿದೆ. ಅವರು ನಾಯಕನ ಭಾಷೆಯನ್ನು, ನಡವಳಿಕೆಯನ್ನು, ಸಾರ್ವಜನಿಕ ಸಂಸ್ಕೃತಿಯನ್ನು ಅನುಕರಿಸುವ ಸಾಧ್ಯತೆ ಹೆಚ್ಚು. ನಾಯಕರು ಸಂಯಮದಿಂದ ಮಾತನಾಡಿದರೆ ಯುವಕರೂ ಸಂವಾದದ ಸಂಸ್ಕೃತಿಯನ್ನು ಕಲಿಯುತ್ತಾರೆ. ನಾಯಕರು ಕಟುವಾಗಿ ಮಾತನಾಡಿದರೆ ಅದೇ ಭಾಷೆ ಸಮಾಜದೊಳಗೂ ಹರಡುತ್ತದೆ. ಹೀಗಾಗಿ ನಾಯಕನ ಪ್ರತಿಯೊಂದು ಪದ ಮುಂದಿನ ತಲೆಮಾರಿನ ಸಾಮಾಜಿಕ ಸಂಸ್ಕೃತಿಯನ್ನು ರೂಪಿಸುವ ಸಾಮರ್ಥ್ಯ ಹೊಂದಿದೆ.

ಮಾಧ್ಯಮಗಳ ಪಾತ್ರವೂ ಇಲ್ಲಿ ಮಹತ್ವದ್ದಾಗಿದೆ. ಸಮಾಜಕ್ಕೆ ಒಗ್ಗಟ್ಟನ್ನು ತರುವ ವಿಚಾರಗಳಿಗೆ ಹೆಚ್ಚು ಆದ್ಯತೆ ನೀಡಿದರೆ ಆರೋಗ್ಯಕರ ರಾಜಕೀಯ ಸಂಸ್ಕೃತಿ ಬೆಳೆಯುತ್ತದೆ. ಪ್ರಚೋದನಕಾರಿ ಹೇಳಿಕೆಗಳಿಗೆ ಮಾತ್ರ ಹೆಚ್ಚು ಪ್ರಚಾರ ಸಿಕ್ಕರೆ ಸಂಯಮಿತ ನಾಯಕತ್ವಕ್ಕೆ ಪ್ರೋತ್ಸಾಹ ಕಡಿಮೆಯಾಗುತ್ತದೆ. ಆದ್ದರಿಂದ ಸಾರ್ವಜನಿಕ ಚರ್ಚೆಗಳು ವಿಚಾರಾಧಾರಿತವಾಗಿರುವುದು ಅಗತ್ಯ.

ಜನರಿಗೂ ಇಲ್ಲಿ ಜವಾಬ್ದಾರಿ ಇದೆ. ನಾವು ನಾಯಕರನ್ನು ಅವರ ಮಾತಿನ ಸೌಜನ್ಯ, ಕೆಲಸದ ಗುಣಮಟ್ಟ ಮತ್ತು ಪ್ರಾಮಾಣಿಕತೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಿದರೆ ರಾಜಕೀಯದ ಭಾಷೆಯೂ ಬದಲಾಗುತ್ತದೆ. ಕೇವಲ ಆಕ್ರೋಶದ ಭಾಷೆಯನ್ನು ಮೆಚ್ಚುವುದಕ್ಕಿಂತ, ಪರಿಹಾರಗಳನ್ನು ಸೂಚಿಸುವ ನಾಯಕತ್ವವನ್ನು ಪ್ರೋತ್ಸಾಹಿಸಬೇಕು.

ಮಾತುಗಳು ಸೇತುವೆಯನ್ನೂ ಕಟ್ಟಬಹುದು, ಗೋಡೆಯನ್ನೂ ಕಟ್ಟಬಹುದು. ಒಂದು ವಾಕ್ಯ ಸ್ನೇಹ ಬೆಳೆಸಬಹುದು; ಮತ್ತೊಂದು ವಾಕ್ಯ ದ್ವೇಷವನ್ನು ಉಂಟುಮಾಡಬಹುದು. ಆದ್ದರಿಂದ ನಾಯಕನ ನಾಲಿಗೆ ಕೇವಲ ವೈಯಕ್ತಿಕ ವಿಷಯವಲ್ಲ; ಅದು ರಾಷ್ಟ್ರದ ಸಾಮಾಜಿಕ ವಾತಾವರಣವನ್ನು ಪ್ರಭಾವಿಸುವ ಶಕ್ತಿ. ಮಾತುಗಳು ಮಿತಿಯೊಳಗಿದ್ದರೆ ಗೌರವ ಬೆಳೆಯುತ್ತದೆ; ಗೌರವ ಬೆಳೆದರೆ ನಂಬಿಕೆ ಬಲಗೊಳ್ಳುತ್ತದೆ; ನಂಬಿಕೆ ಬಲಗೊಂಡರೆ ಪ್ರಜಾಪ್ರಭುತ್ವ ಇನ್ನಷ್ಟು ದೃಢವಾಗುತ್ತದೆ.

ಪ್ರಜಾಪ್ರಭುತ್ವದ ಸೌಂದರ್ಯ ವೈವಿಧ್ಯತೆಯಲ್ಲಿ ಇದೆ. ವಿಭಿನ್ನ ಅಭಿಪ್ರಾಯಗಳನ್ನು ಗೌರವಿಸುವುದು ಅದರ ಜೀವಾಳ. ಆ ಗೌರವವನ್ನು ಉಳಿಸುವ ಮೊದಲ ಕರ್ತವ್ಯ ಜನಪ್ರತಿನಿಧಿಗಳದ್ದೇ. ನಾಯಕನ ಭಾಷೆಯಲ್ಲಿ ಸಂಸ್ಕಾರ ಇದ್ದರೆ ರಾಜಕೀಯದಲ್ಲೂ ಸಂಸ್ಕೃತಿ ಉಳಿಯುತ್ತದೆ. ನಾಯಕನ ಮಾತಿನಲ್ಲಿ ಶಾಂತಿ ಇದ್ದರೆ ಸಮಾಜದಲ್ಲೂ ಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ.

ನಾಯಕತ್ವದ ನಿಜವಾದ ಅಳತೆ ಅಧಿಕಾರವಲ್ಲ; ಮಾತಿನ ಸಂಯಮ. ಜನರನ್ನು ಗೆಲ್ಲುವುದು ಘೋಷಣೆಗಳಿಂದಲ್ಲ, ಗೌರವದಿಂದ. ಹೃದಯಗಳನ್ನು ಗೆಲ್ಲುವುದು ಕಟುವಾದ ಪದಗಳಿಂದಲ್ಲ, ಕರುಣೆಯ ಮಾತುಗಳಿಂದ. ಆದ್ದರಿಂದ ಪ್ರತಿಯೊಬ್ಬ ನಾಯಕನು ನೆನಪಿಟ್ಟುಕೊಳ್ಳಬೇಕಾದ ಸತ್ಯ ಒಂದೇ ನಾಯಕರ ನಾಲಿಗೆಗೆ ಹಿಡಿತವಿದ್ದರೆ ಪ್ರಜಾಪ್ರಭುತ್ವಕ್ಕೆ ಗೌರವ ಹೆಚ್ಚುತ್ತದೆ; ಗೌರವ ಹೆಚ್ಚಿದಾಗ ದೇಶದ ಪ್ರಜಾಪ್ರಭುತ್ವ ಇನ್ನಷ್ಟು ಸದೃಢವಾಗುತ್ತದೆ.

# ಅಚಲ ಇಚ್ಛಾಶಕ್ತಿಯ ಟರ್ಮಿನೇಟರ್: ಆರ್ನಾಲ್ಡ್



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 87

ಆಸ್ಟ್ರಿಯಾದ ಕುಗ್ರಾಮವೊಂದರಲ್ಲಿ ಬಡತನದ ಕಾರ್ಮೋಡಗಳ ನಡುವೆ ಜನಿಸಿದ ಬಾಲಕನೊಬ್ಬ, ಜಾಗತಿಕ ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಹೆಸರಾಗುತ್ತಾನೆ ಎಂಬುದು ಅಂದು ಅಸಾಧ್ಯದ ಮಾತಾಗಿತ್ತು. ಆದರೆ, ಆರ್ನಾಲ್ಡ್ ಶ್ವಾರ್ಜೆನೆಗರ್ ಎಂಬ ಅಪ್ರತಿಮ ಚೇತನಕ್ಕೆ ಅಸಾಧ್ಯ ಎಂಬ ಪದವೇ ನಿಘಂಟಿನಲ್ಲಿರಲಿಲ್ಲ. ಇವರ ಬದುಕು ಕೇವಲ ಮಾಂಸಖಂಡಗಳ ಪ್ರದರ್ಶನವಲ್ಲ; ಅದು ಮಾನವನ ಅದಮ್ಯ ಚೇತನ ಮತ್ತು ಅಚಲ ಇಚ್ಛಾಶಕ್ತಿಯ ಮಹಾಕಾವ್ಯ.

ಬಾಲ್ಯದಲ್ಲಿ ಕನಿಷ್ಠ ಸೌಲಭ್ಯಗಳಿಲ್ಲದ ಮನೆಯಲ್ಲಿ ಬೆಳೆದರೂ, ಆರ್ನಾಲ್ಡ್ ಅವರ ಕನಸುಗಳು ಮಾತ್ರ ಹಿಮಾಲಯದಂತೆ ಎತ್ತರವಾಗಿದ್ದವು. ದೈಹಿಕ ಶಿಕ್ಷಣದ ತಪಸ್ಸಿಗೆ ಕುಳಿತ ಅವರು, ಬೆವರಿನ ಹನಿಗಳನ್ನೇ ಯಶಸ್ಸಿನ ಮುತ್ತುಗಳನ್ನಾಗಿ ಪರಿವರ್ತಿಸಿದರು. ಸತತ ಏಳು ಬಾರಿ ಮಿಸ್ಟರ್ ಒಲಿಂಪಿಯಾ ಪಟ್ಟ ಅಲಂಕರಿಸಿದ ಇವರು, ದೇಹದಾರ್ಢ್ಯ ಕಲೆಗೆ ಹೊಸ ಆಯಾಮ ನೀಡಿದರು. ಇವರ ಪಾಲಿಗೆ ಜಿಮ್ ಎಂಬುದು ಕೇವಲ ವ್ಯಾಯಾಮ ಶಾಲೆಯಾಗಿರಲಿಲ್ಲ, ಅದು ಭವಿಷ್ಯವನ್ನು ಕೆತ್ತುವ ಶಿಲ್ಪಕಲಾ ಕೇಂದ್ರವಾಗಿತ್ತು.

ಕ್ರೀಡಾ ಲೋಕದ ಶ್ರೇಷ್ಠತೆಯ ನಂತರ ಹಾಲಿವುಡ್ ಪ್ರವೇಶಿಸಿದಾಗ, ಭಾಷೆ ಮತ್ತು ವಿಲಕ್ಷಣ ಉಚ್ಚಾರಣೆಯ ನೆಪದಲ್ಲಿ ತಿರಸ್ಕಾರದ ಮಾತುಗಳು ಕೇಳಿಬಂದವು. ಆದರೆ, ಅದೇ ಉಚ್ಚಾರಣೆಯು ಮುಂದೆ ಟರ್ಮಿನೇಟರ್ ರೂಪದಲ್ಲಿ ಜಗತ್ತನ್ನೇ ಮಂತ್ರಮುಗ್ಧಗೊಳಿಸಿತು. ನಿನಗೆ ನಟಿಸಲು ಸಾಧ್ಯವಿಲ್ಲ ಎಂದವರಿಗೆ



ತನ್ನ ಅಭಿನಯದ ಮೂಲಕವೇ ಉತ್ತರಿಸಿದ ಆರ್ನಾಲ್ಡ್, ಶೂನ್ಯದಿಂದ ವಿಶ್ವದ ಶ್ರೇಷ್ಠ ಮಟ್ಟಕ್ಕೇರಿದ ಲೋಹದ ಮನುಷ್ಯನಾದರು.

ಕ್ರೀಡೆಯಿಂದ ಕಲಾಜಗತ್ತಿಗೆ, ಅಲ್ಲಿಂದ ರಾಜಕೀಯದ ಗದ್ದುಗೆಯವರೆಗೆ ಅವರ ಪಯಣ ರೋಚಕ. ಯಶಸ್ಸಿಗೆ ಯಾವುದೇ ಅಡ್ಡದಾರಿ ಇಲ್ಲ, ಕೇವಲ ಕಠಿಣ ಪರಿಶ್ರಮ ಮತ್ತು ಸ್ಪಷ್ಟ ಗುರಿ ಮಾತ್ರ ದಾರಿ ಎಂಬುದು ಅವರ ಜೀವನ ಸಂದೇಶ. ಸೋಲನ್ನೇ ಸೋಲಿಸಿ, ಟೀಕೆಗಳನ್ನೇ ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡ ಇವರ ಬದುಕು, ಸಾಧನೆಯ ಹಾದಿಯಲ್ಲಿ ಎಡವಿಬಿದ್ದವರಿಗೆ ದಾರಿದೀಪ. ಛಲವಿದ್ದರೆ ಮನುಷ್ಯ ವಿಧಿಯ ಬರಹವನ್ನೇ ಬದಲಿಸಬಲ್ಲ ಎಂಬುದಕ್ಕೆ ಆರ್ನಾಲ್ಡ್ ಅವರ ಜೀವನವೇ ಜ್ವಲಂತ ಸಾಕ್ಷಿ. ಈ ಸ್ಫೂರ್ತಿಯ ಗಾಥೆಯು ಪ್ರತಿ ಯುವ ಮನಸ್ಸಿನಲ್ಲೂ ನವಚೈತನ್ಯದ ಕಿಚ್ಚನ್ನು ಹಚ್ಚುವುದರಲ್ಲಿ ಸಂಶಯವಿಲ್ಲ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,